ಕರ್ಮವೀರ

ಹುಬ್ಬಳ್ಳಿ ತಾ. ೧೨-೧೨-೪೮

ಸಂಪುಟ ೨೦ | | ಸಂಚಿಕೆ [illegible]

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು:
ಹ. ರಾ. ಪುರೋಹಿತ]

[ಸಂಸ್ಥಾಪಕರು—
ರಂ. ರಾ. ದಿವಾಕರ

★

ನಿಜವಾದ ಪ್ರೇಮ ಸಮುದ್ರದಂತೆ ಅಪಾರವಾಗಿದೆ. ಅದು ನಮ್ಮ ಅಂತರಂಗದಲ್ಲಿ ಏರುತ್ತ ಉಕ್ಕುತ್ತ ಹೊರಗೆ ವಿಸ್ತರಿಸುತ್ತ ಹೋಗಿ ಎಲ್ಲ ಗಡಿ ಮಿತಿಗಳನ್ನು ದಾಟಿ ಮುಂಬರಿಸು ಇಡಿ ಜಗತ್ತನ್ನೇ ವ್ಯಾಪಿಸುವದು.

—ಮಹಾತ್ಮಾ ಗಾಂಧಿ

★

ಮನುಷ್ಯನಲ್ಲಿ ಬರೆ ಡಾಗದ ಕ್ರೋಧವೂ ಇರಬೇಕಾಗುತ್ತದೆ. ಅಮರ್ಷಶೂನ್ಯನಾದವನ ಗೆಳೆತನಕ್ಕಾಗಲಿ ಹಗೆತನಕ್ಕಾಗಲಿ ಜನರು ಏನೂ ಬೆಲೆ ಕೊಡುವದಿಲ್ಲ..


—ಭಾರವಿ

★

ನಮ್ಮ ಕಾಲವನ್ನು ದೂರುವದು, ಸದ್ಯದ ರಾಜದಂಡಧಾರಿಗಳನ್ನು ಕುರಿತು ಗೊಣಗುವದು, ಕಳೆದು ಹೋದ ಕಾಲವನ್ನು ಕೊಂಡಾಡುವದು, ಭಾವೀ ಉತ್ಕರ್ಷದ ಗಗನಸೌಧಗಳನ್ನು ಕಟ್ಟುವದು, ಇವು ಮನುಷ್ಯಕುಲದ ಅತ್ಯಧಿಕ ಭಾಗಕ್ಕೆ ಸಹಜ ಪ್ರವೃತ್ತಿ.

—ಬರ್ಕ್

★



ಕೇಂದ್ರಮಂತ್ರಿ ದಿವಾಕರರು

—★—

ಸ್ವಾತಂತ್ರ್ಯ ಸಮರದಲ್ಲಿ ಅಹೋರಾತ್ರ ಶ್ರಮಿಸಿದ ಸಾಹಸಿಗಳೂ ರಚನಾತ್ಮಕ ಕಾರ್ಯಧುರಂಧರರೂ ರಾಜಕಾರಣ ಪಟುಗಳೂ ಅಧ್ಯಾತ್ಮ ವಿದ್ಯಾನಿಧಿಗಳೂ ಎನಿಸಿ, ಕರ್ನಾಟಕದ ಏಕೀಕರಣ ಮುಂತಾದ ನಾನಾ ಕಾರ್ಯಕ್ಷೇತ್ರಗಳಲ್ಲಿ ತಮ್ಮ ನಿಃಸ್ವಾರ್ಥ ಸೇವೆಯಿಂದ ಕನ್ನಡಿಗರ ಕಣ್ಮಣಿಯೆನಿಸಿದ ಶ್ರೀ ದಿವಾಕರ ರಂಗರಾಯರು ಭಾರತ ಸರಕಾರದ ಸುದ್ದಿ ಮತ್ತು ಆಕಾಶವಾಣಿ ಖಾತೆಯ ಮಂತ್ರಿಪದವಿಯ ಅಧಿಕಾರ ಸ್ವೀಕಾರ ೭-೧೨-೪೮ ರಲ್ಲಿ ಮಾಡಿದರು.



KARMAVEER - KANNADA ILLUSTRATED WEEKLY, HUBLI

ದೃಶ್ಯ ೧

[ವೇದಿಕೆಯು ೩ ಗಂಟೆಯ ಸಮಯ. ಒಬ್ಬ ವಕೀಲರ ಮನೆಯಲ್ಲಿ ಅವರ ಕಛೇರಿ ಕೋಣೆಯ ದೃಶ್ಯ. ಕಾಗದ ಪತ್ರಗಳು ಅಸ್ತವ್ಯಸ್ತ. ಬರೆಯುವ ಮೇಜಿನ ಮೇಲೆ ಒಂದು Timepiece ನ್ನು ಇಟ್ಟು ಹಾಕಿದೆ. ಕಿರಿ ಮೇಲಕ್ಕೆ ಮೇಜಿನ ವಕೀಲ ರಾಯರು ಕುಳಿತುಕೊಂಡಿದ್ದಾರೆ, ಅವರ ಗುಮಾಸ್ತ ಬರೆಯುತ್ತಿದ್ದಾನೆ, ರಾಯರ ಇದಿರು ಬೆಳ್ಳಗಿರುವ ಕನ್ನಡಕ ಹಾಕಿದ್ದಾನೆ. ಕಿರಿ ವಯಸ್ಸಿನ ಕಕ್ಷಿದಾರನೊಬ್ಬನು ಬಾಗಿಲಿನಿಂದ ನಗಾ ಗೋಚರಿಸ್ಸು. ನಾನು ಇಂಥಾ ಕೆಲಸ ಮಾಡೋದಿಲ್ಲ, ನನ್ನ ಕಾಗದವನ್ನ ಕಳಿಸಿ ಕೊಡಿ ಎನ್ನುತ್ತ ಕಾಗದಗಳನ್ನು ಅವನ ಮೇಲೆ ಬಿಸಾಡುತ್ತ "ಬೆಂಗಳೂರೀ ಇವನ್ನ ಯಾರು ಒಳಗೆ ಬಿಟ್ಟಿರೊ!" ಎಂದು ಗಟ್ಟಿಯಾಗಿ ಕೂಗುತ್ತಾನೆ]

ಕಕ್ಷಿಗಾರ :– (ಅತ್ಯಂತ ವಿನಯದಿಂದ) ತಪ್ಪೇನು ಇಲ್ಲ ತಪ್ಪಾಗಿದ್ದರೆ ಕ್ಷಮಿಸಿರಿ, ರಾಯ್ರು ರಾಯ್ರು ನಿಮ್ಮ ಹಣ ಹೆಚ್ಚು ಮಾಡಿದರ ಗೆದಿ ಹೋದರು ಬಡವ ಅಂತಾ ಎಲ್ಲಾರೂ ಹೇಳ್ತಿದ್ರು–

ವ. ರಾಯ್ರು:– ನಾನು ಎಂದೂ ಕೇಸ್ ಕೋಲೆ ಮಾಡಿಲ್ಲ. ಅಲ್ಲಿ ಇಂಥಾದಕ್ಕ ಬ್ಯಾಡ ನನಗ.

ಕಕ್ಷಿಗಾರ :– ರಾಯ್ರು ಮಾಡಿದರ ಎಂಥಾ ದ್ದೇನು–

ವ. ರಾಯ್ರು:– (ಸಿಡುಕಿನಿಂದ) ನನಗೆ ಗೊತ್ತಿದೆ. ನಾನು ಮಾಡಿದ್ರ ಬೇಕಾದಷ್ಟು ಅಗ್ತದ!! (ಗೆಳೆಯರಿಗೆ) ನಿಮಗೊತ್ತಿದೆ ಏನು, ಸುಬ್ಬ? ನಾ ಕಾಲೇಜಿನಾಗ ಎಲ್ ಎಲ್ ಬಿ ಗೆ ಇದ್ದಾಗ: ಲೋಕಮಾನ್ಯ ತಿಲಕರು ಒಮ್ಮೆ ಹೇಳಿದರು, 'ಯಾಕ ನೀ ಸುಳ್ಳೇ ವಕೀಲೀ ಮಾಡ್ತೀ, ನನ್ನ ಕರ್ನಾಟಕ private Secretary ಆಗು' ಅಂತ. ಆಗ ಏನಾದಾಗಿತ್ತೇನಪ, ಆದರೆ ಯಾಕೆ ಸುಮ್ಮನೆ ಮುಂದೀ ಸೆಕ್ರೆಟರಿ ಆಗೋದು ಅಂತ ಬಿಟ್ಟೆ. ಅಲ್ಲ, ಇವನ್ನ ಯಾಕ ಹೇಳ್ತೀನಿ ಅಂದ್ರ ಲೋಕಮಾನ್ಯರಿಗೆ ನ ಹಿತ ಗೊತ್ತಿತ್ತು ನಾನು ಸುಳ್ಳು ಹೇಳುವವ ಅಲ್ಲ ಅಂತ. (ಕಕ್ಷಿಗಾರನಿಗೆ) ತಕ್ಷ ಮಾತಾಡಬೇಕು ನೋಡಿರಿ. ನನ್ನ ಜೀವನ ಹಟ ಇದೆ. ಯಾಕೊ ಸುಬ್ಬು, ಏನೊ ಒಮ್ಮೆ ಮನಸ್ಸು ಆಗಿ ಹುಟ್ಟೀತ–

ಸುಬ್ಬು: (ನಡುವೆಯೆ) ಸುಳ್ಳೇನು ರಾಯ್ರು ಅಲ್ಲ–ಅಂದ್ರ ಈಗಿನ ವಿಷಯ್ದಾಗ ಹಾಟ್ಟೋದು ಸಹಿತ ಪರತಂತ್ರ–

ವ. ರಾಯ್ರು:– (ಒಪ್ಪಿದವರಂತೆ) ಅಹುದಲ್ಲೋ? (ಒಮ್ಮೆಲೆ ಕಕ್ಷಿ) ಏನಂದಿ? ಅಲ್ಲೊ, ಸುಬ್ಬು, ಇಂಥಾ ಮಾತು ಆಡಬ್ಯಾಡ ನೀನು.

ಸುಬ್ಬು: – ಅಲ್ಲ – ನಕ್ಕ ಮಾತಾಡ್ತೇನಂದ್ರಿ ಅದಕ್ಕ ಹೇಳಿದೆ.

ಕಕ್ಷಿಗಾರ:– (ಹೆದರಿದ ದನಿಯಲ್ಲಿ) ಅಂದ್ರ– ಕಾಗದ–ಕಾರಕೂನಗ–

ವ. ರಾಯ್ರು:– ಕಾರಕೂನಗ ಕೊಡ್ರಿ. ಮಾರಿ ಕೋರ್ಟ ಕೊಡ್ರಿ, ಹೋಗ್ರಿ ನೀವು ದಯ ಮಾಡಿ. ನಾಳೆ ನನಗ ಸಿಟ್ಟಿಗೆ ಬರಿಸಬ್ಯಾಡ್ರಿ. ಇನ್ನೂ ನನಗ ಹೊರಗಿನ ಕೆಲಸ ಇದೆ.

ಸುಬ್ಬು:– (ಕಕ್ಷಿಗಾರಗೆ) ೩ಕ್ಕೆ ಮೀಟಿಂಗ ಇದೆ.

ವ. ರಾಯ್ರು :– ಅವರಿಗೇನು ಹೇಳ್ತಿ, ಸುಬ್ಬು? ನಂನಂ ಸಂಕಟ ನಮಗ.

[ಕಕ್ಷಿಗಾರ ಅನುಮಾನಿಸುತ್ತ ಹೋಗುವನು]

ಸುಬ್ಬು :– ಈ ಹೊತ್ತು ಮಾತ್ರ ರಾಯ್ರು ನಂ ಮನಸ್ಸಿಗೆ ಮೀಟಿಂಗ ಕರೆದರು. ಏನಾರೆ ಕೆಲಸ ಆಗೋದು ಮಾತ್ರ ಅಂತ ಬಂದೆ.

ವ. ರಾಯ್ರು:– ಸುಬ್ಬು, ನನ್ನ ಸ್ವಭಾವ ಹಾಗ ಅದ. ನಾಯೇನು ದೂಡ್ತೀನಿ ಅಂತ ಹೇಳಕೂಡದೇನು ಇಲ್ಲ. ಮಾಡೋದಿದ್ರ ಮಾಡ್ತೀನಿ ಅಂತ ಹೇಳ್ತೀನಿ, ಇಲ್ಲಾ ಅಂದ್ರ ನಾ ಮಾಡಂಬ್ಯ ನಮ್ಮ ನೀ ಅಯ್ಯ, ನಿನಗೇನ ನಿಜ್ಜದ?

ಸು.ಬ್ಬು:– ನಿಂ ಹಾಂಗ ಹಟ ಹಿಡಿದಿದ್ರ ಕೆಲಸ ಆಗೋದೇ ಇಲ್ಲ, ರಾಯ್ರು.

ವ. ರಾಯ್ರು:– ನನ್ನ ಹಟ ಅಂದ್ರ ಹಾಂಗ ನೋಡು, ಸುಬ್ಬು. ಗಾಂಧಿಯವರ ಹಾಂಗ ಎಲ್ಲಾ ಸಹಿತ ಕೊಡಲಿಕ್ಕೆ ತಯಾರ ಇದ್ದೀನಿ. (ನಗೆಯಿಂದ) ಮಾತು ಹೇಳಿದನೊ, ಸುಬ್ಬು, ಹೆದರಬ್ಯಾಡ. ನನ್ನ ಯಾರು ಹೊಡೀಲಿಕ್ಕೆ ಬರ್ತಾರ?

ಸುಬ್ಬು:– ರಾಯ್ರು, ಇದೊಂದು ಸಂಸ್ಥಾ ನೀವು ನಡಸಿಕೊಂಡು ಹೋದರ ಕರ್ನಾಟಕ ಉಳಿಸಿಧಾಂಗ ಆಗ್ತದ ನೋಡಿರಿ.

(ಒಂದು ವಿನೋದ ಚಿತ್ರ)

ಕೆ ಕೇ ಕೈ ★ [ತಿರುಕಪತಿ ಬರೆದುದು]

ವ. ರಾಯ್ರು :– (ಅವನ ಹತ್ತಿರ ಕೂತು) ಹುಚ್ಚೊ ನೀನು ಸುಬ್ಬು, ನನಗೇನು ಕರ್ನಾಟಕ ಅಂತ ಸಂಕುಚಿತ ವಿಚಾರ ಇಲ್ಲ. ಇಡಿಯ ದೇಶದ ಹಲವಾಗಿಯೆ ಎಷ್ಟೋ ಕೆಲಸ ಮಾಡು ತಿದ್ದೆ ನಾನು. ಆದರೆ ನೋಡು ಸುಬ್ಬು, ಎಲ್ಲಾ ಕೆಲಸಕೆ ಒಬ್ಬನೆ ಮಾಡೋದಿದಂದ್ರ, what about the younger generation? ಹುಡುಗರು ಮುಂದೆ ಬರಬೇಕು. ಏನಂತೀ? ನನ್ನ ಹಟ ಅದ್ಯಾಕ ನನ್ನ ಹಟ ಅಂದೆ. ಹಿಂದೆ ೩ ವರ್ಷ ಕೆಲಸ ಮಾಡೋದು.

ಸುಬ್ಬು:- ೩ ಯ್ರು, ಒಮ್ಮೆ ನ್ಯಾಯ ಸ್ಥದ, ನೀವು ಕಾಂಗ್ರೆಸದೊಳಗ ಸೇರದ ಹ್ಯಾಂಗ ಉಳ್ಕೊಂಡಿರಿ ಅಂತ.

ವ. ರಾಯ್ರು:– (ನಗೆಯಿಂದ) ಪ್ಯಾಲಾ ಒಂದು ಬೇಕಲ್ಲ, ಸುಬ್ಬು. ಈಗ ನೋಡಿದ ಇಲ್ಲೋ? ಒಲ್ಲೆ ಅಂದರೂ ನಾನೇ ಕೇಸ್ ನಡಸಬೇಕು ಅಂತ ಬಂದಿದ್ದ.

ಸುಬ್ಬು:– ನಿಮ್ಮ ಯೋಗ್ಯತಾ ಗೊತ್ತದ ಅಂತ ಅವರು ಬರ್ತಾರೆ.

ವ. ರಾಯ್ರು:– (ಗುಟ್ಟನ್ನು ಹೇಳುವಂತೆ) ಸುಬ್ಬು, ಕಾಂಗ್ರೆಸಿನಾಗ ಆದರೇ ಹೋಗ ಲಿಲ್ಲ ನೋಡು, ನನಗ ಅಂತ ಹೇಳ್ತೀನಿ ಒಬ್ಬ ಗಾಂಧಿಯವರನ್ನ ಬಿಟ್ಟರ ಯಾರಲ್ಲಿ ಯೋಗ್ಯತಾ ಅದ ಅಂತ ತಿಳಿದೀರಿ. ಗಾಂಧೀಯೊಂದು ಒಪ್ಪಿಕೋತೀನಿ ನನಪ ಒಂದು ಗಡಿಯಾರ ಇಟಕೊಂಡು ವ್ಯಾಳ್ಯಾಕ ಸರಿಯಾಗಿ ಕೆಲಸ ಮಾಡುವವ ಧ್ವನಿಸ್ಯಾತ್ವ. ನನ್ನದೂ ಹಾಂಗೇ ಸ್ವಭಾವ. ನಿನ ಗೊತ್ತಿದೆ ಅಲ್ಲ, Time ಅಂದರೆ Time. ಮಿನಿಟಿಗೆ ಮಿನಿಟು–

ಸುಬ್ಬು- (ನಮ್ರತೆಯಿಂದ) ರಾಯ್ರು, ಅಂತೇ ಈ ಕೆಲಸ ನಿಮ್ಮಿಂದ ಆದರೇ ಆದೀತೂ ಅಂತ ನಮಗ ಆಶಾ. ಸಾಮಾನ್ಯ ಮನುಷ್ಯಗ ನೀಗಲಾರದ ಕೆಲಸ ಇದು.

ವ ರಾಯ್ರು:– ಹುಚ್ಚ ನೀನು, ಸುಬ್ಬು! ಯಾವ ಕೆಲಸ ಏನು? ಒಂದು ನಾಲ್ಕು ಬುದ್ಧಿವಂತ ಹುಡುಗರನ್ನ ಕೊಡು, Just four firstclass brains, ಏನಪ್ಪ ಸುಬ್ಬು, ಬೇಕಾದ್ದ ಕೆಲಸ ಮಾಡಿ ತೋರಿಸ್ತೀನಿ.

[ಹೊರಗಿನಿಂದ ಒಬ್ಬ ಯುವಕ ಬರುವನು. ರಾಯರನ್ನು ನೋಡಿ ತಡೆಯುವನು. ತಿಂಸು ಹೆದರುವನು]

ಯಾರು ನೀವು?

ಯುವಕ:–(ಆಶ್ಚರ್ಯದಿಂದ) ಮೀಟಿಂಗಿಗೆ ಅಂತ–

ವ. ರಾಯ್ರು:– ಮೀಟಿಂಗ? ಒಂದು ಹತ್ತು ಮೀಟಿಂಗ ಇರ್ತಾವ ನನಗ. ಯಾವ ಮೀಟಿಂಗಿ–ಯಾರು ನೀವು?

ಯುವಕ. (ಮೊದಲಿನಂತೆಯೆ) 'ಕೇಕೇಕೈ' ೩ಕ್ಕೆ ಗಂಟೆ.

ಸುಬ್ಬು: (ನಡುವೆಯೆ) ೩॥ ಗಂಟೆಗೆ ಅಂದ್ರ ಇಷ್ಟ ಲಗು ಯಾಕ ಬಂದಿರಿ?

ವ ರಾಯ್ರು:– ಇದೇ ನೋಡು, ಸುಬ್ಬು, ನಂ ಜನಾ ಅಂದ್ರ ಮುಂಚೆ ಬಂದರ ತಪ್ಪಲ್ಲ ಅಂತ ತಿಳಿತಾರ. ನಮಗ ೩॥ ತನಕ ಎರಡನೇ ಕೆಲಸ (ಒಮ್ಮೆಲೆ ಯುವಕನಿಗೆ) ಇಲ್ಲಿ ನೋಡ್ರಿ ಮಿಸ್ಟರ್, ೩॥ ಅಂದ್ರೆ ೩॥ ಒಂದು ಸೆಕೆಂಡ್ ಅತ್ತಿತ್ತ ಅಲ್ಲ ಬರ್ರಿ.. ಹೋಗ್ರಿ (ನಗೆಯಿಂದ) Don't misunderstand ಅಂ? ನನ್ನ ಸ್ವಭಾವ ಅದು. (ಯು. ನು ಹೋಗುವನು) ಬೇಕಾದ್ರ ನನ್ನ Weakness ಅನ್ನಿರಿ.

ಸುಬ್ಬು: ರಾಯ್ರು, ಇಂಥಾ ಗಟ್ಟಿ weakness ಏನವರು ಬೇಕು ನಮಗ ಅಂತಿನಿ.

ವ. ರಾಯ್ರು:– (ಎದ್ದು ತಿರುಗಾಡುತ್ತ ಕೃತಿನೋಡಿ ನಡೆದು ಮತ್ತೊಂದು ಕುರ್ಚಿಯಲ್ಲಿ ಕುಳಿತುಕೊಳ್ಳುತ್ತ) ಸುಬ್ಬು, ನನ್ನ ವಿಚಾರ ನಿನಗ ಅಂತೀ? ಉತ್ತಮ ಕೆಲಸಗಾರರನ್ನ first class brains ನನಪ, ತಯಾರ ಮಾಡೋದು, ಕೆಲಸ–ಕೇಕೋದು– ಕೈಕೊ ಕ್ಕೋದು ಕೇಕೇಕೈ ತಿಳೀತೇನೊ ಸುಬ್ಬು? ಕೇಕೇಕೈ ಅಂದ್ರ– ಅಲ್ಲ, ನನ್ನ ಪದ್ಧತಿ ಪ್ರಕಾರ ನಾ ಹೆಸರು ಕೊಟ್ಟೀನ- ಇಲ್ಲಾ ಅಂದ್ರ ಸುಸ್ಸಂಘ ಮುದಾಯ ವರ್ಧಮಾನಗಾರ–

ಸುಬ್ಬು: (ನಡುವೆಯೆ) ಇಲ್ಲ, ಇತ್ತೀಚಾದ ಉಲ್ ಮುಸಲ್ಮಿನ್– ಕಿತ್ತೀ ಬಜೀ ಕಾರ

ಛಾಠಿ– (ನಗೆಯಿಂದ) ಅಂಗೆ ಹೌದು, ರಾಯ್ರು, ಕೆಲಸ ಮಾಡದ್ರಿಗೆ ಕೆಲಸ ಮುಖ್ಯ–

ವ. ರಾಯ್ರು:– ಅದೇ ಅದೇ ಸುಬ್ಬು, ಈ ಸಂಸ್ಥಾನ್ಕ ನಿನ್ನ ನೋಡು ಅಂತೀ?

ಸುಬ್ಬು:– (ಅಭಿಮಾನದಿಂದ) ನೋಡ್ರಿ ರಾಯ್ರು, first class brains ಗೆ ಅಲ್ಲಿ ಸ್ಥಾನ.

ವ. ರಾಯ್ರು:-(ನಡುವೆಯೆ)ಸುಬ್ಬೂ ಇಲ್ಲದ ಅಜಂಡಾವ ಹಚ್ಚಬ್ಯಾಡ ನನಗ. ನಾ ಬರೇ ಎಲ್ಲಾ ಹೇಳಿಕೊಡವ, ನೀನೆ ಹಿರೇರಾಗಿರಿ ನೀವೆ ಅಧ್ಯಕ್ಷರಾಗಿರಿ ಅಂತ ನನಗ ಗಂಟು ಬೀಳೋದಿದ್ದರ ಈಗೇ ಹೇಳಿಬಿಡ್ತೀನಿ;ನನಗ ಬ್ಯಾಡ ಇದು, ಮೊದಲೇ ಸಕ್ಕ ಮಾತಾಡೋದು ನನ್ನ ಸ್ವಭಾವ ಸುಬ್ಬು.

ಸುಬ್ಬು:– (ನಿರಾಶೆಯ ದನಿಯಲ್ಲಿ) ಅಲ್ಲ, ರಾಯ್ರು, ಇಷ್ಟೆಲ್ಲ ಜನಕ್ಕ ಒಲ್ಲಿಕ್ಕೆ ಹೇಳೀನಿ, ಅವರೂ ಹೇಳಿದರು "ರಾಯರೇ ಮುಂದಾಗೋ ಹಾಂಗಿದ್ದರೇನೇ ಬರ್ತೀವಿ" ಅಂತ "ಇಲ್ಲದ್ರ ನಿಮ್ಮನ್ನ ಯಾಕ ಕರೀತಿದ್ದರು?" ಅಂತ ಹೇಳಿ ನಾ ಅವರನ್ನ ಒಪ್ಪಿಸೀನಿ ರಾಯ್ರು!

ವ. ರಾಯ್ರು:– (ಹಟದಿಂದ) ಉಸ್ಸಂ–

ಸುಬ್ಬು:– ರಾಯ್ರು ನನ್ನ ಮಾತಾದ್ರೂ ಕೇಳರಿ!

ವ ರಾಯ್ರು:–(ಸಿಟ್ಟಿನಿಂದ)ನನಗ ಇದೇನು ಬ್ಯಾಡೇ ಬ್ಯಾಡೋ ಸುಬ್ಬು! ಈ ವಾದಿ ಸೋದೇ ಬ್ಯಾಡ! ನನಗ ಸೇರೋದೇ ಇಲ್ಲ ಇದು– I want implicit obedience– ಹೇಳಿದ್ದನ್ನ ಕೇಳಿಕೊಂಡು ಮಾಡುವವರು ಬೇಕು ನನಗ. ಇಲ್ಲಿದ್ರ ಏನ್ನುಡೋದು first class brains ತಗೊಂಡು? ನಾ ಸ್ವಚ್ಛ ಕೈ ತೊಳಕೊಂಡು ಬಿಟ್ಟೆ. (ಎದ್ದು) ಸುಬ್ಬು ನಾ ಹೇಳ್ತೀನಿ ನಿನಗೆ, I clean wash my hands.

ಸುಬ್ಬು:-(ಎದ್ದು ಕ್ಷಮಾ ಯಾಚನೆಯ ದನಿಯಲ್ಲಿ) ರಾಯ್ರು, ನನ್ನ ಸೂಚನಾ ನಾ ತಿರುಗಿ ತಕ್ಕೊಂಡೆ.

ವ. ರಾಯ್ರು:- (ನಡುವೆಯೆ)ನನಗ ಬ್ಯಾಡೇ ಬ್ಯಾಡೊ ಸುಬ್ಬು ಸೂಚನಾ ಮಾಡ್ಬೇಕು ಅಂತ ನಿನಗ ಅನಿಸ್ತಾದ್ರೂ ಹ್ಯಾಂಗ?

ಸುಬ್ಬು- ಅಲ್ಲ, ರಾಯ್ರು, ನೀನೆ ಕೇಳಿದಿರಿ ಏನ್ಮಾಡ್ಬೇಕೆಂತ ಸುಬ್ಬೂ ಅಂತ.

ವ.ರಾಯ್ರು:-"ಹೇಳಿಧಾಂಗ ಮಾಡ್ತೀನಿ, ರಾಯ್ರು" ಅಂತ ಅನ್ನಬೇಕಾಗಿತ್ತು, ಸುಬ್ಬು! public life ದ spirit ಅದು ಅಪ ಒಮ್ಮೆ ಒಬ್ಬರು ನಮ್ಮ leader ಅಂತ ಗೊತ್ತಾದ ಮ್ಯಾಲೇ ಮುಗಿದುಹೋಯ್ತು. (ಕ್ಷಮಿಸುವವನಂತೆ) Alright, ಸುಬ್ಬು ಇದೊಂದ ಸಲ ಕ್ಷಮಿಸ್ತೀನಿ. ಒಳ್ಳೇದು, ಏನ್ಮಾಡ್ಬೇಕಾದ್ರೂ ಅಂತೀ?

ಸುಬ್ಬು:– (ಒದೆಸಿಕೊಂಡ ನಾಯಿಯಂತೆ) ನೀವು ಹೇಳಿಧಾಂಗ ಮಾಡ್ತೀನಿ ರಾಯ್ರು.

ವ. ರಾಯ್ರು:– (ಅವನ ಹತ್ತಿರ ಬಂದು) ಇದನ್ನ ಹೇಳಿದಿ, ಭಲೋ, ಮಾಡಿದಿ ನೋಡು. ಸುಬ್ಬು, ಯಾಕಂದ್ರ ನನ್ನದು ಒಂದು ವಿಚಿತ್ರ ಸ್ವಭಾವ. ಎಲ್ಲಾ ಕೆಲಸ ವ್ಯಾಳ್ಯೇಶಿರ ಆಗ ಬೇಕನ್ನ. ಒಂದು ಸೆಕೆಂಡ್ ತಪ್ಪಿದರ ನನ್ನ ತಲೀನೇ ತಿರಗ್ತದ ನೋಡು ಮತ್ತ, ಎಲ್ಲಾರಿಗೂ ಹೇಳಿದು ಅಂ? ಇದನ್ನ.

ಸುಬ್ಬು:- (ನಗೆಯಿಂದ) ನೋಡ್ರಿರಾದ್ರೂ ನೋಡ್ರಿ, ರಾಯ್ರು, ಈಗ ಮೀಟಿಂಗಿಗೆ ಎಷ್ಟು ವ್ಯಾಳ್ಯೇಶಿರ ಬರ್ತದ ಜನ ಅಂತ!

ವ. ರಾಯ್ರು:– ಮತ್ತ ಇನ್ನೊಂದು ಮಾತು. ಸುಬ್ಬು–ಕೂಡು–ಕೂಡೋ!–ನಮ್ಮಲ್ಲಿ frankness ಬೇಕು ನನಪ–ಅಂದ್ರ ಧೈರ್ಯ ಬೇಕು. ಈಗ ನಮ್ಮ ಹೆಣ್ಮಕ್ಕಳನ್ನ ನೋಡು. Public life ದಾಗ ಬರೋದೇ ಇಲ್ಲ! ಧೈರ್ಯ ಬರ್ಬೇಕು ಹ್ಯಾಂಗ ಅವರಿಗೆ? ಆದಕ ನಾನು ಯಾವ ಕೆಲಸ ಕೈಕೊಂಡ್ರೂ ಅದರೊಳಗ ಹೆಂಗಸರಿಗೆ ಒಂದು ಜಾಗಾ ಕಾದಿಡಲೇಬೇಕು ನೋಡು.

ಸುಬ್ಬು:-(ತಪ್ಪಿದವನಂತೆ)ನೀವು ಮೊದಲೇ ಇಂಥವರು ಅಂತ ಹೇಳಿದ್ದರ, ಅವರಿಗೂ ಆಮಂತ್ರಣ ಕೊಟ್ಟು ಬರತಿದ್ದೆ.

ವ. ರಾಯ್ರು:- (ತಿರಸ್ಕಾರದಿಂದ) ನನಗ ಈ ವೈಯಕ್ತಿಕ interest ಇಲ್ಲ, ನೋಡು.

ಯಾರು ಬೇಕಾದವರು ಇರಲಿ, ಹೆಂಗಸರಿದ್ದರೆ ಸಾಕು.

ಸುಬ್ಬು:-(ತಿಳಿಯದೆ)ನಾನೂ ಅದೇ ಅಂದೆ. ಸುರೋಜಿನಿ ಹೆಂಗಸರಿಗೇ ಹೇಳಿಬಂದ್ರೀನಿ.

ವ. ರಾಯ್ರು:– (ನಿರಾಶೆಯಿಂದ)ನಿನಗೆ ತಿಳಿಯೋದಿಲ್ಲ ಬಿಡೊ ನೋಡೋಣಂತ ಅಮ್ಯಾಲೆ. ಆಯ್ತು? ಇನ್ನೊಂದಂದರೆ ಪಾರ್ಲಿಮೆಂಟು ಯಾವನೂ ಸಾಧು ತಪ್ಪದೇ ಭೆಟ್ಟಿಯಾಗ ಬೇಕು.

ಸುಬ್ಬು:– (ಅಭಿಮಾನದಿಂದ) ಓಹೋ! ಮತ್ತ ಕೆಲಸ ಆಗೋದು ಹ್ಯಾಗ ಇಲ್ಲಾಂದ್ರೆ?

ವ. ರಾಯ್ರು:– (ಸಿಡುಕಿನ ದನಿಯಲ್ಲಿ) ಕೆಲಸ ಆಗಲಿ ಬಿಡಲಿ, ಸುಬ್ಬು, ಭೆಟ್ಟಿ ಆಗೋದು ಅಂದ್ರ ಅದೊಂದು ನನ್ನ fad ನನಪ [ನಗೆಯಿಂದ] ಭೆಟ್ಟಿ for the sake of ಭೆಟ್ಟಿ, ಅ? ನೋಡು, ಸುಬ್ಬೂ, ನಮ್ಮಂದಿಗೆ ತಿಳಿಯೋದೇ ಇಲ್ಲ. ಕೂಡಿ ಕೆಲಸ ಮಾಡುವವರಿಗೆ, personal contact ಅಂದ್ರ ಸುಳ್ಳಲ್ಲ, ಸುಬ್ಬೂ, ಅದು ಬಹಳ ಉಪಯೋಗ ಬೀಳ್ತದ ಅಲ್ಲ, ಮುಂದೆ ನೋಡೋಣ ಅದೆಲ್ಲ–ಇನ್ನು ಮುಂದಿ ಬರಲಿ ಮೀಟಿಂಗಕ್ಕ.

ಸುಬ್ಬು:– ಕೈಗಡಿಯಾರವನ್ನು ನೋಡಿ ಇನ್ನೂ ೩ ಮಿನಿಟ ಅದೆ. ರಾಯ್ರು–

ವ. ರಾಯ್ರು:– (ಅಧಿಕಾರದ ದನಿಯಲ್ಲಿ) ೩॥ ಅಂದರ ೩॥ ನನಗ ಕಣ್ಮುಚ್ಚಿ ತಿಳೀತದ ಹೊತ್ತಾಯ್ತು ಅಂತ–

ಸುಬ್ಬು:– (ಹೆದರಿಕೆಯ ದನಿಯಲ್ಲಿ) ಇನ್ನೂ

ವ. ರಾಯ್ರು:–(ಸಿಟ್ಟಿನಿಂದ) ಏನು ಇನ್ನೂ? ಬರೋಬ್ಬರ ೩॥ ಅಯ್ಯ. ಗಡಿಯಾರ ನೋಡದೇ ಹೇಳ್ತೀನೀ, ಕಿರಿ ಬೇಕಾದ್ರೆ.. (ಎಂದು ಮೇಜಿನ ಮೇಲಿನ Timepiece ನ್ನು ತೋರಿಸುವನು, ಸುಬ್ಬು ಅದನ್ನು ಎತ್ತಿ ನಂ ಮಾಡಿ ನೋಡುವನು. ಸರಿಯಾಗಿ ೩॥ ಆಗಿದೆ!) ಎಲ್ಲಿದ್ದಾರೆ ಜನ!! don't want this meeting ನನಗೆ ಈ ಕೆಲಸನ ಬ್ಯಾಡ. (ಮುಂದೆ ಮಾತನಾಡುತ್ತ ರುವಾಗಲೆ ಹೊರಗೆ ಹೋಗುವ ವೇಷವನ್ನು ಮಾಡುತ್ತ) ಸೆಕಂಡಿಗೆ ಸರಿಯಾಗಿ ಬರ್ದವರು ಕೆಲಸ ಏನ್ಮಾಡ್ತಾರ? ಹೋಗಿರಿ, ನೀವೇನೊ ನಿಮ್ಮ ಸಂಸ್ಥಾ ಏನೊ! I hate irregularity, ಸುಬ್ಬು, ನಿನಗೆ ಹೇಳ್ತೀನಿ ನಾನು. ವ್ಯಾಳ್ಯೇಕ ಶಿರ ಕೆಲಸ ಮಾಡದಿದ್ದರ ನನ್ನ ತಲೆಗೆ ಪಿತ್ತ ಏರ್ತದ ಅಂದೆ. ಬ್ಯಾಡೇ ಬ್ಯಾಡ ನನಗ. ಹೋಗಿ ಬಿಡ್ತೀನಿ, ಎಷ್ಟು ಕೆಲಸ ಬಿದ್ದದೆ. (ಬಾಗಿಲ ವರೆಗೆ ಹೋಗಿ ಒಳಗೆ ಯಾರಿಗೋ ಹೇಳುವವನಂತೆ) ನಾ ರಾತ್ರಿ ಎಷ್ಟೊತ್ತಿಗೆ ಬರ್ತೀನಿ ಹೇಳ್ಲಿಕ್ಕೆ ಬರೋದಿಲ್ಲ, ಏನ? ಊಟಕ್ಕ ನನ್ನ ಹಾದೀ ನೋಡ ಬ್ಯಾಡರಿ ಅಂದೆ (ಆವೇಶದಿಂದ ಹೋಗುವನು)

[ಸುಬ್ಬು ಮೆಲ್ಲಗೆ ಎದ್ದು ಗಡಿಯಾರವನ್ನು ಎತ್ತಿ ಅದನ್ನು ತಿರಿಗೆ ಹಚ್ಚಿ, ಅಲುಗಾಡಿಸಿ]

ಸುಬ್ಬು- ಕೇಕೇಕೈ! ಕೆಟ್ಟ, ಕೇಡಿ, ಕೈಗೇಡಿ! ಕೆ-ಕೆ-ಕಹಿ!

(ತೆರೆ)

ದೃಶ್ಯ ೨

[ಅದೇ ಕೋಣೆ ಮುಂಜಾನಿನ ಸಮಯ. ವಕೀಲ ರಾಯ್ರು, ಕನ್ನಡ ಪೇಪರ್ ಓದುತ್ತಿದ್ದಾರೆ. ಸುಬ್ಬು ಅವರನ್ನು ನೋಡುತ್ತ ಕುಳಿತಿದ್ದಾನೆ]

ವ. ರಾಯ್ರು (ಒಮ್ಮೆಲೆ) ಸುಬ್ಬು, ನೀನು ಬರೀತಿದ್ದಿಯಲ್ಲ?

ಸುಬ್ಬು:- (ನಾಚಿಕೆಯಿಂದ) ಹಿಂದಕ ಬರೀತಿದ್ದೆ ರಾಯ್ರು. ಏನು constructive work ಮಾಡಿತಿರಲಿಲ್ಲ, ಹೀಂಗೇ ಹೊತ್ತು ಹಾಳ್ಮಾಡಿ –

ವ. ರಾಯ್ರು:- (ನಡುವೆ) ಸುಬ್ಬು, ಹೀಂಗೆ ನಿಮ್ಯಾಡ ನೀನು. ಬರೆಯೋದಂದ್ರ, it is a fine art ಸುಬ್ಬು, ನೀ ನೋಡಿದಿ ಏನು ಅಮೆರಿಕಾದ ಒಂದು ಪೇಪರ ನೋಡಿದೆ. (ಕಂಕ ತುಂಬಿ ಬಂದು) ಖರೇ ಅಂದ್ರೂ ಸುಬ್ಬು, ಜಗತ್ತಿನೊಳಗ ಎಷ್ಟು fine things ಅವೇ ಅಂತಿ! ನಾವೇನು ಸುಮ್ಮನೆ ಕರ್ನಾಟಕ, ಏಕೀಕರಣ ಅಂತ ಹಾರಾಡ್ತಿರ್ತೀವಿ.

ಸುಬ್ಬು: (ಚಕಿತನಾಗಿ) ಯಾಕ,ರಾಯ್ರು ಮತ್ತ ಏಕೀಕರಣ ಆಗಲಿ ಅಂತ ಅಂತಿದ್ರಿ

ವ. ರಾಯ್ರು:- ಅಂದ್ರೇನಾಯ್ತೊ,ಸುಬ್ಬು? you must own your mistake. ನನ್ನ ದಂತೂ ಸ್ವಭಾವ ನೋಡು, ಸುಬ್ಬು. Province ಗೀವಿನ್ನ ಎಲ್ಲಾ ಮುಂದಿನ ಮಾತು ಅದಕ್ಕೆ ಕೇಳಿದೆ ನೀ ಬರೀತಿದ್ದಿಯೋ ಅಂತ.

[ಇನ್ನೂ ಇದೆ]

ದೇಶಾಂತರಗಳಿಂದ

ನ್ಯಾನ್‌ಕಿಂಗ್ ಪತನ?

ಚೀನೀ ರಾಜಧಾನಿಯಾದ ನ್ಯಾನ್‌ಕಿಂಗಿಗೆ ೧೩೩ ಮೈಲು ದೂರದಲ್ಲಿರುವ ಹೂಯಿನದಿಯ ಪಾಲಿನಲ್ಲಿ ೪೦ ಮೈಲು ಚಚ್ಚೌಕದ ಸಮರಾಂಗಣದಲ್ಲಿ ಕಮ್ಯೂನಿಸ್ಟ್ ಮತ್ತು ಚಿಯಾಂಗ್ ಸೈನ್ಯಗಳು ಜೀವದಹಂಗನ್ನು ತೊರೆದು ಜಾಡಾಜಾಡಿ ಕಾಳಗದಲ್ಲಿ ಲೀನವಾಗಿರುವವೆಂದು ಸುದ್ದಿ ಬಂದಿದೆ. ಈ ಕಾಳಗವು ಚಳಿಗಾಲದಲ್ಲಿ ತಮ್ಮ ಸೈನ್ಯವು ನ್ಯಾನ್‌ಕಿಂಗನ್ನು ಕಾದುಕೊಳ್ಳಲು ಸಮರ್ಥವಾದೀತೋ ಇಲ್ಲವೋ ಎಂಬುದನ್ನು ನಿರ್ಣಯಿಸುವುದೆಂದು ಸರಕಾರೀ ಪಕ್ಷದ ವಕ್ತಾರರು ಒಪ್ಪುತ್ತಾರೆ. ಉತ್ತರ ಮತ್ತು ದಕ್ಷಿಣ ದಿಕ್ಕುಗಳಿಂದ ಹರಿದಾಯುತ್ತಿರುವ ಸರಕಾರೀ ಸೈನ್ಯವಿಭಾಗಗಳನ್ನು ಎದುರಿಸಲು ಕಮ್ಯುನಿಸ್ಟರ ದಲಗಳು ಸುಹ್ ಸೀನಿನಲ್ಲಿ ಧುಮುಕಿವೆ. ನ್ಯಾನ್‌ಕಿಂಗಿನ ರಕ್ಷಣೆಗಾಗಿ ವೀರಾವೇಶದಿಂದ ಮುನ್ನುಗ್ಗಿದ ಚಿಯಾಂಗ್

ಕುಮಿಂಟಾಂಗ್ ಸರಕಾರದ ಹೊಸ ಮುಖ್ಯ ಮಂತ್ರಿ ಡಾ. ಸುನ್ ಫೋ

ದಲಗಳ ಮೊದಲನೆಯ ಸಾಲು ಸ್ವಾಭಾವಿಕ ರಕ್ಷಣಾಪರಿಖದಂತಿರುವ ಯಾಂಗ್‌ಟ್ಸೀನದಿಯ ಬಳಿ ೩೦ ಮೈಲು ಹಿಮ್ಮೆಟ್ಟಿದ ಸಂಗತಿ ಈಗ ತಿಳಿದುಬಂದಿದೆ. ನ್ಯಾನ್‌ಕಿಂಗಿಗೆ ಈಶಾನ್ಯದಲ್ಲಿ ೧೧೦ ಮೈಲು ದೂರದಲ್ಲಿರುವ ಹ್ವಯಾಂಗ ಪಟ್ಟಣವನ್ನು ಚಿಯಾಂಗ್ ದಲಗಳು ಬಿಟ್ಟುಕೊಟ್ಟು, ನ್ಯಾನ್‌ಕಿಂಗಿಗೆ ಕ್ರಮವಾಗಿ ೪೦ ಮತ್ತು ೬೫ ಮೈಲು ದೂರದಲ್ಲಿರುವ ಯಾಂಗ್ ಚೋ ಮತ್ತು ತೆಹಾಸೀನ ಪಟ್ಟಣಗಳತ್ತ ಸರಿದವು. ಕೆಲ ಕಮ್ಯುನಿಸ್ಟ್ ದಲಗಳಂತೂ ರಾಜಧಾನಿಗೆ ಉತ್ತರದಲ್ಲಿ ೧೧ ಮೈಲು ಸನಿಹಕ್ಕೆ ಬಂದಿರುವುದಾಗಿ ತಿಳಿಯುತ್ತದೆ. ಇದರಿಂದ ಸೈನಿಕರಲ್ಲಿ ಭಯಗ್ರಸ್ತತೆ, ಗಲಿಬಿಲಿ ಉಂಟಾಗಿದೆ. ಪೂಚೋ ಪ್ರದೇಶದಲ್ಲಿರುವ ಸುಸಜ್ಜಿತರಾದ ೩ ಲಕ್ಷ ಸರಕಾರೀ ಸೈನಿಕರು ಶತ್ರುಗಳ ಕಡೆಗೆ ಹೊರಟುಹೋಗಿರುವುದು ಮತ್ತಷ್ಟು ಗಾಬರಿಗೆ ಕಾರಣವಾಗಿದೆ!

ನ್ಯಾನ್‌ಕಿಂಗಿನ ಕೇಂದ್ರ ರೇಲ್ವೆ ನಿಲ್ದಾಣದಲ್ಲಿ ಸಾವಿರಾರು ನಿರಾಶ್ರಿತರು ಬಂದು ಸೇರಿ ಗಲಭೆ ಗೊಂದಲಗಳೆದ್ದಿವೆ. ಭಯಗ್ರಸ್ತ ರಾಜಧಾನಿಯಿಂದ ಅಧಿಕಾರಿಗಳನ್ನೂ ಇತರರನ್ನೂ ಹೊರಗೆ ಕಳಿಸಲು ಸಂಪರ್ಕ ಮಂತ್ರಿಯು ತಾನೇ ಯೋಜನೆಮಾಡುತ್ತಿದ್ದಾನೆ: ಇದಕ್ಕಾಗಿ ರೇಲ್ವೆ ಗಾಡಿ, ವಿಮಾನ ಮತ್ತು ಹಡಗುಗಳನ್ನು ಸಜ್ಜುಗೊಳಿಸಲಾಗುತ್ತಿದೆ. ಕೇಳಿಕೆ ಬಂದದ್ದೇ ಆದರೆ ಮತ್ತೊಂದು ಸಂರಕ್ಷಣ ನೌಕೆಯನ್ನು ಸಂತ್ರಸ್ತರ ನಿರ್ಗಮನಕ್ಕಾಗಿ ಅಮೇರಿಕದಿಂದ ಶಾಂಘಾಯಿಗೆ ಡಿಸೆಂಬರಿನ ಅಂತ್ಯದೊಳಗೆ ಕಳಿಸಲಾದೀತೆಂದು ಅಮೇರಿಕದ ನೌಕಾಶಾಖೆಯವರು ಶಾಂಘಾಯಿಯಲ್ಲಿ ಪ್ರಕಟಿಸಿದ್ದಾರೆ.

ಉತ್ತರ ಚೀನದಲ್ಲಿ ಪೀಪಿಂಗಿನಿಂದ ಮಂಗೋಲಿಯಕ್ಕೆ ಹೋಗುವ ದ್ವಾರವೆನಿಸಿದ ಕಾಲ್‌ಗನ್ ಪಟ್ಟಣದತ್ತ ವಿವಿಧ ಶಸ್ತ್ರಾಸ್ತ್ರ ತೋಫು ತುಪಾಕಿಗಳಿಂದ ಸುಸಜ್ಜಿತರಾದ ಅರ್ಧ ಲಕ್ಷ ಕಮ್ಯುನಿಸ್ಟ್ ಯೋಧರು ಕಾಲಾಗ್ನಿರುದ್ರರಂತೆ ಧಾವಿಸುತ್ತಿದ್ದಾರೆ. ಅವರನ್ನು ಪ್ರತಿಭಟಿಸಲು ಜನರಲ್ ಫುತ್ಸೋಯಿ ಹೋಗಿದ್ದಾನೆ ಜನರಲ್ ಚೆನ್‌ಯಿಯ ಕಮ್ಯುನಿಸ್ಟ್ ದಲಗಳು ಪೆಂಗ್‌ಪೂವಿನ ಪೂರ್ವಕ್ಕೆ ಹೊರಟಿವೆ. ಇದರಿಂದ ಶಾಂಘಾಯಿ ಮತ್ತು ನ್ಯಾನ್‌ಕಿಂಗಗಳಿಗೆ ಮತ್ತಷ್ಟು ಅಪಾಯವುಂಟಾಗಿದೆ ಎಂದು ಹೇಳಲಾಗುತ್ತಿದೆ. ರಾಜಧಾನಿ ಕೊನೆಯುಗಳಿಗೆ ಎಣಿಸುತ್ತದೆ ಎಂದು ನಾಗರಿಕರು ಹೇಳತೊಡಗಿದ್ದಾರೆ. ಪಿಯಾನಿನಿಂದ ೧೪ ಲಕ್ಷ ನಿರಾಶ್ರಿತರು ತಲೆ ಉಳಿಸಿಕೊಳ್ಳಲು ಇರುವೆಯ ಸಾಲಿನಂತೆ ಎದ್ದು ಹೊರಟಿದ್ದಾರೆ. ಅವರಲ್ಲಿ ಬಹುಸಂಖ್ಯರು ಸೈನಿಕರ ಕುಟುಂಬದವರು. ಅವರನ್ನು ಸುರಕ್ಷಿತವಾಗಿ ಸಾಗಿಸುವುದಕ್ಕಾಗಿ ನೂರು ಲಾರಿಗಳು ಸಿದ್ಧವಾಗಿ ಬಂದಿವೆ.

೩೦೦೦ ಟನ್ನಿನ ಕಿಯಾಂಗ್ಯ ಎಂಬ ಸ್ಟೀಮರನ್ನು ಶಾಂಘಾಯಿ ಬಂದರಿನಲ್ಲಿ ಹತ್ತಿ ಪಾರಾಗಲು ಹೊರಟ ಸುಮಾರು ೪೦೦೦ ನಿರಾಶ್ರಿತರು ಸ್ಫೋಟದಿಂದ ನೀರಲ್ಲಿ ಮುಳುಗಿದರು. ಆದರೆ ಆ ಜಲಯಾನದಿಂದ ೭೦೦ ಜನ ಬದುಕಿ ದಡವನ್ನು ಸೇರಿದರು. ಕೇವಲ ೩೩೦೦ ಜನರನ್ನು ಸಾಗಿಸಲು ಹೊರಟ ಸ್ಟೀಮರಿನಲ್ಲಿ ತಿಕೀಟಿಲ್ಲದ ಅಸಂಖ್ಯ ಜನರು ನುಗ್ಗಿ ಗೊಂದಲವುಂಟಾಗಿ ಈ ಅನಾಹುತ ಸಂಭವಿಸಿತೆಂದು ಹೇಳಲಾಗಿದೆ.

ಇತ್ತೀಚಿನ ಸರಕಾರಿ ವರದಿಯ ಪ್ರಕಾರ ಪೆಂಗ್‌ಪೂವಿಗೆ ೨೦ ಮೈಲು ಉತ್ತರಕ್ಕಿರುವ ಕೂಚೆಂಗೆಂಬ ಪಟ್ಟಣವನ್ನು ಚಿಯಾಂಗರ ದಲಗಳು ಪುನಃ ವಶಪಡಿಸಿಕೊಂಡಿವೆಯೆಂದು ತಿಳಿಯುತ್ತದೆ. ಆದರೆ ಅಲ್ಲಿ ಕಮ್ಯುನಿಸ್ಟರು ಹಿಂಜರಿದದ್ದು ತಮ್ಮ ದಲಗಳ ಪುನರ್ವ್ಯವಸ್ಥೆಗಾಗಿ ಅಲ್ಲದೆ ಸೋಲಿಗಂಜಿ ಅಲ್ಲ ಎಂದು ನಿರೀಕ್ಷಕರ ಮತ. ಅಮೇರಿಕಕ್ಕೆ ಹೋದ ಸತಿ ಚಿಯಾಂಗರು ೩೦೦ ಕೋಟಿ ಡಾಲರುಗಳ ಸಹಾಯವನ್ನು ಅಲ್ಲಿಯ ಸರಕಾರ ಕೊಡಬೇಕೆಂದೂ ಆ ಯೋಜನೆಯ ನಾಲ್ಕು ಅಂಶಗಳಿಗೆ ಅಮೇರಿಕ ಪುರಸ್ಕಾರ ಕೊಡಬೇಕೆಂದೂ ಯಾಚಿಸಿದ್ದಾಗಿ ತಿಳಿಯುತ್ತದೆ. ಆದರೆ ಈ ಪ್ರಕಾರ ಯುದ್ಧ ನಡೆಸುವ ಇಡಿ ಹೊಣೆಯನ್ನು ಹೊರಲು ಟ್ರೂಮನ್ನರ ಸರಕಾರ ಒಪ್ಪುವುದು ಸಂಶಯಾಸ್ಪದವೆಂದು ಸದ್ಯದ ಊಹೆ.

ಚಿಯಾಂಗರ ಕುಮಿಂಟಾಂಗ್ ಸರಕಾರ ಉರುಳಿದ ಮರುಕ್ಷಣದಲ್ಲಿ ಸಂಯುಕ್ತ ಸರಕಾರವನ್ನು ಸ್ಥಾಪಿಸಲಾಗುವುದೆಂದು ಎಡಪಕ್ಷದ ೧೦ ಗುಂಪುಗಳು ವಿದೇಶೀ ಮಿತ್ರರೆದುರು ಹೇಳಿದ್ದಾಗಿ ಸುದ್ದಿ. ಇವು ತಮ್ಮನ್ನು ತಾವೇ ಸ್ವತಂತ್ರ ಪಕ್ಷವೆಂದು ಕರೆದು ಕೊಂಡಿವೆ. ಮೊದಲೊಮ್ಮೆ ಮಯೋತ್ಸೇ ತುಂಗನ ಕಮ್ಯುನಿಸ್ಟ್ ಪಕ್ಷಕ್ಕೂ ಸರಕಾರೀ ಪಕ್ಷಕ್ಕೂ ನಡುವೆ ಮಧ್ಯಸ್ಥಿಕೆ ಮಾಡಹೋಗಿ ಇವು ವಿಫಲಪ್ರಯತ್ನವೆನಿಸಿದ್ದವು.

ಒಟ್ಟಿನ ಮೇಲೆ ನ್ಯಾನ್‌ಕಿಂಗಿನ ಪತನವಾಗುವುದು ನಿಶ್ಚಿತವೆಂದೇ ತೋರುತ್ತದೆ ಈಗಲೇ ಆಗಿರಬಹುದೇನೋ ಎಂಬಷ್ಟು. ಪರಿಸ್ಥಿತಿ ಕೆಟ್ಟಿದೆ. ಕುಮಿಂಟಾಂಗ್ ಸರಕಾರ ಮೃತ್ಯುಶಯ್ಯೆಯಲ್ಲಿದೆ ಎನ್ನಬಹುದು. ದೇವಾಸುರ ಯುದ್ಧದ ಸರಿಸಮವೆನಿಸಿರುವ ಚೀನೀಯಾದವಿ ಇಡಿ ಏಶಿಯದ ಭಾವೀ ರಾಜಕಾರಣದ ಮೇಲೆ ಮಹತ್ವದ ಪರಿಣಾಮವನ್ನು ಉಂಟುಮಾಡದಿರದೆಂದರೆ ಅತಿಶಯೋಕ್ತಿಯಾಗಲಾರದು.

ಸತಿ ಚಿಯಾಂಗ್ ಕೈಶೇಕ್

ಬರ್ಲಿನ್ ಇಬ್ಭಾಗ ಪೂರ್ಣವಾಯಿತೆ?

ಪಾಶ್ಚಾತ್ಯ ಪ್ರಭುತ್ವತ್ರಯವು ರಶಿಯವೀಗ ವಸ್ತುತಃ ಬರ್ಲಿನ್ ಇಬ್ಭಾಗವನ್ನು ಮಾಡಿಬಿಟ್ಟುದರಿಂದ ಇಡೀ ಬರ್ಲಿನ್ನಿನಲ್ಲಿ ಒಂದೇ ಬಗೆಯ ನಾಣ್ಯ ನೋಟುಗಳ ಚಲಾವಣೆಯನ್ನು ಇಡುವ ಕೆಲಸ ಕಠಿಣವಾಗುವಂತೆ ಮಾಡಿದೆ ಎಂದು ದೂರಿಕೊಂಡವು. ಇಬ್ಭಾಗವಾದಂತೆನಿಸಲು ರಶಿಯ ಹೂಡಿದ ಹೊಂಚು ಈ ಬಗೆಯದಾಗಿದೆ:

ಬರ್ಲಿನ್ ನಗರ ಸಭೆಯ ಕಚೇರಿ ಸೋವಿಯಟ್ ವಿಭಾಗದಲ್ಲಿತ್ತು. ಅದು ಇಡೀ ನಗರದ ಆಡಳಿತೆಯನ್ನು ನಡೆಸುತ್ತಿತ್ತು. ಆದರೆ ಬರ್ಲಿನ್ನಿನ ಕೋಠಡಿಯೊಳ್ [illegible] ವಿಭಾಗದಲ್ಲಿ ಅವರ [illegible] ಸಭೆಯು [illegible] ರಶಿಯ, [illegible] ಇಡೀ ನಗರದ ಆಡಳಿ[illegible] ಕಮ್ಯುನಿಸ್ಟ್ ಪ್ರಭಾವ [illegible] ಸಭೆಯನ್ನು ರಚಿಸಲಾಗಿದೆ. ಇದರಿಂದ ನಗರದ ಎರಡೂ ನಾಗರಿಕ ಆಡಳಿತ ಒಂದೇ ಸಭೆಯ ಕೈಯಲ್ಲಿರುವುದು ತಪ್ಪಿದಂತಾಗಿದೆ. [illegible] ಅಧ್ಯಕ್ಷರ [illegible] ಇಷ್ಟಲ್ಲದೆ ನಗರದ [illegible] ರಶಿಯದ ಅಧಿಕಾರಿ[illegible] ಅನೇಕ [illegible]ಗಳನ್ನಿದ್ದಿ ದಿನದಿನದ ಆಡಳಿತ [illegible] ಮಾಡಿದೆ. ನಗರಾಧ್ಯಕ್ಷರೆಂದು ಆಯ್ಕೆ ಹೊಂದಿದ ಹೆರ್ ರಾಯ್ಟರನ್ನು ಅದು ಮನ್ನಿಸಿಲ್ಲ; ಶಿಕ್ಷೆಗೆ ಗುರಿಯಾದ ಪೋಲೀಸು ಮುಖ್ಯಾಧಿಕಾರಿ [illegible] ತಾತ್ಕಾಲಿಕ ಅಧಿಕಾರ ನಿವೃತ್ತಿಯನ್ನು ಒಪ್ಪಲಿಲ್ಲ; ಅಲ್ಲದೆ ಸಲ ಪೋಲೀಸು ಅಧಿಕಾರಿಗಳನ್ನೂ ಅದು ಮನೆಗೆ ಕಳಿಸಿ, ಎರಡು ಹೊಸ ಪೋಲೀಸುದಲಗಳನ್ನು ನಿರ್ಮಿಸಿದೆ. ಸೋವಿಯಟ್ ಒಕ್ಕೂಟ ಪಕ್ಷದ ಮುಕಪ್ರದರ್ಶನದ ಗಲಭೆಯಿಂದ ರಕ್ಷಿಸಿದ್ದು, ನಗರಸಭೆ ತನ್ನ ಕಚೇರಿಯನ್ನು ಪಾಶ್ಚಾತ್ಯ ವಿಭಾಗಕ್ಕೆ ಸ್ಥಳಾಂತರಿಸುವಂತೆ ಅದು ಮಾಡಿತು.

ನಗರ ಸಭೆಯ ಚುನಾವಣೆಗೆ ರಶಿಯದ ಅಧಿಕಾರಿಗಳು ನೂರಾರು "ಅಡಚಣೆಗಳನ್ನು ಮಾಡುತ್ತಿದ್ದಾರೆ ಎಂದು ಪಾಶ್ಚಾತ್ಯರ ಹೇಳಿಕೆ. ರಶಿಯನ್ನರನ್ನು ಕೇಳಿದರೆ ಈ ಆರೋಪಗಳನ್ನು ನಿಮಿಷಾರ್ಧದಲ್ಲಿ ಅಲ್ಲಗಳೆದು ಪ್ರತ್ಯಾರೋಪಗಳನ್ನು ಹೊರಿಸಬಹುದು. ಈ ವ್ಯವಹಾರದಿಂದ ಪಾಶ್ಚಾತ್ಯ ಮತ್ತು ಪೌರಸ್ತ್ಯರಲ್ಲಿ ಬರ್ಲಿನ್ ಆಡಳಿತೆಯಬಗ್ಗೆ ಒಮ್ಮತವಾಗುವುದು ಅಸಾಧ್ಯವೆಂಬಂತೆ ತೋರುತ್ತದೆ. ಅದರ ಪರಿಣಾಮವೆಂದರೆ, ಬರ್ಲಿನ್ ನಗರ ಸಂಪೂರ್ಣ ಇಬ್ಭಾಗವಾಗುವುದು. ಆಡಳಿತೆಯ ಈ ಪಾಲುಗಾರಿಕೆಯಿಂದ ಬರ್ಲಿನ್ನಿನ ಪ್ರಜೆಗಳ ವ್ಯವಹಾರ ಅಸ್ತವ್ಯಸ್ತವಾಗುವಂತಾಗಿದೆ.

ಮುಖ್ಯ ಮಂತ್ರಿ ಪಂ. ನೆಹರು ಬ್ರಿಟನ್ನಿನ ಲಾರ್ಡ್ ಪ್ರೀವಿಸೀಲರೆನಿಸಿದ ಲಾರ್ಡ್ ಅಡಿಸನ್ನರೊಡನೆ ಲಂಡನ್ನಿನ ಭಾರತ ಭವನದಲ್ಲಿ ಏರ್ಪಡಿಸಿದ ಸ್ವಾಗತ ಸಮಾರಂಭದಲ್ಲಿ ಸಂಭಾಷಿಸುತ್ತಿರುವುದು.

ಇಂಡೊನೇಶಿಯದ ವಿಫಲಸಂಧಾನ

ಡಚ್ ಸುದ್ದಿ ಸಂಸ್ಥೆಯ ಪ್ರಕಾರ ಇಂಡೊನೇಶಿಯದ ಕ್ರಾಂತಿಕಾರರು ಬಟೇವಿಯಕ್ಕೆ ೩೦ ಮೈಲು ದಕ್ಷಿಣದಲ್ಲಿ ಡಚ್ ದಲಗಳನ್ನೆದುರಿಸಿದರು ಅದೇ ಸಮಯದಲ್ಲಿ ವಿಫಲಸಂಧಾನದಿಂದ ಪ್ರಜಾರಾಜ್ಯದ ಮುಖ್ಯ ಮಂತ್ರಿ ಡಾ. ಹಟ್ಟಾ ರಾಜಧಾನಿಯಾದ ಜೋಗ್ ಜಕಾರ್ತಕ್ಕೂ ಡಚ್ ಮಂತ್ರಿ ಮಂಡಲದ ಪ್ರತಿನಿಧಿಗಳು ಹಾಲೆಂಡಿಗೂ ಮರಳುತ್ತಿದ್ದರು. ಸಂಧಾನದ ಮಾತುಕತೆ ಎಲ್ಲ ಅಂಶಗಳಲ್ಲಿಯೂ ಗರ್ಭಪಾತ ಹೊಂದಿತು. ಆ ಅಂಶಗಳಲ್ಲಿ ಡಾ. ಹಟ್ಟಾ ಅವರು ಸೂಚಿಸಿದ ಸೈನ್ಯದ ಸಂಯುಕ್ತ ನಿಯಂತ್ರಣ ಬಹುಮುಖ್ಯವಾಗಿತ್ತೆಂದು ಹೇಳಲಾಗಿದೆ. ಪ್ಯಾರಿಸ್ಸಿನಲ್ಲಿ ಈಗ ನಡೆಯುತ್ತಿರುವ ಸಂ. ರಾ. ಸಾಧಾರಣ ಸರ್ವ ಸದಸ್ಯರ ಸಭೆಯಲ್ಲಿ ಅದು ಮುಗಿಯುವುದರೊಳಗೆ ಇಂಡೊನೇಶಿಯದ ಬಗ್ಗೆ ಹೊಸ ಚರ್ಚೆ ಪ್ರಾರಂಭವಾಗಬಹುದೆಂದು ತರ್ಕಿಸಲಾಗಿದೆ. ತಾತ್ಕಾಲಿಕ ಸಂಧಿಯ ಕರಾರುಗಳನ್ನು ಮುರಿದ ಆರೋ[illegible]

[illegible]

ನಗೆಯ ನೊರೆ

ತಾಯಿ—ಮಗು

ತಾಯಿ:- ಮಗೂ, ಒಳ್ಳೆಯವನಾಗದಿದ್ದರೆ ಯಮಲೋಕದಲ್ಲಿ ನಿನಗೆ ಶಿಕ್ಷೆವಿಧಿಸುತ್ತಾರೆ. ಚಿತ್ರಗುಪ್ತರು ನೀನು ಮಾಡುತ್ತಿರುವ ತಂಟೆಗಳನ್ನೆಲ್ಲ ಬರೆದಿಡುತ್ತಾರೆ, ಗೊತ್ತಿದೆಯೋ ನಿನಗೆ?

ಮಗ - ಅಲ್ಲ ಅಮ್ಮ, ನೀನು ಅವರು ಬರೆದಿಡುತ್ತಾರೆ ಹಾಗೆ ಹೀಗೆ ಅಂದರೆ ಏನೂ ಪ್ರಯೋಜನವಿಲ್ಲ ನೋಡು. ಅಲ್ಲಿ ಅವರು ಆಗಲೇ ನಾನು ಸತ್ತರಬೇಕೆಂದು ಕೂಡ ಬರೆದಿಟ್ಟರಬೇಕೆಂದು ನಿನಗೆ ಗೊತ್ತಿದೆಯೋ?

ತಾಯಿ - ಅದು ಹೇಗೆ?

ಮಗ - ಹೇಗೆಂದರೆ ನಾನು ಈಗ ೧೫ ದಿನಗಳಿಂದ ಪ್ರಾರ್ಥನೆ ಮಾಡುವುದನ್ನೇ ಬಿಟ್ಟುಬಿಟ್ಟಿದ್ದೇನೆ!

ಉಡುಗೊರೆ

ಒಬ್ಬ ಮದುಮಗಳು ತನಗೆ ಉಡುಗೊರೆಯಾಗಿ ಬಂದ ನಾಲ್ಕು ಕೊಡೆಗಳಲ್ಲಿ ಒಂದನ್ನು ಅಂಗಡಿಗೆ ಕೊಟ್ಟು ಅದರ ಬದಲು ತನ್ನ ಗಂಡನಿಗೆ ಯೋಗ್ಯವಾದ ಒಂದು ಕೊಡೆಯನ್ನು ತರಬೇಕೆಂದು ಹೋದಳು. ಆದರೆ ಅಂಗಡಿಯವ ಹಾಗೆ ಬದಲು ಮಾಡಲು ಬರುವದಿಲ್ಲವೆನ್ನಲು,

ಅವಳು (ಆಶ್ಚರ್ಯದಿಂದ) - ಯಾಕೆ? ನಿನ್ನ ಅಂಗಡಿಯಿಂದಲೇ ಇದನ್ನು ತಂದದ್ದು, ಅದರ ಮೇಲೆ ಈ ಅಂಗಡಿಯ ಹೆಸರಿದೆಯಲ್ಲ.

ಅಂಗಡಿಯವನು - ಹೌದು, ಆ ಹೆಸರಿನ ಚೀಟಿಯು [illegible]

ಗಂಡ—ಹೆಂಡತಿ

[illegible]

ಕೂಲಿಕಾರ ಪ್ರಪಂಚ

ದೇಶದಲ್ಲಿ ಮುಷ್ಕರದ ಗಾಳಿ

ನಮ್ಮ ದೇಶವನ್ನು ಇಂದು ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಹೊಸದಾಗಿ ಎದ್ದ ಸಂಪಿನ ಸಂಕಟಗಳೇ ಭಯಪ್ರದವಾಗಿವೆ. ನಿರಾಶ್ರಿತರ ಸಮಸ್ಯೆಯೇ ದೊಡ್ಡದಾದ ರಾಷ್ಟ್ರೀಯ ಸಂಕಟಗಳು ಇದ್ದಾಗ ಸಾಮಾನ್ಯವಾಗಿ ಎಲ್ಲ ಪಕ್ಷ ಪಂಗಡಗಳೂ ಸರಕಾರಕ್ಕೆ ಬೆಂಬಲವಿತ್ತು ಕಷ್ಟದೂರ ಮಾಡಬೇಕೆಂದು ಘೋಷಿಸಿ ತಮ್ಮ ಹೆಗಲನ್ನು ಹಿಂತೆಗೆದಿದ್ದವು. ಆದರೆ ಈಗ ಮತ್ತೆ ಈ ಸಮಸ್ಯೆ ಭಯಂಕರವಾಗಿ ತಲೆಯೆತ್ತುವ ಲಕ್ಷಣ ತೋರುತ್ತದೆ.

ರೇಲ್ವೆ ಸಂಪಿನ ಬೆದರಿಕೆ

ಈಗ ಉದ್ಭವಿಸಲಿರುವ ತಂಟೆಗಳಲ್ಲಿ ರೇಲ್ವೆ ಜನರ ಸಂಪಿನ ಬೆದರಿಕೆ ಎಲ್ಲಕ್ಕೂ ದೊಡ್ಡದು. ಈ ಸಂಪು ಆಗಿಬಿಟ್ಟರೆ ದೇಶದಲ್ಲಿ ಅನಾಹುತವಾಗುವದು ಖಂಡಿತ. ಈಗಾಗಲೇ ಹಾನಿಗೆ ಸಿಕ್ಕಿದಂತಹ ಈ ದೇಶದ ಆರ್ಥಿಕ ಜೀವನಕ್ಕೆ ಮಾತ್ರವಲ್ಲ, ಕೆಲವೆಡೆ ಜನತೆಯ ಅನ್ನಕ್ಕೆ ಕೂಡ ಅಡಚಣೆಯುಂಟಾಗುತ್ತಿರುವಾಗ ರೇಲ್ವೆ ಜನರು ಸಂಪು ಹೂಡಿದರಂತೂ ಪರಿಸ್ಥಿತಿ ಪೂರ್ತಿ ಹದಗೆಡುವದರಲ್ಲಿ ಸಂದೇಹವಿಲ್ಲ. ಕೇಂದ್ರ ಸರಕಾರಕ್ಕೂ ರೇಲ್ವೆ ಕೆಲಸಗಾರರಿಗೂ ತುಟ್ಟಿ ಭತ್ತೆಯ ಸಂಬಂಧದಲ್ಲಿ ತಿಕ್ಕಾಟವೊದಗಿದೆ. ಅದನ್ನು ತಮಗೆ ಸಂತೋಷವಾಗುವಂತೆ ತೀರ್ಮಾನಿಸಲು ರೇಲ್ವೇ ಕೂಲಿಗಾರರು ಸಂಪಿನ ಶಸ್ತ್ರವನ್ನೆತ್ತಬೇಕೆನ್ನುತ್ತಾರೆ. ಇದನ್ನೆದುರಿಸಲು ಸರಕಾರ ಸಿದ್ಧವಾಗಿದೆಯೆಂದು ಹೇಳಿದರೂ ಕೂಲಿಕಾರ ಸಂಘಗಳಲ್ಲಿ ಒಡಕುಂಟಾದ ಹೊರತು ಅದು ಸಾಧ್ಯವಾಗುವದು ಕಠಿನ.

ರಾಜಕೀಯ ಪ್ರಭಾವ

ರಾಷ್ಟ್ರೀಯ ಮಜದೂರ ಸಂಘದವರು ಇಂಥ ಸಂಪುಗಳನ್ನು ವಿರೋಧಿಸುತ್ತಾರೆ. ಅವರ ಕೈಯೊಳವಿನಲ್ಲಿರುವ ಬಿ. ಬಿ. ಸಿ. ಆಯ್. ರೇಲ್ವೆ ಸಂಘದ ಕೂಲಿಕಾರರು ಸಂಪಿನ ವಿರುದ್ಧ ಮತಕೊಟ್ಟಿದ್ದಾರೆ. ನೊನ್ನೆ ರಾಷ್ಟ್ರೀಯ ಮಜದೂರ ಸಂಘದ ಅಧ್ಯಕ್ಷ ಹರಿಹರನಾಥ ಶಾಸ್ತ್ರಿಗಳು ಹೊರಡಿಸಿದ ಹೇಳಿಕೆಯಲ್ಲಿ ಹೇಳುವಂತೆ ಸಂಪು ಹೂಡುವದರಿಂದ ಉಂಟಾಗುವಂತೆ ಸ್ವತಃ ಕೂಲಿಕಾರರಿಗೂ ಹಾನಿ ತಟ್ಟಿಯೆ ತಟ್ಟುವದು. ಉತ್ಪಾದನೆ ಕಡಿಮೆಯಾಗಿ ಬೇಡಿಕೆ ಹೆಚ್ಚಾಗಿರುವದೇ ಇಂದಿನ ತಾಳಗೆಟ್ಟ ಆರ್ಥಿಕ ಪರಿಸ್ಥಿತಿಗೆ ಕಾರಣವಾಗಿದೆ ಈ ಪರಿಸ್ಥಿತಿಯಿಂದ ತಮಗೊದಗಿದ ಕಷ್ಟನಷ್ಟಗಳನ್ನು ಪರಿಹರಿಸಿಕೊಳ್ಳಲು ಕೂಲಿಕಾರರು ಪ್ರಯತ್ನಿಸುವದು ಸಹಜವೆ.

ಆದರೆ ಅದನ್ನು ಬಗೆ ಹರಿಸಲು ಸಂಪಿನ ಶಸ್ತ್ರವನ್ನೆತ್ತಿದರೆ ಸಂಪಿನ ಕಾಲದಲ್ಲಿ ಉತ್ಪಾದನೆ ಕುಗ್ಗಿ ತಿರುಗಿ ಬೆಲೆಗಳು ಏರುವವೂ ಅದರಿಂದ ಮತ್ತೆ ಕೂಲಿಕಾರರಿಗೆ ತೊಂದರೆಯೂ ಆಗುವದು. ಆದರೆ ಈ ಮಾತನ್ನು ಕೂಲಿಕಾರರಿಗೆ ತಿಳಿಹೇಳಿ ಸೈರಣೆಯನ್ನು ಬೋಧಿಸುವವರು ಕಡಿಮೆ. ಬದಲಿಗೆ ಸಮಾಜವಾದಿಗಳು, ಕಮ್ಯೂನಿಸ್ಟರು ಮತ್ತು ರಾಯಿಸ್ಟರು ಕಳೆದುಹೋದ ತಮ್ಮ ರಾಜಕೀಯ ಶಕ್ತಿಯನ್ನು ಪುನಃ ಸಂಪಾದಿಸಲು ಈ ಪರಿಸ್ಥಿತಿಯನ್ನು ಉಪಯೋಗಿಸಿಕೊಳ್ಳಲು ಆತುರರಾದಂತೆ ತೋರುತ್ತದೆ. ಕೆಲದಿನಗಳ ಹಿಂದೆ ಶ್ರೀ ಎನ್. ಎಂ. ಜೋಶಿಯವರ ನೇತೃತ್ವದಲ್ಲಿ ಸೇರಿದ ಕೂಲಿಕಾರ ಮುಂದಾಳುಗಳ ಸಭೆಯಲ್ಲಿ ರಾಷ್ಟ್ರೀಯ ಮಜದೂರ ಸಂಘದ ಜತೆಗೆ ಅನುಕೂಲವಿಲ್ಲದವರನ್ನು ನೋಡಿ ಜರಿದೆ ಶ್ರಮಿಕ ಮನೋವೃತ್ತಿಯುಳ್ಳವರು ಅದನ್ನು ಇತರ ಪರೀಕ್ಷೆಗೆ ಇಳಿಯುತ್ತಿರುವಂತೆ ಅನಿಸುತ್ತದೆ. ಹೈದರಾಬಾದದ ಸಮಸ್ಯೆಯೀಗ ಬಗೆಹರಿದಿರುವದರಿಂದ ಸಂಪಿನ ಕೈಯನ್ನು ಹಣೆಹಿಡಿಯಲು ತಾವು ಇನ್ನು ಬದ್ಧರಲ್ಲವೆಂದು ಶ್ರೀ ಜಯಪ್ರಕಾಶ ನಾರಾಯಣರೇ ಮೊದಲಾದ ಮುಂದಾಳುಗಳು ನಟಿಸುತ್ತಿದ್ದಾರೆ. ಕಮ್ಯೂನಿಸ್ಟರಿಗಂತೂ ಅವ್ಯವಸ್ಥೆಯೆ ಬೇಕಾಗಿದೆ.

ಪರಿಸ್ಥಿತಿಯ ಒತ್ತಡ

ಆದರೆ ಇವರಲ್ಲಿ ಅಪರಾಧವೆಲ್ಲ ಒತ್ತಟ್ಟಿಗೇ ಇಲ್ಲ. ಒಂದೇ ಸಮನೆ ಏರುತ್ತಿರುವ ಬೆಲೆಗಳು ಕೂಲಿಕಾರರನ್ನೇ ಏಕೆ, ಮಧ್ಯಮ ವರ್ಗದ ಜನರನ್ನು ಕೂಡ ಕಂಗಾಲು ಮಾಡಿವೆ. ಬೆಲೆಗಳು ಏರತೊಡಗಿದ ಮೇಲೆ ಚಳವಳಿ ಮಾಡಿ ತುಟ್ಟಿ ಭತ್ತೆಯನ್ನು ಹೆಚ್ಚಿಸಿಕೊಳ್ಳಬೇಕಾದರೆ ಕೂಲಿಕಾರರಿಗೆ ಕೆಲ ತಿಂಗಳು ಹಿಡಿಯುತ್ತದೆ. ಅಷ್ಟರಲ್ಲಿ ಸ್ಥಿತಿಗತಿ ಇನ್ನಷ್ಟು ಕೆಟ್ಟಿರುತ್ತದೆ. ಕೇಂದ್ರದಲ್ಲಿಯೂ ಕೆಲ ಪ್ರಾಂತಗಳಲ್ಲಿಯೂ ಕೂಲಿಕಾರ ಒಡೆಯರ ಸಂಬಂಧವನ್ನು ಹಿಡಿತದಲ್ಲಿಡಲು ಕಾಯದೆಗಳಾಗಿದ್ದರೂ ಅವುಗಳಲ್ಲಿರುವ ಅಂತರವೂ ಒಡೆಯ ಆಳುಗಳಿಗೊದಗಿದ ತಂಟೆಯ ವಿಷಯದಲ್ಲಿ ನಿಷ್ಪಕ್ಷಪಾತ ನ್ಯಾಯ ಮಂಡಳಗಳು ಕೊಟ್ಟ ತೀರ್ಪುಗಳನ್ನು ಆಚರಣೆಗೆ ತರುವಾಗ ಆಗುವ ಅಯೋಗ್ಯ ವಿಲಂಬವೂ ಕೂಲಿಕಾರರನ್ನು ಸಿಟ್ಟಿಗೆಬ್ಬಿಸಿದೆ. ಕಾಯದೆಗಳು ತಪ್ಪು ಮಾಡುವ ಕಾರಖಾನೆಯೊಡೆಯರನ್ನು ಹಾದಿಗೆ ತರುವಂತೆ ಮಾಡುವಷ್ಟು ಅಧಿಕಾರಸಂಪನ್ನವಾಗಿಲ್ಲ. ಇದರಿಂದ ಸರಕಾರದ ಕೈಯೂ ಕಟ್ಟಿದೆ. ಈ ಎಲ್ಲ ದೃಷ್ಟಿಯಿಂದ ಕಾಯದೆಯಲ್ಲಿ ತಿದ್ದುಪಡಿಗಳಾಗುವದು ಅವಶ್ಯವಿದೆ. ಇಲ್ಲದಿದ್ದರೆ ಸಿಟ್ಟಿಗೆದ್ದ ಕೂಲಿಕಾರರು ಅಯೋಗ್ಯರ ನೇತೃತ್ವಕ್ಕೆ ಬಲಿಬಿದ್ದು ರಾಷ್ಟ್ರಕ್ಕೂ ತಮಗೂ ಹಾನಿತಂದಾರು.

ವಿದೇಶಕ್ಕೆ ಭಾರತದ ಪಶುಪಕ್ಷಿಗಳು

ಕಳೆದ ೩ ತಿಂಗಳಲ್ಲಿ ಒಂದು ವಿಮಾನ ಸಾರಿಗೆಯ ಕಂಪನಿಯವರು ಕಲಕತ್ತೆಯಿಂದ ಸುಮಾರು ೨ ಲಕ್ಷ ೨೦ ಸಾವಿರಕ್ಕಿಂತಲೂ ಹೆಚ್ಚು ಪ್ರಾಣಿ ಮತ್ತು ಪಕ್ಷಿಗಳನ್ನು ಅಮೇರಿಕೆಗೂ ಯುರೋಪಕ್ಕೂ ಸಾಗಿಸಿದ್ದಾರೆಂದು ತಿಳಿದುಬರುತ್ತದೆ ಇವುಗಳಲ್ಲಿ ೨ ಸಾವಿರ ಪಕ್ಷಿಗಳೂ ಮತ್ತು ನಾಯಿಗಳೂ ೧ ನೂರು ಮಂಗಗಳು ಒಳಗೊಂಡಿವೆ. ಪಕ್ಷಿಗಳನ್ನು ಹಾಲಂಡದ ವ್ಯಾಪಾರಸ್ಥರಿಗೆ ಕೊಟ್ಟಿದ್ದು ಅವರು ಅವುಗಳನ್ನು ಪ್ರಾಣಿಸಂಗ್ರಹಾಲಯಗಳಿಗೆ ಮಾರಿಕೊಂಡಿರುವರು. ೩ ಹುಲಿಗಳನ್ನು ೫ ನರಿಯ ಮರಿಗಳನ್ನು ಮತ್ತು ೩ ಏಡಿಗಳನ್ನು ಲಂಡನದಲ್ಲಿಯ ಪ್ರಾಣಿಸಂಗ್ರಹಾಲಯಕ್ಕೆ ಸಾಗಿಸಲಾಗಿದೆ.

ಕುಮಟೆಯಲ್ಲಿ ಶ್ರೀ ಏ. ಆರ್. ಶಾನಭಾಗರು ಸಾರಸ್ವತ ವಿವಾಹ ಮಂಡಳದ ಯೋಜನೆಯೊಂದನ್ನು ಸಿದ್ಧಪಡಿಸಿದ್ದಾರೆ. ಸಾರಸ್ವತ ಸಮಾಜದ ಹೆಣ್ಣು ಹುಡುಗಿಯರ ಸಂಖ್ಯೆ ಹೆಚ್ಚಿಗಿದ್ದುದರಿಂದ ಅವರ ಕೆಲಸದಲ್ಲಿ ಸಹಾಯ ಮಾಡಲು ಈ ಸಂಸ್ಥೆ ಹೆಣಗುತ್ತಿವೆ.

ಸ್ವತಂತ್ರಭಾರತಕ್ಕೆ ಕನ್ನಡಿಗನು ಪ್ರಥಮ ಮುಖ್ಯ ಸೇನಾಪತಿ

ಲೆಫ್ಟನಂಟ ಜನರಲ ಕೆ. ಎಂ. ಕರಿಯಪ್ಪನವರನ್ನು ಭಾರತ ಸೈನ್ಯದ ಹೊಸ ಮುಖ್ಯ ಸೇನಾಪತಿಗಳಾಗಿ ನಿಯಮಿಸಲಾಗಿದೆಯೆಂದು ತಾ. ೪ ರ ರಾತ್ರಿ ಸಂರಕ್ಷಣ ಶಾಖೆಯಿಂದ ಸರಕಾರಿ ಪ್ರಕಟನೆ ಹೊರಟಿದೆ.

ಲೆ. ಜ. ಕೆ. ಎಂ. ಕರಿಯಪ್ಪನವರು ಪಶ್ಚಿಮಭಾಗದ ಮುಖ್ಯ ಸೇನಾಪತಿಗಳಾಗಿದ್ದರು. ಸರ್ ಬುಚರರ ತರುವಾಯ ಅವರ ಅಧಿಕಾರವನ್ನು ೧೯೪೯ ಜನವರಿ ೧೫ ಕ್ಕೆ ಲೆ. ಜ. ಕರಿಯಪ್ಪನವರು ಸ್ವೀಕರಿಸುವರು ಇವರು ಭಾರತದ ಪ್ರಥಮ ಹಿಂದೀ ಸೇನಾಪತಿಗಳು. ಇವರು ಅಚ್ಚ ಕನ್ನಡಿಗರಾಗಿದ್ದು ಕೊಡಗಿನ ಮಡಿಕೇರಿಯಲ್ಲಿ ೧೮೯೯ ಜನೇವರಿ ೨೮ ಕ್ಕೆ ಇವರು ಹುಟ್ಟಿದರು ೧೯೪೬ ರ ಪೂರ್ವದಲ್ಲಿ ಇವರನ್ನು ಮೇಜರ ಜನರಲ ಪದವಿಗೇರಿಸಲಾಗಿತ್ತು. ಕಳೆದ ೨೯ ವರ್ಷಗಳಿಂದಲೂ ಇವರು ಸೈನ್ಯಪಡೆಯಲ್ಲಿ ಇದ್ದಾರೆ.

"ಜನಗಣಮನ"ದ ಬಗ್ಗೆ ಕವಿ ರವೀಂದ್ರರ ಸ್ಪಷ್ಟೀಕರಣ

ವಿಶ್ವಭಾರತಿಯ ವ್ಯವಸ್ಥಾಪಕ ಮಂಡಲದವರು ತಾ. ೧ ರಂದು ಶಾಂತಿನಿಕೇತನದಿಂದ ಒಂದು ಪ್ರಕಟನೆ ಹೊರಡಿಸಿ, "ಜನಗಣಮನ" ಗೀತವನ್ನು ಕವೀಂದ್ರರು ೫ ನೆಯ ಜಾರ್ಜ ಬಾದಶಹರು ದಿಲ್ಲಿಗೆ ಬಂದಾಗ ಅವರ ಗೌರವಾರ್ಥ ದರ್ಬಾರಿನಲ್ಲಿ ಹಾಡಲು ರಚಿಸಿದರೆಂದು ಹೇಳಲಾಗುವ ಅಪಪ್ರಚಾರವನ್ನು ಖಂಡಿಸಿದ್ದಲ್ಲದೆ ಹೀಗೆ ಹೇಳುವದು ಕವಿ ರವೀಂದ್ರರ ಧವಲ ಕೀರ್ತಿಗೆ ಕಲಂಕಪ್ರಾಯವಾಗಿದೆಂದು ಅಂದಿದ್ದಾರೆ. ೧೯೩೭ರಲ್ಲಿ ಇಂಥದೇ ಟೀಕೆಯು ಈ ಗೀತದ ಬಗ್ಗೆ ನಡೆದಾಗ ಸ್ವತಃ ರವೀಂದ್ರರು ಕೊಟ್ಟ ಉತ್ತರವನ್ನು ಪ್ರಕಟನೆಯಲ್ಲಿ ಉದ್ಧರಿಸಲಾಗಿದ್ದು ರವೀಂದ್ರರ ಮೂಲ ಪತ್ರವು ಕೆಳಗಿನಂತಿದೆ.

"ಈ ಗೀತದಲ್ಲಿ, ಸುಖ–ದುಃಖಗಳೆಂಬ ತಗ್ಗುಮುಗ್ಗಾದ ದಾರಿಗುಂಟ ರಾಷ್ಟ್ರಗಳ ಜನತೆಯನ್ನು ಭವಿತವ್ಯದತ್ತ ಸಾಗಿಸುವ ರಥಿಕನ ಗುಣಗಾನ ಮಾಡಿದ್ದೇನೆ. ಮಾನವ ಕೋಟಿಯ ಭವಿತವ್ಯವನ್ನು ಚಿರಕಾಲವೂ ನಿರ್ಧರಿಸಬಲ್ಲ ರಥಿಕನು ೫ನೆಯ ಜಾರ್ಜನೂ ಅಲ್ಲ ೬ನೆಯ ಜಾರ್ಜನೂ ಅಲ್ಲ ಹಾಗೂ ಇನ್ನಾವ ಜಾರ್ಜನೂ ಆಗಲಾರನು."

ಜಾರ್ಜ ಬಾದಶಹರು ೧೯೧೧ ರಲ್ಲಿ ದಿಲ್ಲಿಗೆ ಬಂದಾಗ ಈ ಗೀತವನ್ನು ಹಾಡಲಿಲ್ಲವೆಂದೂ ಇದನ್ನು ಮೊದಲಸಲ ಹಾಡಿದ್ದು ೧೯೧೧ ಡಿಸೆಂಬರದಲ್ಲಿ ಕಲಕತ್ತೆಯಲ್ಲಿ ಸೇರಿದ ಅ. ಭಾ. ಕಾಂಗ್ರೆಸ ಅಧಿವೇಶನದಲ್ಲಿ ಎಂದೂ ಪ್ರಕಟನೆಯಲ್ಲಿ ವಸ್ತುಸ್ಥಿತಿಯನ್ನು ಸ್ಪಷ್ಟಪಡಿಸಲಾಗಿದೆ.

ಶ್ರೀ. ದಿವಾಕರ ರಂಗರಾಯರಿಗೆ ಕೇಂದ್ರ ಸರಕಾರದ ಮಂತ್ರಿಪದ

ಕರ್ನಾಟಕದ ಮುಖಂಡರೂ ಘಟನಾ ಸಮಿತಿಯ ಸದಸ್ಯರೂ ಆದ ಶ್ರೀ. ರಂಗರಾವ ದಿವಾಕರರು ದಿಲ್ಲಿಯ ಕೇಂದ್ರ ಸರಕಾರದಲ್ಲಿ ಸುದ್ದಿ ಆಕಾಶವಾಣಿಯ ಮಂತ್ರಿಗಳಾಗಿ ನಿಯುಕ್ತರಾಗಿದ್ದಾರೆ. ಇದೇ ತಾ—೭ ಮಂಗಳವಾರ ಮುಂಜಾನೆ ಗ. ಜ. ರಾಜಗೋಪಾಲಾಚಾರ್ಯರ ಸಮ್ಮುಖದಲ್ಲಿ ಪ್ರತಿಜ್ಞಾವಿಧಿ ಜರುಗಿ ಅವರು ಅಧಿಕಾರ ಸೂತ್ರಗಳನ್ನು ವಹಿಸಿದರು. ಇವರ ಜೊತೆಜೊತೆಗೆ ಡಾ. ಕೇಸಕರರನ್ನು ವಿದೇಶ ಶಾಖೆಯ ಉಪಮಂತ್ರಿಗಳನ್ನಾಗಿ ನಿಯಮಿಸಲಾಗಿದೆ ಇವರ ಪ್ರತಿಜ್ಞಾವಿಧಿಯೂ ತಾ. ೭ಕ್ಕೆ ನಡೆದಿತು.

ಏಕಕಾಲಕ್ಕೆ ಎಲ್ಲ ಪ್ರಾಂತಗಳ ಭಾಷಾನುಗುಣ ಪ್ರಾಂತರಚನೆ

ಭಾಷಾವಾರಪ್ರಾಂತರಚನಾ ಸಮಿತಿಯು ತನ್ನ ವರದಿಯನ್ನು ಸಿದ್ಧಗೊಳಿಸಿದ್ದು ಇಷ್ಟರೊಳಗೇ ಅದು ಘಟನಾ ಸಮಿತಿಯ ಅಧ್ಯಕ್ಷರ ಕೈಸೇರುವದೆಂದು ತಿಳಿಯುತ್ತದೆ.

ಈ ಸಮಿತಿಯ ಕೊನೆಯ ಸಭೆಯು ಇತ್ತೀಚೆಗೆ ಕೂಡಿದಾಗ ಸಹಾಯಕ ಸದಸ್ಯರು ಸಮಿತಿಯ ಸದಸ್ಯರ ಮೇಲೆ ಬಹಳ ಪರಿಣಾಮವನ್ನುಂಟು ಮಾಡಿದರೆಂದು ಹೇಳಲಾಗಿದೆ. ಭಾಷಾನುಗುಣ ಪ್ರಾಂತರಚನೆಗೆ ಎಲ್ಲಕಡೆಯಲ್ಲಿಯೂ ಜನತೆಯ ಬೆಂಬಲವಿರುವದರಿಂದ ಒಂದನ್ನು ಬಿಟ್ಟು ಒಂದು ಪ್ರಾಂತರಚನೆ ಮಾಡಿದ್ದಾದರೆ ದೇಶವ್ಯಾಪ್ಯಂತ ಭೀಕರ ಪರಿಸ್ಥಿತಿಯುಂಟಾಗುವದೆಂದೂ ಎಲ್ಲ ಪ್ರಾಂತಗಳನ್ನೂ ಏಕಕಾಲಕ್ಕೆ ರಚಿಸುವದು ಯುಕ್ತವೆಂದೂ ಇಲ್ಲವಾದರೆ ಎಲ್ಲವನ್ನೂ ಮುಂದೂಡಬೇಕೆಂದೂ ಸಮಿತಿಯು ಅಭಿಪ್ರಾಯಪಟ್ಟದೆಯೆಂದೂ ತಿಳಿಯುತ್ತದೆ.

ಭಾರತದ ರಾಷ್ಟ್ರಭಾಷೆಯ ಸಮಸ್ಯೆ

ಪ್ರಾಂತ ಭಾಷೆ—ರಾಷ್ಟ್ರ ಭಾಷೆಗಳ ಕ್ಷೇತ್ರ ನಿರ್ದೇಶದಲ್ಲಿ ಬರುವ ತೊಡಕ: ರಾಷ್ಟ್ರಭಾಷೆಯ ವ್ಯಾಪ್ತಿ ಬೆಳೆಸುವ ವಿಧಿಯೇ ಇಲ್ಲ

(ಲೇಖಕರು:— ಡಾ. ರಾಜೇಂದ್ರ ಪ್ರಸಾದ)

ಲೇಕಾಂಕ ೧

ಅಪಭ್ರಂಶಗಳನ್ನು ಬದಿಗಿಟ್ಟರೆ ಭಾರತದ ಪ್ರಮುಖ ಭಾಷೆಗಳು ಇವು: ಬಂಗಾಲಿ, ಹಿಂದಿ, ಪಂಜಾಬಿ, ಗುಜರಾಥಿ, ಮರಾಠಿ, ತೆಲುಗು, ತಮಿಳು, ಮಲೆಯಾಳಿ, ಕನ್ನಡ, ಉಡಿಯಾ ಮತ್ತು ಅಸಾಮಿ. ಪ್ರತಿಯೊಂದು ಭಾಷೆಯೂ ಅಸಂಖ್ಯ ಜನರ ಲಿಖಿತ ಮತ್ತು ಗ್ರಾಂಥಿಕ ಭಾಷೆಯಾಗಿದ್ದು, ದೇಶದಲ್ಲಿ ಸಾಕಷ್ಟು ವಿಸ್ತಾರವಾಗಿ ಪ್ರಚಲಿತವಾಗಿದೆ. ಅವುಗಳಲ್ಲಿ ಹಿಂದಿ, ಉರ್ದು ಮತ್ತು ಹಿಂದುಸ್ತಾನಿಯೆಂಬ ವಿವಿಧ ಶೈಲಿಗಳನ್ನೊಳಗೊಂಡ ಹಿಂದಿಯೇ ಅತ್ಯಂತ ವಿಸ್ತಾರವಾಗಿ ಪ್ರಚುರವಾಗಿರುವ ಭಾಷೆ. ಭಾರತದ ಒಕ್ಕೂಟ ಸರಕಾರದ ಆಡಳಿತದ ಕೆಲಸ ಯಾವ ಭಾಷೆಯಲ್ಲಿ ನ್ಯವಹರಿಸಲ್ಪಡಬೇಕೆಂಬ ಪ್ರಶ್ನೆಯೆದ್ದಿದೆ. ಅಂಥ ಒಂದು ಭಾಷೆ ಅವಶ್ಯವೆಂಬ ಮಾತು ಸ್ವಯಂವೇದ್ಯ ಸಿದ್ಧಾಂತವೆಂದು ಒಪ್ಪಿಕೊಳ್ಳಲ್ಪಟ್ಟಿದೆ. ಸಂಗಡಲೆ ಈ ಭಾಷೆಗಳಲ್ಲಿ ಪ್ರತಿಯೊಂದೂ ಅವಶ್ಯವಾಗಿದೆಯೆಂದೂ ಭಾವಿಸಲ್ಪಟ್ಟಿದೆ. ಸಂಗಡಲೆ ಪ್ರತಿಯೊಂದೂ ತನ್ನ ತನ್ನ ಪ್ರದೇಶದಲ್ಲಿ ಸರಕಾರಿ ಭಾಷೆಯಾಗಬೇಕೆಂಬ ಅಭಿಲಾಷೆಯೂ ಇದೆ. ಈ ಪ್ರಕಾರ,—ಅಖಿಲ ಭಾರತದ ಉಪಯೋಗಕ್ಕಾಗಿ ಅಂಗೀಕರಿಸಲ್ಪಟ್ಟ ಭಾಷೆಯು ಆ ವಿಶಿಷ್ಟ ಪ್ರದೇಶದ ಭಾಷೆಯಾಗಿದ್ದ ಹೊರತು-ಪ್ರತಿಯೊಂದು ಪ್ರದೇಶಕ್ಕೂ, ಸ್ಥಾನಿಕ ಅಥವಾ ಪ್ರಾಂತಿಕ ವಿಷಯಗಳಿಗಾಗಿ ಒಂದು, ಅಖಿಲ ಭಾರತ ವ್ಯವಹಾರಕ್ಕೊಂದು, ಹೀಗೆ ಎರಡು ಭಾಷೆಗಳೊಡನೆ ಸಂಪರ್ಕವುಂಟಾಗುವದು. ಅಖಿಲ ಭಾರತದ ಆಡಳಿತಕ್ಕಾಗಿ ಒಂದು ಮತ್ತು ಆಯಾ ಪ್ರಾಂತದ ವ್ಯವಹಾರಕ್ಕಾಗಿ ಇನ್ನೊಂದು ಭಾಷೆ ಬೇಕೆಂಬ ಕೋರಿಕೆ ಸ್ವಾಭಾವಿಕವೆಂದೇ ಕಾಣಿಸಿದರೂ ಅಂಥ ಕೋರಿಕೆಯ ಪ್ರತೀತಿಗಳು ಮಾತ್ರ ಸರಿಯಾಗಿ ಗ್ರಹಿಸಲ್ಪಟ್ಟಂತಿಲ್ಲ.

ಸಂಸ್ಕೃತದ ಸ್ಥಾನ

ಈ ಸಮಸ್ಯೆ ಹೊಸದೇನೂ ಅಲ್ಲ. ಅದು ಈ ಹಿಂದೆಯೂ ಉದ್ಭವಿಸಿದೆ. ಜನಸಾಮಾನ್ಯರ ಭಾಷೆಯಾಗಿರದೆ, ಬರಿ ಕೆಲ ವಿದಗ್ಧರಷ್ಟೆ ಅಭ್ಯಸಿಸುತ್ತಿದ್ದ ಭಾಷೆಯಾಗಿದ್ದರೂ ಸಂಸ್ಕೃತವೇ ದೇಶದಲ್ಲೆಲ್ಲ ಅಖಿಲ ಭಾರತ ವ್ಯವಹಾರಕ್ಕೆ ಉಪಯೋಗಿಸಲ್ಪಡುತ್ತಿದ್ದ ಕಾಲವೊಂದಿತ್ತು. ಸಾಹಿತ್ಯಾಲಂಕಾರಕಾವ್ಯಗಳನ್ನು ಮಾತ್ರವಲ್ಲ, ಆದರೆ ತತ್ವಜ್ಞಾನ, ವೈದ್ಯ, ಶಿಲ್ಪ, ರಸಾಯನ ಶಾಸ್ತ್ರ, ಗಣಿತ, ಜ್ಯೋತಿಷ ಮೊದಲಾದ ಎಲ್ಲ ಶಾಸ್ತ್ರೀಯ ಗ್ರಂಥಗಳನ್ನೂ ಸಮಸ್ತ ಭಾರತದಲ್ಲಿ ಪ್ರಶಸ್ತಿ ಪಡೆಯಬಯಸುವ ಲೇಖಕರೆಲ್ಲರೂ ಸಂಸ್ಕೃತದಲ್ಲೆ ಬರೆಯುತ್ತಿದ್ದರು. ಧರ್ಮಶಾಸ್ತ್ರಗಳು (ಅಂದಿನ ಕಾಯಿದೆಗಳು) ಕೂಡ ಸಂಸ್ಕೃತದಲ್ಲೆ ಬರೆಯಲ್ಪಟ್ಟಿದ್ದವು. ಪವಿತ್ರ ವಾಙ್ಮಯವಂತೂ ಸಂಸ್ಕೃತಮಯವಾಗಿಯೆ ಇತ್ತು. ಆದರೂ ಸಂಸ್ಕೃತಕ್ಕೂ ಇತರ ಪ್ರಾಂತಿಕ ಭಾಷೆಗಳಿಗೂ ಎಂದಾದರೂ ತಿಕ್ಕಾಟ ಬಂದಂತೆ ಕಾಣುವದಿಲ್ಲ. ಸಂಸ್ಕೃತಜನ್ಯವೆನಿಸಿದ ಉತ್ತರದ ಮತ್ತು ಪಶ್ಚಿಮದ ಭಾಷೆಗಳಷ್ಟಲ್ಲದಿದ್ದರೂ ಸರ್ವಥಾ ಬೇರೊಂದು ಮೂಲದಿಂದ ಉದ್ಭವಿಸಿದ ದಕ್ಷಿಣದ ಭಾಷೆಗಳು ಕೂಡ ಸಂಸ್ಕೃತದಿಂದ ಅನೇಕ ವಿಷಯವಿಚಾರಗಳನ್ನು ಮಾತ್ರವಲ್ಲದೆ ಶಬ್ದರಾಶಿಯನ್ನು ಕೂಡ ಎತ್ತಿಕೊಂಡವು.

ಪರ್ಶಿಯನ್ ಭಾಷೆಯ ಆಗಮನ

ಮುಸ್ಲಿಮರು ಭಾರತಕ್ಕೆ ಬಂದು ಶಾಸಕರಾದಾಗ, ಅವರು ಸರಕಾರಿ ಮತ್ತು ಆಡಳಿತದ ಕೆಲಸಗಳಿಗೆ ತಮ್ಮದೆ ಭಾಷೆಯನ್ನು ಉಪಯೋಗಿಸಿದರು. ಆದರೆ ಇತರ ವಿಚಾರಗಳಲ್ಲಿ ಅವರು ಸಂಸ್ಕೃತವನ್ನೂ ಪ್ರಾಂತಿಕ ಭಾಷೆಗಳನ್ನೂ ಅವವುಗಳ ಪಾಡಿಗೆ ಬಿಟ್ಟರು. ಇಸ್ಲಾಮಿನ ಭಾಷೆ ಅರಬ್ಬಿ. ಅದು ಪವಿತ್ರ ಕುರಾಣದ, ಹಾದಿಗಳ ಮತ್ತು ಪ್ರಾಚೀನ ಮುಸ್ಲಿಮರ ಧಾರ್ಮಿಕ ಗ್ರಂಥಗಳಲ್ಲಿ ಬಹು ಭಾಗದ ಭಾಷೆ. ಆದರೆ ಭಾರತದ ಮುಸ್ಲಿಂ ರಾಜರ ಭಾಷೆ ಅರಬ್ಬಿಯಾಗಿರಲಿಲ್ಲ. ಅವರು ತಮಗೆ ಹೆಚ್ಚು ಬಳಕೆಬಿದ್ದಿದ್ದ ಪರ್ಶಿಯನ್ ಭಾಷೆಯನ್ನೆ ಉಪಯೋಗಿಸಿದರು. ಆದುದರಿಂದ ಅರಬ್ಬಿಯು ವಿದ್ವಾಂಸರಾದ ಧರ್ಮಗುರುಗಳ ಮತ್ತು ಆಲಿಮರ ಭಾಷೆಯಾಗಿ ಉಳಿದಿದೆಯಲ್ಲದೆ, ಸಾಮಾನ್ಯ ಮುಸ್ಲಿಮರದಾಗಿ ಅಲ್ಲ. ಪರ್ಶಿಯನ್ ಭಾಷೆ ಆಸ್ಥಾನದ ಭಾಷೆಯಾಯಿತು. ಇಸ್ಲಾಮಧರ್ಮವನ್ನಂಗೀಕರಿಸಿದ ಹಿಂದೀಯರಷ್ಟೇ ಅಲ್ಲ, ಅಸಂಖ್ಯ ಹಿಂದುಗಳು ಕೂಡ ಅದನ್ನು ಅಭ್ಯಸಿಸಿದರು. ಪರ್ಶಿಯನ್ ಭಾಷೆಯಮೇಲೂ ವಾಙ್ಮಯದ ಮೇಲೂ ಅರಬ್ಬಿಯ ಪ್ರಭಾವ ವಿಶೇಷವಾಗಿತ್ತೆಂಬದು ನಿಜ. ಆದರೂ ಭಾರತದ ಮಟ್ಟಿಗೆ ಅರಬ್ಬಿಗಿಂತಲೂ ಪರ್ಶಿಯನ್ ಭಾಷೆಯೇ ಅಂಗೀಕರಿಸಲ್ಪಟ್ಟಿತ್ತು. ಅದು ಎಷ್ಟು ಪ್ರಚುರವಾಗಿತ್ತೆಂದರೆ ಸಾಮಾನ್ಯ ಜನರು ಕೂಡ ತಮ್ಮ ಆಡಳಿತ ವ್ಯವಹಾರಗಳಿಗೆ, ಈಗ ಅನೇಕ ಹಿಂದೀಯರು ತಮ್ಮ ಖಾಸಗಿ ವ್ಯವಹಾರಕ್ಕೆ ಕೂಡ ಇಂಗ್ಲಿಷನ್ನು ಬಳಸಿಕೊಂಡಿರುವಂತೆ, ಅದನ್ನೇ ಬಳಸತೊಡಗಿದರು. ಕೆಲವು ಜಮೀನುದಾರರ ಲೆಕ್ಕಗಳೂ ಕಾಗದಪತ್ರಗಳೂ ಕಳೆದ ಶತಕದ ಅಂತ್ಯದ ವರೆಗೂ ಪರ್ಶಿಯನ್ ಭಾಷೆಯಲ್ಲೆ ಇಡಲ್ಪಡುತ್ತಿದ್ದುದನ್ನು ನಾನು ನೋಡಿರುವೆ.

ಇಂಗ್ಲೀಷು ಕಾಲಿಟ್ಟಿತು

ಇಂಗ್ಲೀಷರು ಬಂದಾಗ ಅವರು ತಮ್ಮ ದೇಶಭಾಷೆಯನ್ನು ಆಡಳಿತಕ್ಕಾಗಿ ಉಪಯೋಗಿಸಿ, ಕಾಲಾಂತರದಲ್ಲಿ ಪರ್ಶಿಯನ್ ಭಾಷೆಯ ಸ್ಥಾನದಲ್ಲಿ ಇಂಗ್ಲೀಷನ್ನು ಸ್ಥಾಪಿಸಿದರು. ಮುಸ್ಲಿಮರ ಕಾಲದಲ್ಲಿ ಪರ್ಶಿಯನ್ ಭಾಷೆಯನ್ನುಪಯೋಗಿಸುತ್ತಿದ್ದ ಇಂಗ್ಲೀಷರು ಮುಂದೆ ಬಂದ ಮೇಲೂ ಶುದ್ಧ ಆಲಸ್ಯದಿಂದ ಹಲಗಾಲ ಅದಕ್ಕೇ ಅಂಟಿಕೊಂಡಿದ್ದ ಜನರು ಮೆಲ್ಲಮೆಲ್ಲನೆ ಅದನ್ನು ತೊರೆದು ಇಂಗ್ಲೀಷನ್ನು ಬಳಕೆಗೆ ತಂದರು. ಪರಿಣಾಮವಾಗಿ ಈಗ ಕೆಲ ವರ್ಷಗಳಿಂದ ಇಂಗ್ಲೀಷು ಸರಕಾರಿ ಮತ್ತು ಆಡಳಿತ ಭಾಷೆಯಾಗಿ ಮಾತ್ರವಲ್ಲ, ವ್ಯಾಪಾರಿ ಸಂಸ್ಥೆಗಳ ಮೊದಲಾದವುಗಳ ಭಾಷೆಯಾಗಿಯೂ ಅಂಗೀಕರಿಸಲ್ಪಟ್ಟಿದೆ. ಇದು ಅನಿವಾರ್ಯವೇ ಆಗಿತ್ತು. ಏಕೆಂದರೆ, ಇಂಗ್ಲೀಷು ಬೋಧಭಾಷೆಯಾಗಿ ಅಂಗೀಕರಿಸಲ್ಪಟ್ಟಂದಿನಿಂದ ಅದು ಹಬ್ಬುತ್ತ ಹಬ್ಬುತ್ತ ವಿಶ್ವವಿದ್ಯಾಲಯಗಳಲ್ಲಿ ಉಚ್ಚ ಶಿಕ್ಷಣಕ್ಕಾಗಿ ಮಾತ್ರವಲ್ಲ, ಕಳೆ ದರ್ಜೆಯ ಶಾಲೆಗಳಲ್ಲಿ ಕೂಡ ಶಿಕ್ಷಣ ಮಾಧ್ಯಮವಾಗಿ ಉಪಯೋಗಿಸಲ್ಪಟ್ಟಿತು. ಈಚೀಚೆಗೆ ರಾಷ್ಟ್ರೀಯ ಆಂದೋಲನ ಬೆಳೆದು ಬಲಗೊಂಡ ಮೇಲೆಯೆ ಭಾರತೀಯ ಭಾಷೆಗಳು ಶಿಕ್ಷಣಮಾಧ್ಯಮವೆಂದು ಪರಿಗಣಿಸಲ್ಪಟ್ಟವು. ಇಂದು ಹಲವು ವಿಶ್ವವಿದ್ಯಾಲಯಗಳು ದೇಶಭಾಷೆಗಳನ್ನು ಸ್ವೀಕರಿಸಲು ನಿರ್ಧರಿಸಿವೆ. ಆದರೂ ಯಾವ ವಿಶ್ವವಿದ್ಯಾಲಯವೂ ಇನ್ನೂ ಪೂರ್ತಿಯಾಗಿ ಹಾಗೆ ಮಾಡಿಲ್ಲ.

ಒತ್ತಾಯವಿಲ್ಲ

ಮುಸ್ಲಿಂ ರಾಜರೂ ಇಂಗ್ಲೀಷರೂ ಭಾರತದಲ್ಲಿ ಮಾಡಿದ್ದರಲ್ಲಿ ವಿಶೇಷವೇನೂ ಇಲ್ಲ. ಜಗತ್ತಿನಲ್ಲೆಲ್ಲ ಒಂದು ರಾಷ್ಟ್ರ ಇನ್ನೊಂದನ್ನು ಗೆದ್ದಾಗ ಇಲ್ಲವೆ ಇನ್ನೊಂದರ ಮೇಲೆ ಪ್ರಭುತ್ವವನ್ನು ಸ್ಥಾಪಿಸಿದಾಗ ಹೀಗೇ ಆಗಿದೆ. ಈಗ ಪರಕೀಯರ ಆಳಿಕೆ ಕೊನೆಗೊಂಡಿದೆಯಾಗಿ ನಮ್ಮ ವ್ಯವಹಾರವೆಲ್ಲ ನಮ್ಮ ಸ್ವಂತ ಭಾಷೆಯಲ್ಲೆ ನಡೆಯಬೇಕೆಂಬ ಅಪೇಕ್ಷೆ ಸಹಜವಾಗಿಯೆ ಉಂಟಾಗಿದೆ. ಆದರೆ ದೇಶದ ಬೇರೆ ಬೇರೆ ಭಾಗಗಳಲ್ಲಿ ಅನೇಕ ಬೇರೆಬೇರೆ ಭಾಷೆಗಳು ಪ್ರಚಲಿತವಾಗಿರುವದರಿಂದ ಮೇಲೆ ಹೇಳಿದಂತೆ ಅಖಿಲ ಭಾರತೀಯ ವ್ಯವಹಾರಕ್ಕೆ ಒಂದು ಭಾಷೆ ಬೇಕಾಗಿದೆ. ದೇಶದ ಯಾವುದೊಂದು ಭಾಗದ ಮೇಲೆ ಅದಕ್ಕೆ ಸಮ್ಮತವಾಗದ ರಾಜ್ಯಪದ್ಧತಿಯನ್ನು ಹೇರುವ ಪ್ರಶ್ನೆ ಹೇಗೆ ಉದ್ಭವಿಸುವದೇ ಇಲ್ಲವೊ ಹಾಗೆಯೇ ದೇಶದ ಯಾವುದೊಂದು ಪ್ರದೇಶದ ಭಾಷೆಯನ್ನು ಉಳಿದವುಗಳ ಮೇಲೆ ಒತ್ತಾಯದಿಂದ ಹೊರಿಸಿ ಒಂದು ಬಗೆಯ ಭಾಷಾತ್ಮಕ ಸಾಮ್ರಾಜ್ಯಶಕ್ತಿಯನ್ನು ಸ್ಥಾಪಿಸುವ ಪ್ರಶ್ನೆಯೂ ಇಲ್ಲವೇ ಇಲ್ಲ. ಈಗ ದೇಶ ಒಪ್ಪಬೇಕಾಗಿರುವ ಸಾಮಾನ್ಯ ಭಾಷೆಗೂ ಇಂಗ್ಲಿಷ ಇಲ್ಲವೆ ಪರ್ಶಿಯನ್ ಭಾಷೆಗೂ ಇರುವ ಅಂತರವೆಂದರೆ ಇದೇ. ಇಂದಿನ ಸಾಮಾನ್ಯ ಭಾಷೆಯನ್ನು ಆ ಭಾಷೆಯ ಕ್ಷೇತ್ರದ ಹೊರಗಿನ ಜನರೂ ಪ್ರದೇಶಗಳೂ ಸ್ವೇಚ್ಛೆಯಿಂದ ಒಪ್ಪುವವು. ಆದರೆ ಮುಸ್ಲಿಂರು ಪರ್ಶಿಯನ್ ಮತ್ತು ಇಂಗ್ಲೀಷರು ಇಂಗ್ಲೀಷ ಭಾಷೆಯನ್ನು ಹೇರಿದಾಗ ಜನರಿಗೆ ಅದನ್ನು ಒಪ್ಪಿಕೊಳ್ಳುವ ಬೇರೆ ಆಯ್ಕೆ ಇದ್ದಿಲ್ಲ. ಈ ಒಂದು ಮಾತನ್ನು ಗ್ರಹಿಸಿಕೊಂಡರೆ ಮುಂದೆ ಅಧುನಿಕ ವಿಜ್ಞಾನಗಳಲ್ಲಿ ಆದ ಪರಿಣಾಮಗಳೇನಾಗಬಹುದೆಂಬುದು ಅರಿಯಲು ಸುಲಭವಾಗುವದು.

ಸಂಪರ್ಕದ ಸಾಧನಗಳು ವಿರಳವಾಗಿದ್ದಾಗ ವೇಗದ ಸಾಗಾಟ ಅಸಾಧ್ಯವಾಗಿದ್ದಾಗ ಸಾಮಾನ್ಯ ಭಾಷೆಯ ಅವಶ್ಯಕತೆ ಅಷ್ಟು ಇರಲೂ ಇಲ್ಲ, ಎನಿಸುತ್ತಲೂ ಇರಲಿಲ್ಲ. ಆದರೆ ಆಧುನಿಕ ವಿಜ್ಞಾನಗಳೂ ಸಾರಿಗೆ ಸಂಪರ್ಕಗಳ ಸಾಧನಗಳೂ ಎಂಥ ಬದಲಾವಣೆಯನ್ನು ತಂದಿವೆಯೆಂದರೆ, ದೇಶದ ಒಂದು ಭಾಗವನ್ನು ಇನ್ನೊಂದರಿಂದ ಬೇರೆಯಾಗಿರುವದು ಅತ್ಯಂತ ಕಠಿಣವಾಗಿದೆ. ಹಿಂದೂ ಕಾಯಿದೆಯಲ್ಲಿ ಸ್ಮೃತಿಗಳಿಗೆಷ್ಟೋ ಅಷ್ಟೇ ದೇಶಾಚಾರಕ್ಕೂ ಮಾನ್ಯತೆಯನ್ನು ಕೊಡಲಾಗಿತ್ತು. ಪ್ರತಿಯೊಂದು ಪ್ರದೇಶವೂ ಜನಾಂಗವೂ ಹೆಚ್ಚುಕಡಿಮೆ ಸ್ವತಂತ್ರವಾಗಿ ಬೆಳೆಯುತ್ತಿದ್ದುದೇ ಇದಕ್ಕೆ ಕಾರಣ. ಸ್ಮೃತಿ ಶಾಸನದ ಪ್ರಭಾವ ಅವುಗಳ ಮೇಲಾಗಿದ್ದರೂ ಅವು ಅದಕ್ಕೆ ಪೂರ್ತಿ ಅಧೀನವಾಗಿಯೂ ಇರಲಿಲ್ಲ, ಪರಿಮಿತವಾಗಿಯೂ ಇರಲಿಲ್ಲ. ಹೀಗೆ ನಮ್ಮಲ್ಲಿ ಲೆಕ್ಕವಿಲ್ಲದಷ್ಟು ಬಗೆಯ ರೂಢಿ ಆಚಾರಗಳುಂಟಾಗಿವೆ. ಅವುಗಳಿಂದ ಆ ಮಹಾ ಐಕ್ಯಕ್ಕೆ ಘಾತವೊದಗದೆ ಮೆರಗೂ ಸೊಬಗೂ ಬಂದಿವೆಯೆನ್ನೋಣ.

ಆಧುನಿಕ ಕಾಲದ ಸಮಸ್ಯೆಗಳು

ಇಂದಿನ ಸ್ಥಿತಿ ಮಾತ್ರ ಬೇರೆ. ಆಧುನಿಕ ವಿಜ್ಞಾನಗಳ ಫಲವಾಗಿ ಮಾತ್ರವಲ್ಲ ಬ್ರಿಟಿಶ ಆಳಿಕೆಯ ಪರಿಣಾಮವಾಗಿಯೂ ನಮ್ಮ ದೇಶದಾದ್ಯಂತಕ್ಕೂ ಅನ್ವಯಿಸುವ ಸಾಮಾನ್ಯ ಶಾಸನಗಳು ಎಷ್ಟೋ ಉಂಟಾಗಿವೆ. ಎಲ್ಲ ಪ್ರಾಂತಗಳಲ್ಲಿಯೂ ಅನೇಕ ಸಂಸ್ಥಾನಗಳಲ್ಲಿಯೂ ಕಳೆದ ನೂರು ವರ್ಷಕ್ಕಿಂತಲೂ ಹೆಚ್ಚು ಕಾಲದಿಂದ ಕಾಯಿದೆಗಳೆಲ್ಲ ಇಂಗ್ಲೀಷು ಭಾಷೆಯಲ್ಲೆ ನಿರ್ಮಿತವಾಗುತ್ತಿರುವದರಿಂದ ದೇಶದಲ್ಲೆಲ್ಲ ಅವೆಲ್ಲವೂ ವಿದಿತವಾಗಿವೆ ಮತ್ತು ಅವಶ್ಯವಿದ್ದಲ್ಲಿ ಅಭ್ಯಸಿಸಲ್ಪಡುತ್ತಿವೆ. ಹೈಕೋರ್ಟುಗಳ ತೀರ್ಪುಗಳು ಇಂಗ್ಲೀಷಿನಲ್ಲೆ ಇದ್ದು, ಉಳಿದ ಹೈಕೋರ್ಟುಗಳು ಅವುಗಳನ್ನು ಅನುಸರಿಸದಿದ್ದರೆ ಕೂಡ ಅವುಗಳನ್ನು ಅಭ್ಯಸಿಸುವದೂ ಉದಾಹರಿಸುವುದೂ ಉಲ್ಲೇಖಿಸುವುದೂ ಸಾರ್ವತ್ರಿಕವಾಗಿದೆ. ಅದೇ ಪ್ರಕಾರ ವಿವಿಧ ಪ್ರಾಂತಿಕ ಶಾಸನ ಸಭೆಗಳ ಕಾರ್ಯಕಲಾಪಗಳೆಲ್ಲ ಇಂಗ್ಲೀಷಿನಲ್ಲಿ ನಡೆಯುತ್ತಿರುವುದರಿಂದ ಕೇಂದ್ರ ಶಾಸನ ಸಭೆಯ ವರದಿಗಳಂತೆ ಅವೂ ಸರ್ವತ್ರ ಉಪಲಬ್ಧವಾಗುತ್ತವೆ. ಇನ್ನುಮೇಲೆ ಒಕ್ಕೂಟದ ಸರಕಾರಿ ಮತ್ತು ಆಡಳಿತದ ಕಾರ್ಯಗಳಿಗಾಗಿ ಒಂದು ಭಾಷೆಯನ್ನೂ ಒಂದೊಂದು ಭಾಷಾಪ್ರದೇಶವೂ ತನ್ನ ಸರಕಾರಿ ಮತ್ತು ಆಡಳಿತದ ಕೆಲಸಗಳಿಗಾಗಿ ತನ್ನದೇ ಭಾಷೆಯನ್ನು ಉಪಯೋಗಿಸುವದಾದರೆ ಇವುಗಳ ನಡುವೆ ಸಂಬಂಧವೇನಿರಬೇಕೆಂಬ ಪ್ರಶ್ನೆಯೊಂದು ಏಳುತ್ತದೆ. ಪ್ರತಿಯೊಂದು ಪ್ರಾಂತವೂ ತನ್ನ ತನ್ನ ಕಾಯಿದೆಗಳನ್ನು ತನ್ನ ತನ್ನ ಭಾಷೆಯಲ್ಲೇ ಬರೆಯುವದಾದರೆ ಉಳಿದೆಲ್ಲ ಪ್ರಾಂತಗಳು ಅವುಗಳನ್ನು ಅರಿತುಕೊಳ್ಳುವ ಸಂಭವ ವಿರಳವಾಗುವವು. ಆ ಪ್ರಾಂತವೂ ಕಾಯಿದೆಗಳಲ್ಲಿನ ಶಾಸನಗಳ ಪರಿಜ್ಞಾನವಿಲ್ಲದ ಮುಕ್ತವಾಗಬೇಕಾಗುತ್ತದೆ. ಪ್ರತಿಯೊಂದು ಭಾಷಾಪ್ರದೇಶದಲ್ಲಿರುವ ನ್ಯಾಯಸ್ಥಾನಗಳು, ಸ್ವಾಭಾವಿಕವಾಗಿ, ಆಯಾ ಭಾಷೆಯಲ್ಲೆ ವ್ಯವಹರಣಗಳನ್ನು ನಡೆಸಬೇಕಾಗುವದರಿಂದ ಹೈಕೋರ್ಟುಗಳ ತೀರ್ಪುಗಳು ಪ್ರಾದೇಶಿಕ ಭಾಷೆಗಳಲ್ಲೆ ಇರಬೇಕಾಗುವದು. ಆಗ ಆ ಹೈಕೋರ್ಟಿನ ತೀರ್ಪುಗಳ ಪ್ರಯೋಜನವನ್ನು ಆ ಹೈಕೋರ್ಟು ಪಡೆಯಬಾರದೆ ಆದರದನ್ನು ಇದು ಪಡೆಯಬಾರದೆ

[illegible]

ಬಿಟ್ಟು. ಆಗ ಹೊಸ ತೀರ್ಪಿನ ತರ್ಜು ಅಪೀಲು ಬಂದಿತೆಂದರೆ ಅದರ ಅನುವಾದವನ್ನೇ ಅಭ್ಯಸಿಸಿ ಅವರು ಮುಂದೆ ಸಾಗುವದೋ ಹೇಗೆ? ಎಷ್ಟೋ ವೇಳೆ ಅಪೀಲಿನ ಪರಮೋಚ್ಚ ನ್ಯಾಯಾಲಯದಲ್ಲಿ ಮೂಲ ತೀರ್ಪಿನ ವಿರುದ್ಧ ಅಪೀಲು ಬರುವದೋ ಅದು ಅನೇಕ ವರ್ಷಗಳ ಅವಧಿಯಲ್ಲಿ ಅನೇಕ ಕೆಳಕೋರ್ಟುಗಳು [illegible] ಕಾಯಿದೆಯ ಪ್ರಶ್ನೆಯ ಬಗ್ಗೆ ಕೊಟ್ಟ ತೀರ್ಪುಗಳ ಕ್ರೋಢೆಯಲ್ಲಿ ಕೊನೆಯದಾಗಿರುತ್ತದೆ. ಅಂಥ ತೀರ್ಪಿನ ವಿರುದ್ಧ ಪರಿಷ್ಕ ನ್ಯಾಯಾಲಯದವರು ಕೊಡುವ ನಿರ್ಣಯದಿಂದ ಕೆಳಕೋರ್ಟುಗಳ ಅಸಂಖ್ಯ ನಿರ್ಣಯಗಳೇ ತಲೆಕೆಳಗಾಗಬಹುದು. ಜಿಲ್ಹಾ ನ್ಯಾಯಸ್ಥಾನಗಳ ಮತ್ತು ಪ್ರಾಂತಿಕ ಹೈಕೋರ್ಟುಗಳ ವಕೀಲರೂ ನ್ಯಾಯಾಧೀಶರೂ ಪರಿಷ್ಕ ನ್ಯಾಯಾಲಯದ ನಿರ್ಣಯಗಳ ಅಧ್ಯಾಪನ ಪರಿಜ್ಞಾನವನ್ನು ಹೇಗೆ ಸಂಪಾದಿಸಬೇಕು? ಈ ಎಲ್ಲ ಪ್ರಶ್ನೆಗಳಿಗೆ ಒಂದೇ ಉತ್ತರ, ಇರಬಲ್ಲುದು—ಅದೆಂದರೆ, ಕೇಂದ್ರ ಸರಕಾರ, ಪರಿಷ್ಕ ನ್ಯಾಯಾಲಯ ಪ್ರಾಂತಿಕ ಸರಕಾರ, ಮತ್ತು ಪ್ರಾಂತಿಕ ಹೈಕೋರ್ಟುಗಳ ಅಧಿಕಾರಿಗಳೂ ವಕೀಲರೂ ನ್ಯಾಯಾಧೀಶರೂ ಮಾತ್ರವಲ್ಲ, ಅದಕ್ಕಿಂತ ಕೆಳತರಗತಿಯವರೂ ಶಾಸನ ಸಭಾಸದಸ್ಯರೂ ಕೂಡ ತಮ್ಮ ಕರ್ತವ್ಯಗಳ ನಿರ್ವಾಹಕ್ಕೆ ಸಾಲುವಷ್ಟಾದರೂ ಅಖಿಲ ಭಾರತೀಯ ಭಾಷೆಯ ಪರಿಜ್ಞಾನವನ್ನು ಮಾಡಿಕೊಳ್ಳಬೇಕಾಗುವದು. ಇದರಿಂದ ಅಖಿಲ ಭಾರತೀಯ ಭಾಷೆಯನ್ನು ಬಹಳ ಜನರು ಅಭ್ಯಸಿಸಬೇಕಾಗುವದೆಂದು ನಿಶ್ಚಿತವಾಗುತ್ತದೆ. ಮತ್ತು ಪ್ರಜಾತಂತ್ರ ಸಫಲವಾಗಬೇಕಾದರೆ, ಅ. ಭಾ. ಭಾಷೆ ಸರ್ವಾಂಗಪೂರ್ಣವಾಗದಿದ್ದರೂ ಸಾಧ್ಯವಿದ್ದಷ್ಟು ವ್ಯಾಪಕವಾಗಬೇಕಾಗುವದು. ಅಂದ ಮೇಲೆ ಸಾಂಸ್ಕೃತಿಕ ವಿಚಾರವನ್ನು ಬದಿಗಿಟ್ಟರೂ ಅಖಿಲ ಭಾರತ ಭಾಷೆ ಹೆಚ್ಚು ಹೆಚ್ಚು ವಿಸ್ತಾರಗೊಳ್ಳುತ್ತ ಹೋಗುವದು.

ಕೆಲ ಪ್ರಶ್ನೆಗಳು

ಇದೇ ಪ್ರಶ್ನೆಯನ್ನು ಇನ್ನೊಂದು ದೃಷ್ಟಿಯಿಂದ ನೋಡೋಣ. ನಮ್ಮ ವಿಶ್ವವಿದ್ಯಾಲಯಗಳು ತಂತಮ್ಮ ಕ್ಷೇತ್ರಗಳಲ್ಲಿ ಪ್ರಾಂತಿಕ ಭಾಷೆಗಳನ್ನೇ ಶಿಕ್ಷಣಕ್ಕೆ ಬಳಸಿಕೊಳ್ಳುತ್ತಿರುವದರಲ್ಲಿ ಅಸ್ವಾಭಾವಿಕವಾದ ಮಾತೇನೂ ಇಲ್ಲದಿದ್ದರೂ ಅವೀಗ ಪರಸ್ಪರ ಸಂಪರ್ಕವಾಗಲಿ ಸಂಬಂಧವಾಗಲಿ ಇಲ್ಲದಂತೆ ಸಂಪೂರ್ಣವಾಗಿ ತಂತಮ್ಮ ದಾರಿಯನ್ನೆ ಹಿಡಿದು ಬೆಳೆಯಬೇಕೆ? ನಮ್ಮ ಸಂಶೋಧನಾತ್ಮಕ ಪತ್ರಿಕೆಗಳು ಯಾವ ಭಾಷೆಯಲ್ಲಿ ಹೊರಡಬೇಕು? ಅವು ನಮ್ಮ ಪ್ರಾಂತಿಕ ಭಾಷೆಗಳಲ್ಲಿರಬೇಕೆ, ಸಾಮಾನ್ಯ ಭಾಷೆಯಲ್ಲೇ? ಪ್ರಾಂತಿಕ ಭಾಷೆಗಳಲ್ಲಾಗಬೇಕಾದರೆ ಒಂದು ಪ್ರದೇಶದ ವಿದ್ಯಾರ್ಥಿಗಳೂ ಶಿಕ್ಷಕರೂ ಸಂಶೋಧಕರೂ ಎಲ್ಲ ಭಾಷೆ ಕಲಿಕಲ್ಲದ ಇನ್ನೊಂದರಲ್ಲಾದ ಕಾರ್ಯವನ್ನರಿತುಕೊಂಡು ಅದರಿಂದ ಹೇಗೆ ಲಾಭ ಪಡೆಯಬಲ್ಲರು? ಅವು ಅಖಿಲ ಭಾರತ ಭಾಷೆಯಲ್ಲಿರಬೇಕಾದರೆ ಎಲ್ಲ ಸಂಶೋಧಕರಿಗೂ ಆ ಭಾಷೆಯಲ್ಲಿ ಸಾಕಷ್ಟು ಪಾಂಡಿತ್ಯವಿರಬೇಕಾಯಿತು. ಅ. ಭಾ. ಭಾಷೆಯನ್ನು ಒಳ್ಳೆ ಆಸ್ಥೆಯಿಂದ ಅಭ್ಯಸಿಸಿದಲ್ಲದೆ ಮತ್ತು ಅಂಥ ಅಭ್ಯಾಸಕ್ಕೆ ಯೋಗ್ಯ ಫಲಪ್ರತಿಪತ್ತಿಯನ್ನೆ ಹೊರತು ಅದರಲ್ಲಿ ಪಾಂಡಿತ್ಯ ಹೇಗೆ ಸಾಧ್ಯವಾದೀತು? ಬ್ರಿಟಿಶ ಆಳಿಕೆಯಲ್ಲಿ, ಇಂಗ್ಲೀಷ ಭಾಷೆಯಲ್ಲಿ ವ್ಯುತ್ಪತ್ತಿಯನ್ನು ಸಂಪಾದಿಸುವದು ವ್ಯವಹಾರದಲ್ಲಿ ಶ್ರೇಯಸ್ಕರ ಹೆದ್ದಾರಿಯಾಗಿದ್ದುದರಿಂದಲೇ ಅದರ ಅಧ್ಯಯನ ಭಾರತದಲ್ಲಿ ಸಫಲವಾಗಿ ಪ್ರಚುರಗೊಂಡಿತು.

ಅಖಿಲ ಭಾರತ ಭಾಷೆಗೆ ಪ್ರಾಧಾನ್ಯ

ಪರಕೀಯರ ವಿಮುಕ್ತರಾದ ಬೇಬೀಳಿಗಳಲ್ಲಿ ಸಮನ್ವಯವನ್ನುಂಟು ಮಾಡುವ ಕೆಲಸ ಬಹಳ ಕಷ್ಟದ್ದು. ಆದರೂ ಅದನ್ನು ವರ್ಜಿಸುವ ವಿಧಿಯಿಲ್ಲ. ಇಲ್ಲಿ ನಾವು ಒಟ್ಟು ವಿವಿಧ ಭಾಷಾ-

—೧೩ ಪುಟಕ್ಕೆ

ವಿವಿಧ ಪ್ರಪಂಚ

ಭಾಷಣಕಾರರಿಗೆ ಉಪದೇಶ

ಪ್ರಸಿದ್ಧ [illegible] ಹೇಳಿದ್ದನು: "ನೀನು ಮಾತಾಡುವಾಗ [illegible] ಮಾತಾಡು. ಆಗ ಅಂತಃ ಕರಣಪೂರ್ವಕವಾಗಿ ಮಾತಾಡಿದಂತೆ." ಈ ಉಪದೇಶವನ್ನು ಭಾಷಣಮಾಡಲು ಹೊರಡುವವರೆಲ್ಲ ಲಕ್ಷ್ಯದಲ್ಲಿ ಇಟ್ಟುಕೊಳ್ಳತಕ್ಕದ್ದು. ಇದನ್ನು ಡಾ. ಡೇಲ್ ಕಾರ್ನೆಗಿಯೆಂಬ ಅಮೇರಿಕನ್ ಭಾಷಣ ಶಿಕ್ಷಕನು ವರ್ಷಗಳ ಬಗ್ಗೆ ಪಾಠ ಗಳನ್ನು ಸಂಪಾದಿಸುತ್ತಲಿರುವ ಹೇಳಿದರೆ ನೀವು ಆಶ್ಚರ್ಯಪಡಬಹುದು.

ಆತನು ಅಮೇರಿಕೆಯಲ್ಲಿ ಈ ವೇಳೆ [illegible] ನಗರಗಳಲ್ಲಿ "ಭಾಷಣ ಶಾಲೆ" ಗಳನ್ನು ನಡೆಸುತ್ತಾನೆ. ಕಳೆದ ೩೦ ವರ್ಷಗಳಲ್ಲಿ ಆತನು ೧,೫೦,೦೦೦ ಜನರಿಗೆ ಭಾಷಣ ಮಾಡಲು ಕಲಿಸಿದ್ದಾನೆ. ಆತನ ವಿದ್ಯಾರ್ಥಿಗಳಲ್ಲಿ ೧೪ ವರ್ಷದ ಎಳೆಯರಿಂದ ಹಿಡಿದು ೮೦ ವರ್ಷದ ಹಣ್ಣು ಮುದುಕರ ವರೆಗೆ ಎಲ್ಲ ವಯಸ್ಸಿನ ಜನರುಂಟು. ನಾಲ್ಕು ಜನ ಸೇರಿದಲ್ಲಿ ನಮಸ್ಕಾರ ಹೇಳಲು ಅಂಜುವ ಮುದುಕರೇ, ತನ್ನ ಗ್ರಿರ್ಸ್ಟರ [illegible] ಮಾತಾಡಲೆತ್ನಿಸಿ ಕೈಕಾಲು ನಡುಗುವ ಕೆಂಪನ ಅಕ್ಕನಿಗೆ ಇಂಥವರು ಕೂಡ ಸಾರ್ವಜನಿಕ ಭಾಷಣದ ಕಲೆಯನ್ನು ಆತನಲ್ಲಿ ಅಭ್ಯಸಿಸಿದ್ದಾರೆ.

ಭಾಷಣಕರ್ತರಿಗೆ ಆತನ ಸೂಚನೆಗಳು ಹೀಗಿವೆ:

೧. ನೀನು ಹೇಳಬೇಕೆಂದಿರುವ ವಿಷಯದ ಬಗ್ಗೆ ಉತ್ಸಾಹವಿರಲಿ. ಆಗ ನೀನು ನಿನ್ನ ಪ್ರಾಬಲ್ಯವನ್ನೆಲ್ಲ ಮರೆತು ಸ್ವಾಭಾವಿಕ ಭಾವ ಭಂಗಿಗಳಿಂದ ಒಳಿತಾಗಿ, ಜನರಿಗೆ ಸ್ಪಷ್ಟ ಸ್ವಾದಿಸುವಂತೆ ಮಾತಾಡುವಿ. ತಪ್ಪು ಆದೆಗಳಾದರೆ ಗಾಬರಿ ಬೇಡ. ಅದನ್ನು ನೀನು ಗಮನಿಸದಿದ್ದರೆ ಯಾರೂ ಗಮನಿಸುವದಿಲ್ಲ.

೨. ನಿನಗೆ ಸ್ವಾನುಭವದಿಂದ ಗೊತ್ತಿದ್ದದ್ದನ್ನೇ ಮಾತಾಡು. ಪತ್ರಿಕೆಯಿಂದಲೋ ಪುಸ್ತಕದಿಂದಲೋ ಎತ್ತಿದ ಮಾತುಗಳನ್ನು ಆಡಬೇಡ.

೩. ಹೇಳಬೇಕಾದ ವಿಷಯಗಳ ಬಗ್ಗೆ ಸ್ವಲ್ಪ ಟಿಪ್ಪಣಿ ಮಾಡಿಕೊ. ಆದರೆ ಬಾಯಿಪಾಠ ಕಲಿಯಬೇಡ. ಅದು ಕೇಳುವವರಿಗೆ ಅಸಹಜ, ಬೇಸರ [illegible].

೪. ಮಾತಿನ ನಡುವಡುವೆ ದೃಷ್ಟಾಂತಗಳಿರಲಿ. ಆದರ ಹಿನ್ನೆಲೆಯನ್ನು ಕೇಳುವವರೊಡನೆ ಸಂಭಾಷಿಸಿ ಮಾಡಿಕೊ. ಭಾಷಣವೆಂಬುದು ದೊಡ್ಡ ಸಂಭಾಷಣೆ ಮಾತ್ರವಾಗಿರಬೇಕು.

೫. ನಿನ್ನ ಭಾಷಣವೇ [illegible] ಜನರಿಗೆ ಅರಿಯುವದು. ಮಾತಾಡುವಾಗ ನಿನಗೆ ಸ್ವಾಸ್ಥ್ಯ [illegible] ಬೇಕಾದದ್ದು ಜನರಿಗೆ [illegible] ಬೇಕು.

"[illegible]" [illegible] ಮಾತಾಡುವ ಮುನ್ನ ನಿನ್ನ ಗೆಳೆಯರ ಗುಂಪಿನಲ್ಲಿ ಮಾತಾಡಿ ನೋಡಿ. ಪ್ರಯೋಗ ನಿನ್ನ ಭಯ ಕರಗಿಹೋಗುವದು, ಎಂಬುದಾಗಿ ಬೇಲ ಕಾರ್ನೆಜಿಯು ಸೂಚಿಸಿ.

ತೂಗಿ ಬದುಕಿಸಿರಿ!

ಪಿಗ್ಗಿಗೇಡ ಮಕ್ಕಳನ್ನು ತೂಗಿ ಮಲಗಿಸುವ ಉಪಾಯ ಎಲ್ಲ ತಾಯಂದಿರಿಗೆ ಅನಾದಿ ಕಾಲದಿಂದ ಗೊತ್ತು. ತೂಗಿದರೆ ನಿದ್ರೆ ಮಾತ್ರವಲ್ಲ ಜೀವದಾನವೂ ದೊರೆಯುವದೆಂಬುದು ಎಷ್ಟು ಜನರಿಗೆ ತಿಳಿದಿರುವದಿಲ್ಲವೆ, ಈಚೆಗೆ ಮನುಷ್ಯ ಜನ್ಮ ಹೀಗೆ ಕೂಡ "ತೂಗುವ ತಾಣಿಗೆ" ಯ ಮಹತ್ವವನ್ನು ಡಾಕ್ಟರರು ಅನುಮೋದಿಸುತ್ತಿದ್ದಾರೆಂದು ಅಮೇರಿಕೆಯಿಂದ ಸುದ್ದಿ ಬಂದಿದೆ. ಅವರ ಅಂದೋಲನದ (ತೂಗಾಟ) ಸಂಜೀವನ ಶಕ್ತಿ ಮತ್ತು ತೀರ ಹೊಸ ಸಂಶೋಧನವೇನಲ್ಲ. ಬ್ರಿಟಿಶ ಡಾಕ್ಟರರಾದ [illegible] ಎಂಬವರು, ಹುಟ್ಟುವಾಗಲೆ ಸತ್ತ ಮಕ್ಕಳನ್ನು ಬದುಕಿಸಲು ತೂಗುವ ಉಪಾಯವನ್ನು ಪ್ರಯೋಗಿಸಿ ಗೆದ್ದಿದ್ದಾರೆ.

ಸಂಗಸಾಗಿ ತಿಳಿ ಹಿಂದಿನಿಂದಲೂ ತಾವಾಗಿ ಚಲಿಸಲ್ಲದ ಕೆಲ ಗಡಿಯಾರಗಳನ್ನು ನೀವು ನೋಡಿರಬಹುದು. ಅವುಗಳನ್ನು ನಿದ್ದೆಯಿಂದ ಎಚ್ಚರಿಸಲು ಎಡಕ್ಕೊಮ್ಮೆ ಬಲಕ್ಕೊಮ್ಮೆ ವರ್ತುಲಾಕಾರವಾಗಿ ಕುಲುಕಿದರೆ ಅವುಗಳ ಎದೆಬಡಿತ ಪ್ರಾರಂಭವಾಗಿ ಮುಂದೆ ತಡೆಯಿಲ್ಲದೆ ಸಾಗುವದುಂಟು. ಸತ್ತು ಹುಟ್ಟುವ ಮಕ್ಕಳ ಪರಿ ಹೀಗೆ. ಹೊಕ್ಕುಳಿನ ಸಾಳ ಸುತ್ತಿ ಹಾಕಿದ್ದರಿಂದಲೋ ಇನ್ನೇತರಿಂದಲೋ ಉಸಿರು ಕಟ್ಟಿ ಅಂಗಾಂಗವೆಲ್ಲ ಸ್ತಬ್ಧವಾಗಿ ಪ್ರಾಣವಾಯುವಿನ ಕೊರತೆಯೂ ಶ್ವಾಸಕೋಶದಲ್ಲಿ ಆಗುವದರಿಂದ ಅವು ನಿಸ್ತೇಜ ನಿಶ್ಚೇಷ್ಟವಾಗಿ ಹುಟ್ಟುವವು. ಹುಟ್ಟುವಾಗ ಮಕ್ಕಳ ಶ್ವಾಸಕೋಶ ಯಾವಾಗಲೂ ಸಂಕುಚಿತಾವಸ್ಥೆಯಲ್ಲಿರುವದರಿಂದ ಹೊಸದಾಗಿ ರಕ್ತ ಸಂಚಾರವಾದರೆ ಮಾತ್ರ ಅವು ನರಗಳಿಗೆ ಪ್ರಾಣವಾಯುವನ್ನು ಒದಗಿಸಬಲ್ಲವು. ನಿಶ್ಚೇಷ್ಟ ಶ್ವಾಸಕೋಶದಿಂದ ಇದು ಸಾಗದೆ ಮಕ್ಕಳು ಬೇಗನೆ ಸಾಯುವವು.

ಡಾ. ಈವರಿಗಿಂತ ಪೂರ್ವದಲ್ಲಿ ಡಾ. ಫ್ಲೋರ್ಸ್ [illegible] ಎಂಬವನು ಹುಟ್ಟುವ ಗಳಿಗೆಯಲ್ಲಿ ಹನ್ನೊಂದು ಮಕ್ಕಳನ್ನು ತಮ್ಮ ತೋಳಲ್ಲಿಟ್ಟು ರಭಸದಿಂದ ತೂಗಿದಾಗ ಮಕ್ಕಳ ರಕ್ತ ಶಿರೋದೇಶದ ಮುಖದಲ್ಲಿ ಉತ್ಪತ್ತಿಯ ಮುಖ್ಯತ್ವವನ್ನು ಕಂಡರು. ನೀರಲ್ಲಿ ಮುಳುಗಿ [illegible] ಈ ಪ್ರಯೋಗವನ್ನು [illegible] ಪರಿಣಾಮ [illegible] [illegible] [illegible] [illegible] [illegible] [illegible] ಪ್ರಾರಂಭವಾಗುವದೆಂದು [illegible].

"ತೂಗಿ ಬದುಕಿಸುವ" ಈ ಉಪಾಯ ಎಲ್ಲರಿಗೂ ಸುಲಭವಲ್ಲ. [illegible] ಸತ್ತು ಹುಟ್ಟಿದ ಮಗುವನ್ನು [illegible]

ಡಾ. ಫ್ಲೋರ್ಸ್ಕರು ೩೫ ನಿಮಿಷಗಳ ವರೆಗೂ ವಿವಿಧ ಭಂಗಿಗಳಲ್ಲಿ ತೂಗ ಬೇಕಾಯಿತು. ಅದರ ವರ್ಷ ವರ್ಷವೂ ನಿರ್ಜೀವವಾಗಿ ಹುಟ್ಟುವ ಲಕ್ಷಗಟ್ಟಲೆ ಮಕ್ಕಳ ತಾಯಿತಂದೆಗಳಿಗೆ ಇದೊಂದು ಆಶೋದಯವೇ ಸರಿ. ಇದರಿಂದ ಇನ್ನೊಂದು ಮಾತೂ ಸಿದ್ಧವಾಗಿದೆ. ಹುಟ್ಟಿದೊಡನೆ ಮಕ್ಕಳನ್ನು ತೂಗುವದರಿಂದ ಅವುಗಳಿಗೆ ಅಪಾಯವಾದೀತೆಂಬ ಭ್ರಮೆ ನಿರಸನಗೊಂಡಿತು. ಬದಲಿಗೆ ಶಿಶುಗಳನ್ನು ಅವುಗಳ ಪಾಡಿಗೆ ಬಿಡದೆ ಒಂದಿಷ್ಟು "ತೂಗಾಟ" ಬೇಕು!

ಈ ಬಗೆಯ ಶುಶ್ರೂಷೆಯ ಪೂರ್ಣ ವಿವರಗಳು "ಬ್ರಿಟಿಶ ಮೆಡಿಕಲ್ ಜರ್ನಲ್" ಪತ್ರಿಕೆಯಲ್ಲಿ ಪ್ರಕಟವಾಗಿವೆ.

ಅಣು ಶಕ್ತಿ ಸಂಶೋಧನದ ದಪ್ತರಿನ ಕಳವು

ಸ್ಕಾಟ್ಲಿಂಡ್‌ಯಾರ್ಡಿನ ವಿಶೇಷ ಗುಪ್ತಚಾರರು ಅಣುಬಾಂಬಿನ ಸಂಶೋಧನೆಗೆ ಸಂಬಂಧಿಸಿದ ದಫ್ತರನ್ನು ಕದ್ದವರಾರೆಂಬುದನ್ನು ಪತ್ತೆಹಚ್ಚಲು ಪ್ರಯತ್ನಿಸುತ್ತಿದ್ದಾರೆ. ಆ ದಫ್ತರು ಬ್ರಿಟನ್ನಿನ ಅಣುವಿಜ್ಞಾನ ಸಂಘದ್ದು, ಎರಡು ವಾರದ ಹಿಂದೆ ಈ ಕಳವು ನಡೆಯಿತು. ಇದು ಅತ್ಯಂತ ಚಮತ್ಕಾರದ ಕಳವಾದ್ದರಿಂದ ಈ ವರೆಗೆ ಇದನ್ನು ಪತ್ತೆ ಮಾಡುವುದಾಗಲಿಲ್ಲ. ಅಕ್ಟೋಬರ ೩೦ ರಲ್ಲಿ ಸಂಘದ ಸಭೆ ನಡೆಸಿದ ಚರ್ಚೆಯು ಪ್ರತ್ಯಕ್ಷರ ವರದಿಯು; ಪ್ರೋ. ಬ್ಲಾಕೆಟ್ಟರ ರಚಿಯ ಪರವಾದ ಪುಸ್ತಕದ ಮೇಲಿನ ಪೂರ್ಣ ಟಿಪ್ಪಣಿಯಿವೆ. "ಅಣುಶಕ್ತಿಯ ಸಮುದಾಯಿಕ ಮತ್ತು ರಾಜಕೀಯ ಪರಿಣಾಮ" ಎಂಬುದೇ ಆ ಪುಸ್ತಕದ ಹೆಸರು. ಅಣುಬಾಂಬು ಮತ್ತು ಅಣುಶಕ್ತಿಯ ಮೇಲಿನ ಅಂತಾರಾಷ್ಟ್ರೀಯ ನಿಯಂತ್ರಣ ಇವುಗಳ ಬಗ್ಗೆ ವಿಜ್ಞಾನಿಗಳು ಮಾಡಿದ ಪ್ರಾಸಂಗಿಕ ವಿಚಾರಗಳೂ ಆ ದಫ್ತರಿನಲ್ಲಿವೆ.

ಪ್ರಬನ್ಸನ ಅತ್ಯಾಧುನಿಕ ನವನಿರ್ಮಿತಿ

ಬ್ರಿಟನ್ನಿನ ಮನಶ್ಶಾಸ್ತ್ರಜ್ಞರೀಗ ಹೊಸದೊಂದು ಯಂತ್ರವನ್ನು ನಿರ್ಮಿಸಿದ್ದಾರೆ. ಅದು ಭಾವಾವೇಶವಶರಾಗಿ ಘೋರಕಾರ್ಯ ಮಾಡಬಹುದಾದ ಸ್ತ್ರೀ ಪುರುಷರನ್ನು ಗುರುತು ಹಚ್ಚಬಲ್ಲದು. ಅದರ ನಿರ್ಮಿತಿಯಲ್ಲಿ ಪ್ರತಿಭಾ ಸೌಂದರ್ಯವನ್ನು ತೋರಿದ ಮುಖ್ಯ ವಿಜ್ಞಾನಿಯೆಂದರೆ ಬ್ರಿಸ್ಟಲ್ ಮಾನಸರೋಗ ಸಂಸ್ಥೆಯ ಡಾ ಗ್ರೇ ವಾಲ್ಟರರು. ಕೈದಿಯೊಬ್ಬನು ಬಿಡುಗಡೆಯಾದ ನಂತರ ಹಿಂಸೆ ಮಾಡಬಹುದೆಂದು ಈ ಯಂತ್ರದ ಸಹಾಯದಿಂದ ಎಚ್ಚರಿಕೆ ಕೊಟ್ಟಿದ್ದು, ಅವನು ಅದೇ ಪ್ರಕಾರ ಸ್ವಲ್ಪ ಸಿಟ್ಟು ಬಂದ ಕೂಡಲೆ ಒಬ್ಬ ಸೈನ್ಯಾಧಿಕಾರಿಗೆ ಗುಂಡು ಹೊಡೆದು ಕೊಂದನಂತೆ.

ಇದೊಂದು ವಿದ್ಯುದ್ಯಂತ್ರ. ತಲೆಯ ವಿವಿಧ ಭಾಗಗಳಲ್ಲಿ ತನ್ನ ಮೊತ್ತೆಯನ್ನೂರಿ ಇದು ಮಿದುಳಿನ ಸೂಕ್ಷ್ಮ ವಿದ್ಯುದ್ವಿಸರ್ಜನಗಳನ್ನು ಹಿಡಿಯುತ್ತದೆ. ಸೂಕ್ಷ್ಮ ಭಾವನಾಭರಿತರಾದವರ ಮಿದುಳಿನಲ್ಲಿ "ಥೆಟಾ" ಅಲೆಗಳಿರುತ್ತವೆ. ಸಾಮಾನ್ಯರಿಗೆ ಬಹಳ ನೋವಾದಾಗ ಮಾತ್ರ ಇದು ಏಳುತ್ತದೆ. ಮಕ್ಕಳಿಗೆ ಸಿಟ್ಟು ಬಂದಾಗ ಇದು ಹೆಚ್ಚಾಗಿ ಕಾಣಿಸುತ್ತದೆ; ದೊಡ್ಡವರಾದ ಮೇಲೆ ಅಡಗಿ ಹೋಗುತ್ತದೆ. ಅಪುಷ್ಟ ಮಿದುಳಿನ ದೊಡ್ಡವರಿಗೆ ಇಂಥ ಅಲೆ ಏಳುವುದು ಹೆಚ್ಚು. ಅವರು ಅಸಂಯಮಿಗಳಾಗಿ ಅನಿಸಿದ್ದನ್ನು ಅನಿಸಿದಾಗ ಮಾಡಿಬಿಡುತ್ತಾರೆ. ಇಂಥವರು ವಿರಳವಾದರೂ ಇಲ್ಲವೆನ್ನಲಾಗದು. ಇವರನ್ನು ಈ ಯಂತ್ರ ಗುರುತಿಸಬಲ್ಲದಾಗಿ ಕೈದಿಗಳ ಪರೀಕ್ಷೆಗೆ ಬಹಳ ಸಹಕಾರಿಯೆನಿಸಿದೆ.

ಇಲೆಕ್ಟ್ರಾನ್ ಶಕ್ತಿಯ ಬಳಕೆ

ಇಲೆಕ್ಟ್ರಾನ್ ಶಕ್ತಿಯಿಂದ ಈಗ ಕಾಗದಗಳ ಚೀಟಿಗಳ, ಪುಸ್ತಕದ ಪುಟಗಳ, ರಟ್ಟುಗಳ ಅಥವಾ ಇತರ ಹಾಳೆಗಳಂಥ ವಸ್ತುಗಳ ಎಣಿಕೆಯನ್ನು ಮಾಡಬಹುದಾಗಿದೆ. ಇದರಿಂದ ವಿವಿಧ ವ್ಯಾಪಾರೋದ್ಯಮಗಳಲ್ಲಿ ಈ ಕೆಲಸ ಮಾಡಲು ನಿಯಮಿಸಿಕೊಂಡ ಅನೇಕರು ಕೆಲಸ ಕಳೆದುಕೊಳ್ಳಬಹುದೆಂದು ತರ್ಕಿಸಲಾಗಿದೆ. ಎಣಿಸಬೇಕಾದ ವಸ್ತುವನ್ನು ಆಯುಧ ಮೊಟ್ಟೆಯಂತೆ ವ್ಯವಸ್ಥೆಗೊಳಿಸಿ ಇಡಬೇಕು. ಅನಂತರ ಫೌಂಟನ್ ಪೆನ್ನಿನಂತಿರುವ ಈ ಇಲೆಕ್ಟ್ರಾನಿಕ್ ಪೆನ್ನನ್ನು ತುದಿಯಲ್ಲಿ ಓಡಿಸಬೇಕು. ಅದು ಓಡುವಾಗ ಒಂದು ವಿಧದ ಪ್ರಚೋದನೆ ಕೊಡುತ್ತದೆ. ಅದರ ಮೂಲಕ ಒಟ್ಟು ಎಷ್ಟು ವಸ್ತುವಿನ ಮೊತ್ತ ಗೊತ್ತಾಗುತ್ತದೆ.

ಬ್ರಿಜೆಸ್ಟ್ ಮೋಟಾರ: ಲಂಡನ್ನಿನಲ್ಲಿ ಹೊಸದಾಗಿ [illegible] " [illegible]" ತಾಸಿಗೆ ೪೦ ಮೈಲುಗಳ ವರೆಗೂ ಓಡುತ್ತದೆ. ಒಂದು ಚೀಲ [illegible] ಯಷ್ಟು ತೂಕವಿಲ್ಲದ ಈ ಮೋಟಾರಿನನ್ನು (೨೫೫ ಪೌಂಡು) ಒಬ್ಬನ ಎತ್ತಬಹುದು. ಇದರಲ್ಲಿ ಮೂವರು ಕೂಡಲು ಅವಕಾಶ. ೧ ಗ್ಯಾಲನ್ ಪೆಟ್ರೋಲಿಗೆ ೧೦೦ ಮೈಲಿ ಕೊಡುತ್ತದೆ. ಬೆಲೆ ರೂ. ೨೬೦

ಹಿಗ್ಗುವ ಕುಗ್ಗುವ ಅಳತೆಗೋಲುಗಳು

ರಾಷ್ಟ್ರೀಯ ತೂಕ ಅಳತೆಗಳ ಕಚೇರಿಯವರು ಅಮೇರಿಕೆಯ ವಿಜ್ಞಾನಿಗಳಿಗೆ ಒಂದು ಸಮಸ್ಯೆಯನ್ನು ಕೊಟ್ಟಿದ್ದಾರೆ. ಅವರಲ್ಲಿದ್ದ ಉಕ್ಕು, ನಿಕ್ಕಲ್ ಎರಡರ ಅಳತೆಕೋಲುಗಳಲ್ಲಿ ಒಂದು ಕಳೆದ ವರ್ಷಗಳಲ್ಲಿ [illegible] ಬೆಳೆಯುತ್ತಿದೆ, ಇನ್ನೊಂದು ಕುಗ್ಗುತ್ತಿದೆ. ಮೊದಲಿನದು ಕಳೆದ ಆರು ವರ್ಷಗಳಲ್ಲಿ ೫/೧,೦೦೦,೦೦೦ ಇಂಚು ಹಿಗ್ಗಿದೆ. ಎರಡನೆಯದು ಅದೇ ಅವಧಿಯಲ್ಲಿ ೮/೧,೦೦೦,೦೦೦ ಅಂತ ಕುಗ್ಗಿದೆ. ಇದಕ್ಕೆ ಕಾರಣವೇನೆಂಬುದು ಭೌತಶಾಸ್ತ್ರಜ್ಞರು ಶೋಧಿಸುತ್ತಿದ್ದಾರೆ.

ವ್ಯಾಪಾರ ಪ್ರಪಂಚ

ಮುಂಬಯಿ ಶೇರ ಪೇಟೆ

ತಾ. ೯

ಮುಂಬಯಿ ಪೇಟೆಯಲ್ಲಿ ಈ ವಾರ ತೇಜಿ ಕಂಡುಬಂದಿದೆ. ಉಕ್ಕು ಕಬ್ಬಿಣಗಳ ಬೆಲೆ ಹೆಚ್ಚಾಗಬಹುದು. ಲಾಭಹಂಚಿಕೆಯ ವಿಷಯದಲ್ಲಿ ಸರಕಾರ ಉದಾರ ಧೋರಣೆ ವಹಿಸಬಹುದೆಂಬ ಮೊದಲಾದ ಅಶೆಗಳಿಂದ ಪೇಟೆಯಲ್ಲಿ ಬೆಲೆಗಳ ಏರುವಿಕೆ ಪ್ರಾರಂಭವಾಯಿತು. ತೇಜಿ ಕೂಟವೊಂದು ಬೆಲೆಗಳ ಏರಿಕೆಗೆ ಪುಷ್ಟಿ ಕೊಟ್ಟಿತು. ಇಂದಿನ ಬೆಲೆಗಳು ಇಂತು ಕೊನೆಗೊಂಡವು;

ಮುಂಬಯಿ ಡಾಯಿಂಗ್	೧೦೩೬-೪-೦
ಕೋಹಿನೂರು	೨೯೧-೦-೦
ಸ್ವದೇಶಿ	೨೯೧-೮-೦
ಗೋಕಾಕ	೨೮೦-೦-೦
ಸಿಂಪ್ಲೆಕ್ಸ	೧೮೨-೮-೦
ಬೇಲಾಪುರ ಸಕ್ಕರಿ	೨೪೫-೫-೦
ಟಾಟಾ ಸ್ಟೀಲ ಡೆಫರ್ಡ	೧೬೩೭-೮-೦
ಸಿಂಧ್ಯಾ ಸ್ಟೀಮ	೨೨-೪-೦
ಅಸೊ. ಸಿಮೆಂಟ್ಸ	೧೫೫-೦-೦
ಸೆಂಟ್ರಲ ಬ್ಯಾಂಕ್	೪೬-೮-೦
ಇಂಪೀರಿಯಲ್ ಬ್ಯಾಂಕ ಪೂರ್ಣ	೧೬೩೫-೦-೦
ರಿಝರ್ವ	೧೯೦-೮-೦

ಚಿನ್ನ--ಬೆಳ್ಳಿ

ಚನಿವಾರ ಕಟ್ಟೆಯಲ್ಲಿ ತೇಜೀ ಕೂಟವೊಂದು ಬೆಲೆಗಳನ್ನು ಇಳಿಯ ಗೊಡುವದಿಲ್ಲ. ತಯಾರಿ ಚಿನ್ನ ೧೧೪-೩-೦ ವರೆಗೂ ಹೋಗಿತ್ತು. ಬೆಳ್ಳಿಯ ಬೆಲೆಯೂ ತುಸು ಏರಿದೆ. ಇಂದಿನ ಬೆಲೆಗಳು ಹೀಗಿದ್ದವು;

ತಯಾರಿ ಚಿನ್ನ	೧೧೩-೬-೦
ವಾಯದಾ	೧೧೨-೧೧-೦
ಸಾವರಿನ	೭೫-೦-೦
ತಯಾರಿ ಬೆಳ್ಳಿ	೧೭೭-೧೩-೦
ವಾಯದಾ ,,	೧೭೬-೧೩-೦

ಅರಳೆ

ಅರಳೆ ಪೇಟೆಯಲ್ಲಿ ಅನೇಕ ಕಾರಣಗಳಿಂದ ಮಾಲು ಬರುವದು ಕಡಿಮೆಯಾಗಿರುವದರಿಂದ ಬೆಲೆಗಳು ಏರಿದವು ಇಂದಿನ ಬೆಲೆಗಳು ಹೀಗೆ ಕೊನೆಗೊಂಡವು.

ಫೆಬ್ರುವರಿ	೬೨೭-೦-೦
ಮೇ	೬೦೦-೧೨-೦
ಜುಲೈ	೬೦೪-೮-೦
ಸಪ್ಟಂಬರ	೬೦೫-೦-೦

ಎಣ್ಣೆಕಾಳು

ಶೇಂಗಾ	೧೩೭-೮-೦
ಅಗಸಿ	೨೭-೧೦-೦
,, ಹೊಸ	೨೭-೧೦-೦
ಅಗಸಿ ಎಣ್ಣೆ	೧೬-೧೨-೦
ಎಣ್ಣೆ	೨೯-೮-೦

ಶಿವಮೊಗ್ಗೆ ಅಡಿಕೆ

ಪೇಟೆಯಲ್ಲಿ ಕಳೆದ ವಾರದ ದರಗಳೇ ಇವೆ.

ಹುಬ್ಬಳ್ಳಿ

ತಾ. ೯

ಜ. ಹತ್ತಿ ನಗಳ್ಳೆ	೪೩೫-೪೫೫
,, ಅರಳೆ ,,	೨೬೫ ೨೮೫
ಹತ್ತಿಕಾಳು ರೂ. ಗೆ	೩। ಪೌಂಡ
ಜೋಳ (ಚೀಲಕ್ಕೆ)	೩೭-೪೦
ಗೋಧಿ ಚೀಲಕ್ಕೆ	೧೦೫-೧೧೨
ಬಿಳಿ ಗೋಧಿ ಚೀಲ	೧೦೦-೧೦೮
ಕುಸುಬಿ ,,	೩೨-೩೩
ಅಗಸಿ	೩೯-೪೧
ಹೆಸರು	೫೧ ೫೩।।
ಕರಿ ಎಳ್ಳು	೫೬-೫೮।।
ಬಿಳಿ ಎಳ್ಳು	೬೮-೭೯।।
ಕಡಲೆ	೬೬-೬೮
ತೊಗರಿ	೩೮-೩೯
ಹುರಳಿ	೪೪-೪೫।।
ಶೇಂಗಾ (ಹೇರು)	೪೪-೪೬

ಗಾಂಧೀ ನಗರ

ಹೊಸದಿಲ್ಲಿಗೆ ಗಾಂಧಿ ನಗರವೆಂದು ನಾಮಕರಣ ಮಾಡಬೇಕೆನ್ನುವವರು ಈ ಬಗ್ಗೆ ನನ್ನ ಸಮರ್ಥನೆ/ಕೋರಿದ್ದಾರೆ. ನಾನು ಈ ಸಮರ್ಥನೆಯನ್ನು ಕೊಡಲಾರೆನೆಂದು ತಿಳಿಸಲು ನನಗೆ ವಿಷಾದವಾಗುವದು. ಹಿಂದುಸ್ತಾನದ ರಾಜಧಾನಿಗೆ ಗಾಂಧೀಜಿಯ ಹೆಸರಿಡುವದೇ ತಪ್ಪೆಂದು ನನ್ನ ಅಭಿಪ್ರಾಯವಲ್ಲ. ಆದರೆ ಅವರ ಹೆಸರಿನ ಸ್ಥಳವೊಂದು ಹಿಂದುಸ್ತಾನದ ರಾಜಧಾನಿಯಾಗಬೇಕಿದ್ದರೆ ಆ ರಾಜಧಾನಿಯು ಹೊಸದಿಲ್ಲಿಯಿಂದ ಸ್ಥಳಾಂತರಿತವಾಗಬೇಕು ಮತ್ತು ಗಾಂಧೀಜಿಯ ಧ್ಯೇಯಧೋರಣಗಳಿಗೆ ಅನುಗುಣವಾದ ಹೊಸದೊಂದು ಪಟ್ಟಣವೇ ನೆಲೆಗೊಳ್ಳಬೇಕು. ಹೊಸದಿಲ್ಲಿಯು ಅಂತಹ ಪಟ್ಟಣವಾಗಲಾರದು.

ಮುಂಬಯಿ ಕಿಶೋರಲಾಲ ಮಶ್ರುವಾಲಾ
೨೯-೧೧-೧೯೪೮

ನಾಲ್ಕು ಮಾತು — ರಂಗನಾಥ ದಿವಾಕರ

೧. ನನ್ನ ಮಂತ್ರಿಪದ

ಇತರರಿಗೆ ಈ ವಿಷಯ ಮಹತ್ವದ್ದೆನಿಸಿ ಇಲ್ಲವೋ ನಾನು ಹೇಳಲಾರೆ. ವಿವಿಧ ಜನರು ವಿವಿಧ ದೃಷ್ಟಿಯಿಂದ ಈ ಮಾತಿನತ್ತ ನೋಡುತಿರಲಿಕ್ಕೆ ಸಾಕು. ಆದರೆ ನನಗೆ ಇದು ತಕ್ಕಷ್ಟು ಬಹಳ ಮಹತ್ವದ್ದಾಗಿದೆ. ಯಾಕೆಂದರೆ ನನ್ನ ಇಡೀ ಕಾರ್ಯಕ್ರಮದಲ್ಲಿಯೇ ಬದಲಾವಣೆ ಮಾಡುವ ಪ್ರಸಂಗ ಬರುತಲಿದೆ. ಈ ಹೊಸ ಹೊಣೆಯು ನನ್ನ ಸೇವಾಮಯ ಜೀವನಕ್ಕೆ ಒಂದು ಹೊಸ ಕ್ಷೇತ್ರವನ್ನು ಕಲ್ಪಿಸಿಕೊಡುತಿದೆ. ಈ ಹೊಸ ಹೊಣೆಗೆ ಹೊಂದುವಂತೆ ನಾನು ನಿತ್ಯ ಹೊಸಹೊಸ ಕಾರ್ಯಗಳನ್ನು ಕೈಕೊಳ್ಳುವ ಪ್ರಸಂಗ ಬರುತಲಿದೆ. ಆದರೂ ಇದರತ್ತ ಒಂದು ಬಗೆಯ ಅನಾಸಕ್ತ (ಡಿಸ್ ಇಂಟರಿಸ್ಟೆಡ್) ದೃಷ್ಟಿಯಿಂದ ನೋಡಿ ನಾಲ್ಕು ಮಾತು ಬರೆಯುತಲಿದ್ದೇನೆ. ಆತ್ಮನಿರೀಕ್ಷಣೆ ಹಾಗೂ ಅನಾಸಕ್ತ ದೃಷ್ಟಿ ಇವೆರಡು ಮನುಷ್ಯನಲ್ಲಿದ್ದರೆ ಅವನು ಯಾವದೇ ಒಂದು ಮಾತಿನ ಬಗ್ಗೆ ಸರಿಯಾದ ರೀತಿಯಿಂದ ನೋಡಬಲ್ಲ. ಈ ಎರಡೂ ಗುಣಗಳನ್ನು ಪಡೆಯುವದು ಹಾಗೂ ಅವುಗಳ ವಿಕಾಸಮಾಡಿಕೊಳ್ಳುವದು ಅಷ್ಟೊಂದು ಸುಲಭಸಾಧ್ಯವಲ್ಲ. ಆದರೂ ಅವುಗಳನ್ನು ಪಡೆಯದೆ ಆತ್ಮವಿಕಾಸ ಮಾರ್ಗದಲ್ಲಿ ಯಾವನೂ ಮುಂದಡಿಯಿಡಲಾರ.

\+ \+ \+

ನನ್ನ ಮಂತ್ರಿಪದದತ್ತ ನೋಡಲು ನನಗೆ ಬಂದ ಅಭಿನಂದನಪರ ಸಂದೇಶಗಳು ಬಹಳ ಸಹಾಯವನ್ನಿತ್ತಿವೆ. ಈ ಸುದ್ದಿ ಹರಡಿದೊಡನೆ ತಂತಿ ಪತ್ರಗಳ ಮೂಲಕ ಬರತೊಡಗಿದ ಸಂದೇಶಗಳ ಪ್ರವಾಹವು ಇನ್ನೂ ತಡೆಯಿಲ್ಲದೆ ಹರಿಯುತಿದೆ. ಅವುಗಳ ವೈವಿಧ್ಯ ಅಸಾಧಾರಣವಾಗಿದೆ. ಬೇಕಾದ ಭಾಷೆಯಲ್ಲಿ ಆದರೆ ರೋಮನ್ ಲಿಪಿಯಲ್ಲಿ ತಂತಿಗಳನ್ನು ಕಳಿಸಬಹುದಾದುದರಿಂದ ೫-೬ ಭಾಷೆಗಳಲ್ಲಿ ಈ ಸಂದೇಶಗಳು ಬಂದಿವೆ. ಸಾಧಾರಣವಾಗಿ ಎಲ್ಲ ಪ್ರಾಂತಗಳಿಂದ ಹಾಗು ದೇಶಾಂತರಗಳಿಂದ ಬಂದಿವೆ. ನನ್ನೊಡನೆ ಕೆಲಸ ಮಾಡುತ್ತಿದ್ದ ನಿಸ್ಪೃಹ ಸ್ವಯಂಸೇವಕರನ್ನು ಮೊದಲ್ಗೊಂಡು ರಾಜಾ ಮಹಾರಾಜರುದ, ರಾಯಭಾರಿಗಳು ಹಾಗೂ ಗವ್ಹರ್ನರರಿಂದ ಸಂದೇಶಗಳು ಬಂದಿವೆ. ಅವುಗಳಲ್ಲಿಯ ಒಂದೆರಡು ಮಾತುಗಳು ನನಗೆ ಬಹಳ ಉದ್ಬೋಧಕ ಹಾಗು ನಿರ್ದೇಶಕ (ಡಾಯರೆಕ್ಟಿವ್ಹ) ವಾಗಿವೆ.

× × ×

ಈ ಮಂತ್ರಿಪದವು ಕರ್ನಾಟಕಕ್ಕೆ ಇತ್ತ ಗೌರವ, ಎಂದು ಅನೇಕರು ಬರೆದಿದ್ದಾರೆ ಇದು ನನ್ನ ದೃಷ್ಟಿಯಿಂದ ಅತ್ಯಂತ ಮಹತ್ವದ ಮಾತು. 'ನಾನು' ಎಂಬದನ್ನು ಮರೆತು ಬಿಡು, ಎಂದು ಇದು ಕೈಯೆತ್ತಿ ಹೇಳುವದು. ಮನುಷ್ಯನಿಗೆ ಅಹಂಕಾರ ಹೆಚ್ಚಾಗುವ ಸಮಯವಿದು. ಆ ಕಾಲಕ್ಕೆ ಇಂಥ ಎಚ್ಚರಿಕೆ ಅವಶ್ಯ. ನಾನು ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷನಾದಾಗಿನ ಒಂದು ಸಂದರ್ಭ ನೆನಪಿಗೆ ಬರುವದು. ಸಮ್ಮೇಲನದ ಕೆಲಸ ಮುಗಿದ ಬಳಿಕ ಧನ್ಯವಾದಾದಿಗಳನ್ನು ಅರ್ಪಿಸುವ ಸಮಯದಲ್ಲಿ ಉಪಸಂಹಾರಾತ್ಮಕವಾದ ನಾಲ್ಕು ಮಾತುಗಳನ್ನು ನಾನು ಬಳ್ಳಾರಿಯಲ್ಲಿ ಆಡುತ್ತಿದ್ದೆ. ಆಗ ಇದೆಲ್ಲ ಗೌರವ ಕರ್ನಾಟಕದ್ದು ಎಂದು ಹೇಳಿ ಕರ್ನಾಟಕದ ಒಂದು ದೊಡ್ಡ ಪಟವನ್ನು ನನ್ನೆದುರು ಹಿಡಿದು ಅದಕ್ಕೆ ಮರೆಯಾಗಿ ನಾನು ನಿಂತುಕೊಂಡೆ. ಈಗಲೂ ಅದೇ ವೃತ್ತಿ ನನ್ನಲ್ಲಿರಬೇಕು. ಇರದಿದ್ದರೆ ಬರಬೇಕು. ಬಂದು ಸ್ಥಾಯಿಯಾಗಿ ನಿಲ್ಲಬೇಕು. ಗೌರವ ದೇಶದ್ದು, ಸೇವಾಭಾರವದ್ದು; ಹೊಣೆ ನನ್ನದು, ಕರ್ತವ್ಯಭಾರ ನನ್ನದು, ಎಂಬ ವೃತ್ತಿ ನೆಲೆಗೊಳ್ಳಬೇಕು.

× × ×

ನನ್ನ ಮಂತ್ರಿಪದದ ಸುದ್ದಿ ಪ್ರಕಟವಾದ ಮರುದಿನವೆ ವೀರ ಕರಿಯಪ್ಪನವರು ಹಿಂದುಸ್ತಾನದ ಸೇನಾನಾಯಕರಾಗಿ ನೇಮಿಸಲ್ಪಟ್ಟಿರುವರೆಂಬ ಸುದ್ದಿ ಪ್ರಕಟವಾಯಿತು. ನನ್ನ ಮಂತ್ರಿಪದದ ಬಗ್ಗೆ ಹಲವರಿಗೆ ಯಾವ ಆನಂದವೊ ಅದೇ ಆನಂದವು ನನಗೆ ಕರಿಯಪ್ಪನವರ ಬಗ್ಗೆ ಆಯಿತು. ಓದಿದ ಕ್ಷಣವೆ ನಾನು ಫೋನಿನ ಮೂಲಕ ಅವರಿಗೆ ನನ್ನ ಅಭಿನಂದನೆಗಳನ್ನರ್ಪಿಸಿದೆನು. ಸಾಯಂಕಾಲ ಹೋಗಿ ಅವರನ್ನು ಕಂಡು ಬಂದೆನು. ಇಬ್ಬರು ಕರ್ನಾಟಕದವರಿಗೆ ಹಿಂದುಸ್ತಾನದ ಹೆಚ್ಚಿನ ಸೇವೆ ಮಾಡುವ ಸುಯೋಗ ದೊರೆತಿದ್ದು, ಎಂದಿಗೂ ಅಕಾಲದಲ್ಲಿ ಅವರ ಮುಖಾಂತರ ಅಖಂಡ ಕರ್ನಾಟಕದ ಕ್ರಿಯೆ ಒಂದು ಹೊಸ ನಾಂದಿ ಪಡೆದ ಮಾಡಿದ್ದೇನು ಆಶಯಿಸದು ಹೆಚ್ಚು ಕೇವಲ ಅವಶ್ಯಕ ಎಂದು ಹೆಚ್ಚಿನ ಸಾಧನವಿದೆ.

೨ ಹದ ಮೀರಕೊಡದು

ಯಾವುದೊಂದು ಮಾತಿಗೆ, ಘಟನೆಗೆ ಹದ ಎಂಬುದಿದೆ. ಕನ್ನಡದಲ್ಲಿ ಹದ ಮೀರಕೊಡದು ಎಂಬ ಗಾದೆ ಇದೆ. ಗಾಳಿ ಬಂದಾಗ ತೂರಿಕೊ, ಎಂದು ಹೇಳುವದುಂಟು. ಹದ ಕೆಡಬಾರದು ಎಂದು ಅನ್ನುವದುಂಟು. ಒಮ್ಮೆ ಹದಗೆಟ್ಟಿತೆಂದರೆ ಪುನಃ ಅದನ್ನು ತಿಂಪರಿಸಿಕೊಳ್ಳುವದು ಬಹಳ ದಿಗಿ. ಈಗ ಮೈಸೂರು ಹಾಗೂ ಯುನಿಯನ್ ಕರ್ನಾಟಕ ಇವು ಒಂದಾಗಿ ಅಖಂಡ ಕರ್ನಾಟಕವೆಂಬುದೊಂದೇ ಒಂದು ಆಡಳಿತಕ್ಕೆ ಸೇರಿದ ಪ್ರಾಂತವಾಗುವ ಹದ ಬಂದಿದೆ ಈ ಹದ ಮೀರದಂತೆ ಎಲ್ಲರೂ ಪ್ರಯತ್ನಿಸುವದು ಅವಶ್ಯ. ಹಲವರು ದುಡುಕುತನದಿಂದಲೋ ಅವಿವೇಕದಿಂದಲೊ ತಿಳವಳಿಕೆಯಿಲ್ಲದೆಯೊ ಹದಗೆಡುವಂತೆ ಈ ಸಮಯದಲ್ಲಿ ಮಾತಾಡುವದುಂಟು. ಆದರೆ ಹಾಗೆ ಮಾಡುವದು ಸರ್ವಥಾ ಹಾನಿಕರ ಕಲ್ಯಾಣ ಕಟ್ಟುವಾಗ ಅಶುಭ ನುಡಿಯುವದರಿಂದ ಏನು ಲಾಭ? ಮೈಸೂರ ಸ್ಟೇಟಕಾಂಗ್ರೆಸ್ಸಿನ ಅಧ್ಯಕ್ಷರೂ ಮೈಸೂರ ಘಟನಾ ಸಮಿತಿಯ ಅಧ್ಯಕ್ಷರೂ ಮೈಸೂರ ಮುಖ್ಯ ಪ್ರಧಾನರೂ ಮೈಸೂರ ಏ ಎಮ್. ಸೀ. ಸಿಯವರು ನೇಮಿಸಿದ ಕಮೀಟಿಯವರೂ ಈಗ ದಿಲ್ಲಿಯಲ್ಲಿದ್ದಾರೆ ಅವರೆಲ್ಲರೂ ಅತ್ಯಂತ ಸಾವಧಾನದಿಂದ ಎಲ್ಲ ವಿಷಯವನ್ನೂ ಪರ್ಯಾಲೋಚಿಸುತಿರುವರು. ಈ ಸಂದರ್ಭದಲ್ಲಿ ಉಳಿದವರೆಲ್ಲರೂ ಅತ್ಯಂತ ಸಂಯಮದಿಂದ ಭಾವನಾವಶರಾಗದೆ ತಾಳ್ಮೆಯಿಂದಿರುವದು ಅತ್ಯವಶ್ಯಕ.

× × ×

ಅಖಂಡ ಕರ್ನಾಟಕ ಒಂದಾಗಬೇಕೆಂಬ ಯೋಜನೆಯ ಬಗ್ಗೆ ಕರ್ನಾಟಕದಲ್ಲಿ ಇಲ್ಲವೆ ಮೈಸೂರಲ್ಲಿ ಭಿನ್ನಾಭಿಪ್ರಾಯವಿದ್ದರೂ ಇರಬಹುದು ಆದರೆ ಕರ್ನಾಟಕದ ಹೊರಗಿನ ಪ್ರತಿಯೊಬ್ಬ ಸುಜ್ಞನೂ ಈ ಯೋಜನೆಯನ್ನು ಕೇಳಿದ ಕೂಡಲೆ ಅದನ್ನು ಅತ್ಯಾನಂದದಿಂದ ಸ್ವಾಗತಿಸುವನು! ಭಾಷಾನುಗುಣ ಪ್ರಾಂತರಚನಾಸಮಿತಿಯ ಸಭಾಸದರು ಸಹ ಈ ಬಗ್ಗೆ ತಮ್ಮ ಅತ್ಯಂತ ಉತ್ಸುಕತೆಯನ್ನು ತೋರಿದರು. ಇಷ್ಟೇ ಅಲ್ಲ. ತಾವಾಗಿ ಮೈಸೂರಿನ ಮುಖಂಡರಿಗೆ ಭೆಟ್ಟಿಯಾಗಬೇಕೆಂದು ಅಲ್ಪಾಹಾರವನ್ನು ಏರ್ಪಡಿಸಿ ತಾಸುಗಟ್ಟಲೆ ಈ ಪ್ರಶ್ನೆಯನ್ನು ಚರ್ಚಿಸಿದರು. ತಮ್ಮ ನಿಷ್ಪಕ್ಷಪಾತವಾದ ಅಭಿಪ್ರಾಯವನ್ನು ಹೇಳಿದರು.

× × ×

ಎರಡೂ ಕೂಡಿಕೊಂಡಾಗಬಲ್ಲ ಅಖಂಡ ಕರ್ನಾಟಕ ಪ್ರಾಂತ ಸಾಕಷ್ಟು ದೊಡ್ಡದು, ಸಂಪತ್ತುಳ್ಳದ್ದು ಆಗುವದೆಂಬುದು ಮೊದಲನೆ ಮಾತು. ಸಾಕಷ್ಟು ಕರಾವಳಿ, ಖನಿಜ, ಹಾಗೂ ಅರಣ್ಯಸಂಪತ್ತು, ಫಲವತ್ತಾದ ಭೂಮಿ, ಬಗೆಬಗೆಯ ಎಲ್ಲ ಧಾನ್ಯ ದವಸಾದಿಗಳನ್ನು ಬೆಳೆಯುವ ಅವಕಾಶ, ಜಲವಿದ್ಯುತ್ಶಕ್ತಿ ನಿರ್ಮಾಣಕ್ಕೆ ಸಾಕಷ್ಟು ಸಾಧನ; ಎಂಟು ನದಿಗಳು ಇವೆಲ್ಲ ಅಖಂಡ ಕರ್ನಾಟಕ್ಕೆ ಇದ್ದ ಅನುಕೂಲತೆಗಳು ಆದ್ದರಿಂದ ಈ ಪ್ರಶ್ನೆಯತ್ತ ಒಂದೇ ಒಂದು ದೃಷ್ಟಿಯಿಂದ ನೋಡುವದು ಅವಶ್ಯ. ಒಟ್ಟಿಗೆ ಇದು ಕರ್ನಾಟಕದ ೧೮೦ ಲಕ್ಷ ಜನರ ಪುರೋಭಿವೃದ್ಧಿಗೆ ಅನುಕೂಲವೊ ಪ್ರತಿಕೂಲವೊ? ಅನುಕೂಲವಿದ್ದರೆ ಮಾಡಿಯೇ ತೀರಬೇಕು. ಪ್ರತಿಕೂಲವಿದ್ದರೆ ಬಿಟ್ಟೇಬಿಡಬೇಕು.

× × ×

ನಾಳೆ ಕೇಂದ್ರ ಶಾಸನ ಸಭೆ, ಕೇಂದ್ರ ಸರಕಾರ ಇವುಗಳಲ್ಲಿ [illegible] ಕರ್ನಾಟಕಕ್ಕೆ [illegible] ಸ್ಥಾನಮಾನ, ಗೌರವ, ಪ್ರತಿಷ್ಠೆ [illegible] ಕರ್ನಾಟಕಕ್ಕೆ ಮಾಗ [illegible] ಅಖಂಡ ಕರ್ನಾಟಕ ಪ್ರಾಂತ [illegible] ಸಾಧ್ಯ. [illegible] ಹೋಗುವದು. [illegible] ಪ್ರಾಂತಗಳಾದೊಡನೆ ಅವುಗಳ [illegible] ದಿಗಳಲ್ಲಿ ಅಂತರಂಗ [illegible] ಪ್ರಸಂಗ [illegible] ನಡೆಯುವದು. [illegible]

[illegible]

[illegible]

ಹಳ್ಳಿಯು ಒಂದು ಆರ್ಥಿಕ ಘಟಕ ಮತ್ತು ನಿಸರ್ಗಕ್ಕೆ ಹತ್ತಿರವಾದ ಮಾನವನ ಸಹಜ [illegible] ಆಗುವ ಸಂಸ್ಕೃತಿ [illegible] ಸಿತ್ತು. ಪಾಶ್ಚಾತ್ಯರೆಲ್ಲ [illegible] ನಮ್ಮ ದುಡ್ಡು ಓದಾಟದ ದೆಸೆಯಿಂದ ಈ ಘಟಕದ ರಚನೆಯಲ್ಲಿ ಕೈಹಾಕಿ [illegible] ಅದರ ಸ್ವಭಾವ ಮತ್ತು ಉತ್ಪಾದಕಶಕ್ತಿಗಳು [illegible] ಮಾಡಿದ್ದೇವೆ.

ಒಂದು ರಾಷ್ಟ್ರದ ಇಡೀ ಸಂಸ್ಕೃತಿ ಹಳ್ಳಿಯಿಂದ ಸ್ಫೂರ್ತಿ ಪಡೆಯುತ್ತದೆ. ಹಳ್ಳಿಗಳನ್ನು ಅಲಕ್ಷಿಸಿದ್ದರಿಂದಲೇ ಭಾರತ ಇಂದು ಈ ಪರಿಸ್ಥಿತಿಯಲ್ಲಿದೆ. ನಮ್ಮ [illegible] ಹಳ್ಳಿಗಳನ್ನು ನಾವು ದೂರಲಾರೆವು. ಹಿಂದಿನ ತಪ್ಪನ್ನು ಸುಧಾರಿಸಲು ನಾವೀಗ ಹಳ್ಳಿಗಳತ್ತ ಲಕ್ಷ್ಯಕೊಡುವುದೊಂದೇ ಕರ್ತವ್ಯ.

ಇಂದಿರುವ ಅನಾರೋಗ್ಯಸ್ಥಿತಿಯಲ್ಲೇ ಹಳ್ಳಿಗಳು ಉಳಿದಂತೆ [illegible] ಕೊಳೆತಿರುವದರಿಂದ ನಮ್ಮ ನಾಡಿಗೆ ಉದ್ಧಾರದ ಆಶೆಯೇ ಇರದು ಹಳ್ಳಿಯು ನಮ್ಮ ರಾಜ್ಯದ ಒಂದು ಅವಿಭಾಜ್ಯ ಅಂಗ ಮತ್ತು ಅದರ ಆರೋಗ್ಯಮಾನ ಇಡೀ ರಾಷ್ಟ್ರದ ಮೇಲೆ ಪರಿಣಾಮಮಾಡುತ್ತದೆ.

ಅದು ನಮ್ಮ ನಾಡಿನ ಮುತ್ಸದ್ದಿಗಳ ಶಿಕ್ಷಣಶಾಲೆ. ರಾಷ್ಟ್ರಕ್ಕೆ ಆರ್ಥಿಕ ಉಣಿಸನ್ನೀಯುವ ಕೈಯೇ ಅದು. ನಮ್ಮ ರಾಷ್ಟ್ರದ ಪುನರ್ನಿರ್ಮಾಣಕ್ಕೆ ಅದು ತನ್ನ ಅಮೌಲ್ಯ ಸೇವೆಯನ್ನು ಸಲ್ಲಿಸಬೇಕಾದರೆ ಅದನ್ನು ಅದರ ಹಿಂದಿನ ವೈಭವಪೂರ್ಣ ಮತ್ತು ಕಾರ್ಯಕ್ಷಮತೆಗೆ ಎತ್ತಬೇಕು ಅದು ನಮ್ಮ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಜೀವನದ ಒಂದು ಮುಖ್ಯಾಂಗವಾಗಿ ಉಳಿಯುವಂತಾಗಬೇಕು. — ಜೆ. ಸಿ. ಕುಮಾರಪ್ಪ

ಜೀವಿಕಾಮೂಲ್ಯ

ಭಾರತದ ಜೀವಿಕಾಮೂಲ್ಯ ಬ್ರಿಟನ್ನಿಗಿಂತ ನೂರಕ್ಕೆ ೮೦ ರಷ್ಟು, ಅಮೇರಿಕ್ಕಿಂತ ೧೧೦ರಷ್ಟು ಮತ್ತು ಕೆನಡಕ್ಕಿಂತ ೧೫೦ ರಷ್ಟು ಹೆಚ್ಚಿದೆಯೆಂದು ಗ್ಲೋಬ್ ಸುದ್ದಿ ಸಂಸ್ಥೆಯ ಸಂದೇಶವೊಂದು ದೊರಟಿದೆ.

ಭಾರತವು ತನಗೆ ಅಗತ್ಯವಿರುವ ಬಹುತರ ಎಲ್ಲ ಆಹಾರ ಪದಾರ್ಥಗಳನ್ನೂ ಬೆಳೆವನಾಡು ಎಂದು ಸಾಮಾನ್ಯವಾಗಿ ಹೇಳಬಹುದು. ಇತ್ತೀಚೆಗೆ ನೂರಕ್ಕೆ ೬ ರಷ್ಟನ್ನು ಹೊರಗಿನಿಂದ ಆಮದು ಮಾಡಿಕೊಳ್ಳುತ್ತಿದೆ. ಅಮೇರಿಕವು ಸುಮಾರ ನೂರಕ್ಕೆ ೬೦ ಅಂಶದಷ್ಟು ಆಹಾರ ಪದಾರ್ಥಗಳನ್ನು ಆಯಾತ ಮಾಡಿಕೊಳ್ಳುತ್ತದೆ ಆದರೂ ಅದರ ಜೀವಿಕಾಮೂಲ್ಯ ಅಷ್ಟು ಕೆಳಮಟ್ಟದಲ್ಲಿದೆ! ಯಾಕೆ ಹೀಗಾಯಿತೆಂಬುದು ಒತ್ತಿ ಕೇಳಬೇಕಾದ ಸ್ಥಿತಿಯಲ್ಲಿರುವ ಸರಕಾರದ ಅಂಧೇರೀಕಾರಭಾರವನ್ನೇ ಇದು ಸೂಚಿಸುವುದಿಲ್ಲವೆ? — ಜೆ. ಸಿ. ಕುಮಾರಪ್ಪ.

ಕಡಿಮೆಯಾಗಿ ಕರ್ನಾಟಕದ ಪ್ರಜೆಗಳಿಗೆ ಅವಶ್ಯವಿದ್ದ ಅವಕಾಶ ದೊರೆಯದೆ ಹೋಗುವದು

× × ×

ಮೇಲಾಗಿ ಈ ಮಾತು ಆದರೆ ಈಗಲೆ, ಅಂದರೆ ಈ ಘಟನೆಯ ಕೆಲಸ ನಡೆದಾಗಲೆ ಆಗಬೇಕು. ಇಲ್ಲದೆ ಹೋದರೆ ಒಮ್ಮೆ ಇದು ಮುಂದೆ ಹೋಗಿಬಿಟ್ಟರೆ ಇದರ [illegible] ಮುಕ್ತಿ ಏವತ್ತು ವರುಷ ಬೇಕು! [illegible] ಎಲ್ಲ ಕರ್ನಾಟಕದ [illegible] ದೃಷ್ಟಿಯಿಂದ ಈ ಪ್ರಶ್ನೆಯತ್ತ ನೋಡಿ ಅಖಂಡ ಕರ್ನಾಟಕವು ಅಸ್ತಿತ್ವದಲ್ಲಿ ಬರುವಂತೆ ಮಾಡುವದು ಅವಶ್ಯವು. [illegible] ಲಾಭಗಳ [illegible] ಇವೆಲ್ಲ. ಅಖಂಡ ಕರ್ನಾಟಕದಲ್ಲಿ ಹಾಗೂ ಅಖಂಡ ಕರ್ನಾಟಕದ ಮುಖಂಡರಲ್ಲಿ [illegible] ಅಗೇ [illegible] ಇಟ್ಟುಕೊಂಡಿದ್ದೇನೆ [illegible] " ಜಯ ಕರ್ನಾಟಕ " " ಜಯ ಹಿಂದ " ಎಂದು ಮುಕ್ತಾಯವಾಗಿ ಅನ್ನಬಲ್ಲೆವು.

ಕರ್ಮವೀರ

ಶ್ರೀಮುಖ್ಯಾಬ್ದ ವಿಕ್ರಮ ವರ್ಷ ೮೭೨
ಮಾರ್ಗಶೀರ್ಷ ಬ॥ ೧೨ ಸೋಮವಾರ

ಮೂಲಭೂತ ಹಕ್ಕುಗಳು

ಯಾವುದೊಂದು ರಾಷ್ಟ್ರದಲ್ಲಿ ನಾಗರಿಕ ಮೂಲಭೂತ ಹಕ್ಕುಗಳಿಗೆ ಮನ್ನಣೆ ಕೊಡುವದು ಅತ್ಯಂತ ಇಷ್ಟ ಮತ್ತು ಅವಶ್ಯವಾಗಿದೆ. ಪರಕೀಯ ಸರಕಾರಗಳು ಈ ನಾಗರಿಕ ಮೂಲಭೂತ ಹಕ್ಕುಗಳನ್ನು ಮೆಟ್ಟಿ ಹಿಂದುಸ್ತಾನವನ್ನು ಆಳುತಿದ್ದವು. ಸ್ವತಂತ್ರ ರಾಷ್ಟ್ರಗಳು ಹೀಗೆ ಮಾಡಲಾರವು. ಈ ದೃಷ್ಟಿಯಿಂದಲೆ ಸ್ವತಂತ್ರ ಹಿಂದುಸ್ತಾನದ ಘಟನಾಸಮಿತಿಯು ತನ್ನ ಘಟನೆಯಲ್ಲಿ ಈ ನಾಗರಿಕ ಮೂಲಭೂತ ಹಕ್ಕುಗಳಿಗೆ ಮಹತ್ವದ ಸ್ಥಾನವನ್ನು ಕೊಟ್ಟಿದೆ. ಸಪ್ತವಿಧ ಸ್ವಾತಂತ್ರ್ಯದ ಕಲಮು ಈಗಾಗಲೆ ಸ್ವೀಕೃತವಾಗಿ ಈ ದಿಸೆಯಲ್ಲಿ ಹಿರಿಯೋಲಗವು ಮಹತ್ವದ ಹೆಜ್ಜೆಯನ್ನು ಮುಂದಿಟ್ಟಿದೆ. ಭಾಷಣ ಹಾಗು ವಿಚಾರ ಸ್ವಾತಂತ್ರ್ಯ, ಶಾಂತರೀತಿಯಿಂದ ಮತ್ತು ನಿಃಶಸ್ತ್ರರಾಗಿ ಸಭೆ ಸೇರುವ ಸ್ವಾತಂತ್ರ್ಯ, ಸಂಘ ಸ್ವಾತಂತ್ರ್ಯ, ಹಿಂದುಸ್ತಾನದಲ್ಲಿ ಬೇಕಾದಲ್ಲಿ ಸಂಚರಿಸಲು ಸ್ವಾತಂತ್ರ್ಯ, ಹಿಂದುಸ್ತಾನದಲ್ಲಿ ಬೇಕಾದಲ್ಲಿ ವಾಸಿಸುವ ಸ್ವಾತಂತ್ರ್ಯ, ಆಸ್ತಿಯನ್ನು ಸಂಪಾದಿಸುವ ಹಾಗು ಮಾರಾಟ ಮಾಡುವ ಸ್ವಾತಂತ್ರ್ಯ ಮತ್ತು ಯಾವದೇ ವ್ಯವಸಾಯ ಮಾಡುವ ಸ್ವಾತಂತ್ರ್ಯ ಇವೇ ಈ ಸಪ್ತವಿಧ ಸ್ವಾತಂತ್ರ್ಯಗಳು. ಈ ಸ್ವಾತಂತ್ರ್ಯದ ದುರುಪಯೋಗಬಾರದು, ಸಮಾಜದ ಸ್ವಾಸ್ಥ್ಯಗೆ ವಿಘಾತಕವಾಗುವ ರೀತಿಯಲ್ಲಿ ಜನತೆ ನಡೆಯಬಾರದು ಎಂದು ಕೆಲ ನಿರ್ಬಂಧಗಳನ್ನ ಹಾಕಿದ್ದು ಯೋಗ್ಯವೇ ಆಗಿದೆ. ವ್ಯಕ್ತಿ ಸ್ವಾತಂತ್ರ್ಯದ ನೆಪಮಾಡಿ ಸ್ವಚ್ಛಂದ ವ್ಯವಹಾರ ನಡೆಯಬಾರದೆಂದು ಈಮುಗಾದಾಣಹಕಿದಂತೆ, ಅಧಿಕಾರಾರೂಢ ಸರಕಾರದ ಮೇಲೆಯೂ ಒಂದು ಬಗೆಯಿಂದ ನಿರ್ಬಂಧ ಹಾಕಲಾಗಿದೆ. ಅಧಿಕಾರಿಗಳ ಕ್ರಮಗಳ ವಿರುದ್ಧ ವರಿಷ್ಠ ನ್ಯಾಯಾಲಯಗಳಿಗೆ ದೂರು ಒಯ್ಯುವ ಅಧಿಕಾರವನ್ನು ಕೊಡಲಾಗಿದೆ. ಇದು ಅತ್ಯವಶ್ಯ ಮತ್ತು ಇಷ್ಟವಾಗಿದ್ದಿತೆಂದು ಬೇರೆ ಹೇಳಬೇಕಿಲ್ಲ.

ಇದಲ್ಲದೆ ಸಕಲ ನಾಗರಿಕರಿಗೂ ಧರ್ಮ, ಧರ್ಮಾಚರಣೆ ಮತ್ತು ಧರ್ಮ ಪ್ರಸಾರ ಮಾಡುವ ಸ್ವಾತಂತ್ರ್ಯವೀಯುವ ಕಲಮನ್ನೂ ಘಟನಾಸಮಿತಿಯು ಸ್ವೀಕರಿಸಿತು. ಈ ಧಾರ್ಮಿಕ ಸ್ವಾತಂತ್ರ್ಯದ ಕಲಮಿನ ಮೇಲೆ ವಿಶೇಷ ಚರ್ಚೆ ನಡೆಯಿತು. ಅದೇ ರೀತಿಯಾಗಿ ಅಲ್ಪಸಂಖ್ಯಾಕರ ಭಾಷೆ, ಲಿಪಿ, ಸಂಸ್ಕೃತಿಗಳ ರಕ್ಷಣೆಯ ಹಕ್ಕು ಇರತಕ್ಕದ್ದು ಎಂಬ ಕಲಮು ಸ್ವೀಕೃತವಾಯಿತು. ಈ ಕಲಮು ಅತ್ಯಂತ ಮಹತ್ವದ್ದಾಗಿದೆ. ಅಲ್ಪಸಂಖ್ಯಾಕರನ್ನು ಸರ್ವವಿಧವಾಗಿ ಸಾಂತ್ವನಗೊಳಿಸುವದು ಅವಶ್ಯವಾಗಿದೆ. ನಮ್ಮ ದೇಶದಲ್ಲಿ ಎಂದಿನಿಂದಲೂ ಧರ್ಮ ಸಹಿಷ್ಣುತೆ, ಅಲ್ಪಸಂಖ್ಯರ ರಕ್ಷಣೆಗೆ ಮಹತ್ವದ ಸ್ಥಾನವನ್ನು ಕೊಟ್ಟದ್ದುಂಟು. ಸ್ವತಂತ್ರ ಹಿಂದುಸ್ತಾನದ ಘಟನೆಯಲ್ಲಿಯೂ ಅದಕ್ಕೆ ಮಹತ್ವದ ಸ್ಥಾನವನ್ನು ಕೊಟ್ಟದ್ದು ಉಚಿತವೆಂದೇ ಹೇಳಬೇಕಾಗುವದು. ಈ ಸಪ್ತವಿಧ ಸ್ವಾತಂತ್ರ್ಯದ ಪರಿಣಾಮವಾಗಿ ನಾಗರಿಕರು ತಮ್ಮ ಹಕ್ಕು ಬಾಧ್ಯತೆಗಳನ್ನು ಪಡೆಯುವದಲ್ಲದೆ ತಮ್ಮ ಮೇಲಿನ ಹೊಣೆಯನ್ನೂ ನೆರೆಹೊರೆಯುವರೊಡನೆ ಇಟ್ಟುಕೊಳ್ಳತಕ್ಕ ತಮ್ಮ ಸಂಬಂಧವನ್ನೂ ಅರಿತುಕೊಂಡ ವರ್ತಿಸಿದರೆ ಹಿಂದುಸ್ತಾನ ಆದರ್ಶ ರಾಷ್ಟ್ರವಾಗುವಲ್ಲಿ ಸಂದೇಹವಿಲ್ಲ.

ಶ್ರೀ ದಿವಾಕರರ ಅಧಿಕಾರಗ್ರಹಣ

ಕೇಂದ್ರದಲ್ಲಿ ಸುದ್ದಿ ಮತ್ತು ಆಕಾಶವಾಣಿ ಮಂತ್ರಿಗಳಾಗಿ ನೇಮಿಸಲ್ಪಟ್ಟ ಶ್ರೀ ರಂ. ರಾ. ದಿವಾಕರರ ಪ್ರತಿಜ್ಞಾವಿಧಿ ಗವರ್ನರ ಜನರಲ ರಾಜಾಜಿಯವರ ಮುಂದೆ ಆದಾಗ (ತಾ. ೭) ತೆಗೆದ ಚಿತ್ರ

ವಾರದ ಸಿಂಹಾವಲೋಕನ

ಕೀರ್ತಿವೆತ್ತ ಕನ್ನಡಿಗರಿಬ್ಬರು

ಸ್ವತಂತ್ರ ಹಿಂದುಸ್ತಾನದ ಮೊದಲನೆಯ ಮುಖ್ಯ ಸೇನಾಪತಿತ್ವವನ್ನು ವಹಿಸುವ ಮಹಾಭಾಗ್ಯವು ಕೊಡಗಿನ ಶ್ರೀ ಕರಿಯಪ್ಪನವರಿಗೆ ದೊರಕಲಾಗಿದ್ದದು ಅತ್ಯಂತ ಸಂತೋಷದ ಮತ್ತು ಹೆಮ್ಮೆಯ ವಿಷಯವು ಅದೇ ರೀತಿಯಾಗಿ ಕಾಲು ಶತಮಾನಕ್ಕಿಂತ ಹೆಚ್ಚು ಅವಧಿಯ ವರೆಗೆ ರಾಷ್ಟ್ರಸೇವೆ ಮಾಡಿ ಕನ್ನಡಿಗರ ಅಷ್ಟೇ ಅಲ್ಲ ಕನ್ನಡೇತರರ ಪ್ರೇಮ ಆದರ ವಿಶ್ವಾಸಕ್ಕೆ ಪಾತ್ರರಾಗಿರುವ ಶ್ರೀ ರಂಗನಾಥ ದಿವಾಕರ ಇವರು ಕೇಂದ್ರ ಸರಕಾರದಲ್ಲಿ ಮಂತ್ರಿತ್ವವನ್ನು ವಹಿಸಿದ್ದು ಸಂತೋಷದ ಮತ್ತು ಅಭಿಮಾನದ ಸಂಗತಿಯಾಗಿದೆ. ಇಂಥ ಉಚ್ಚಸ್ಥಾನವನ್ನು ಪಡೆದ ಈ ಇಬ್ಬರೂ ಮಹನೀಯರನ್ನು ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಶ್ರೀ ಕರಿಯಪ್ಪನವರು ೧೯೧೯ರಲ್ಲಿ ಹಿಂದೀ ಕ್ಯಾಡೆಟನಲ್ಲಿ ಸೇರಿ ಸ್ವಪರಾಕ್ರಮ ಮತ್ತು ಯುದ್ಧಕಲಾ ನಿಪುಣತೆಯಿಂದ ಇಂದು ಸೇನಾಪತಿಯ ಸ್ಥಳವನ್ನು ಅಲಂಕರಿಸುವರು. ಕಳೆದ ವರುಷವೇ ಸ್ವಾತಂತ್ರ್ಯವನ್ನು ಸಂಪಾದಿಸಿದ ಭಾರತದ ಸೇನಾಪತಿಯ ಮೇಲೆ ಎಂಥ ಗಡುತರವಾದ ಭಾರವಿದೆಯೆಂಬದನ್ನು ಬೇರೆ ಹೇಳಬೇಕಿಲ್ಲ. ಆದರೆ ಕರಿಯಪ್ಪನವರು ಈವರೆಗೆ ಪಡೆದ ತಮ್ಮ ಅನುಭವದಿಂದ ದುಷ್ಟ ರಕ್ಷಣೆ ಶಿಷ್ಟ ಪರಿಪಾಲನೆಯ ಕಾರ್ಯವನ್ನು ಯಶಸ್ವಿಯಾಗಿ ನಡೆಸುವರೆಂದು ನಾವು ನಂಬುತ್ತೇವೆ. ಶ್ರೀ ದಿವಾಕರರಿಗೆ ಅವರ ಪ್ರೀತಿಯ ವಿಷಯವಾದ ಸುದ್ದಿ ಹಾಗು ಆಕಾಶವಾಣಿ ಶಾಖೆಯನ್ನು ಕೊಟ್ಟದ್ದು ಉಚಿತವಾಗಿದೆ. ಕಳೆದ ಮೂವತ್ತು ವರುಷಗಳಿಂದ ಅವರು ವೃತ್ತಪತ್ರ ಲೇಖನ ವ್ಯವಸಾಯದಲ್ಲಿ ತೊಡಗಿರುವರು. ಸ್ವತಂತ್ರ ಹಿಂದುಸ್ತಾನದಲ್ಲಿ ಸುದ್ದಿ ಮತ್ತು ಆಕಾಶವಾಣಿ ಶಾಖೆಗೆ ಮಹತ್ವದ ಸ್ಥಾನವಿದೆ. ದೇಶವಿದೇಶಗಳಲ್ಲಿ ಹಿಂದುಸ್ತಾನದ ಬಗ್ಗೆ ನಿಜವಾದ ಸುದ್ದಿ ಸಂಗತಿಗಳು ತಿಳಿಯುವದು ಅವಶ್ಯವಾಗಿದೆ ಪರಕೀಯ ಆಳಿಕೆಯ ಕಾಲಕ್ಕೆ ಹಿಂದುಸ್ತಾನದ ಬಗ್ಗೆ [illegible] ಅಪಪ್ರಚಾರ ನಡೆಯುತಿತ್ತೆಂಬುದರ ಅನುಭವ ಎಲ್ಲರಿಗೂ ಇದೆ ಇದನ್ನೆಲ್ಲ ಸರಿಪಡಿಸಿ ಭಯ್ರವಾದ ಮತ್ತು ಹಿಂದುಸ್ತಾನದ ಘನತೆ ಗೌರವಕ್ಕೆ ತಕ್ಕುದಾದ ತಳಹದಿಯಲ್ಲಿ ಈ ಎರಡೂ ಶಾಖೆಗಳ ಕಾರ್ಯ ನಡೆಯುವದೆಂದು ಹಾರೈಯಿಸಲಾಗಿದೆ. ದ್ರೋಣಾಚಾರ್ಯರು ನುಡಿದಂತೆ 'ಶಾಪಾದಪಿ ಶರಾದಪಿ' ಅಂದರೆ ಲೆಕ್ಕಣಿಕೆಯ ಬಲದಿಂದಾಗಲಿ ಶಸ್ತ್ರ ಬಲದಿಂದಾಗಲಿ ಹಿಂದುಸ್ತಾನವನ್ನು ಸಂರಕ್ಷಿಸುವ ಹೊಣೆ ಕನ್ನಡಿಗರಿಬ್ಬರ ಮೇಲೆ ಬಿದ್ದುದು ನಮಗೆಲ್ಲರಿಗೂ ಅಭಿಮಾನದ ಸಂಗತಿ. ಪರಮಾತ್ಮನು ಇವರಿಬ್ಬರಿಗೂ ಆಯುರಾರೋಗ್ಯವನ್ನಿತ್ತು ಭಾರತದ ಕೀರ್ತಿಯನ್ನು ದಶದಿಕ್ಕುಗಳಲ್ಲಿ ಮೊಳಗುವಂತೆ ಅವರನ್ನು ಅನುಗ್ರಹಿಸಲಿ.

ಕೆ.ಈ. ಬೋರ್ಡ ಕಾಲೇಜು

ಧಾರವಾಡದಲ್ಲಿ ಕೆ. ಈ. ಬೋರ್ಡ ಕಾಲೇಜಿನ ಹೊಸ ಕಟ್ಟಡದ ಶಂಕು ಸ್ಥಾಪನೆಯ ಸಮಾರಂಭವು ಕಳೆದ ರವಿವಾರ ಮುಂಬಯಿ ಮುಖ್ಯಮಂತ್ರಿ ಮಾನ್ಯ ಬಾಳಾಸಾಹೇಬ ಖೇರರ ಹಸ್ತದಿಂದ ಜರುಗಿತು. ಬೋರ್ಡಿನ ಗವರ್ನಿಂಗ ಬಾಡಿಯ ಚೆಅರಮನ್‌ರಾದ ಶ್ರೀ. ರಾ. ಶ್ರೀ ಹುಕ್ಕೇರಿಕರರು ತಮ್ಮನ್ನು ಈ ಕೆಲಸದಲ್ಲಿ ತೊಡಗಿಸಿದ ಶ್ರೀ ದಿವಾಕರ ರಂಗರಾಯರು ಕೇಂದ್ರ ಸರಕಾರದ ಮಂತ್ರಿಗಳಾದುದಕ್ಕೆ ಸಂತೋಷ ಪ್ರದರ್ಶಿಸಿ ಧನಿಕರು ಈಗಾಗಲೆ ಎರಡು ಲಕ್ಷದಷ್ಟು ರೂಪಾಯಿಗಳನ್ನು ಕೊಟ್ಟದ್ದಕ್ಕಾಗಿ ಅವರನ್ನು ಅಭಿನಂದಿಸಿದರು. ಇನ್ನೂ ಮೂರು ನಾಲ್ಕು ಲಕ್ಷ ರೂಪಾಯಿಗಳು ಬೇಕೆಂದೂ ತಮ್ಮ ಭಾಷಣದಲ್ಲಿ ಹೇಳಿದರು. ಗದುಗಿನ ಪ್ರಸಿದ್ಧ ಸಾವಕಾರರಾದ ಶ್ರೀ ಲಕ್ಷ್ಮಣದಾಸರೊಬ್ಬರೆ ಒಂದು ಲಕ್ಷ ರೂಪಾಯಿಗಳಷ್ಟು ಈ ಕಾಲೇಜಿಗೆ ಕೊಟ್ಟದ್ದು ತುಂಬ ಅಭಿನಂದನೀಯವಾಗಿದೆ. ಧಾರವಾಡದಂಥ ಶೈಕ್ಷಣಿಕ ಕೇಂದ್ರದಲ್ಲಿ ಕೆ. ಈ. ಬೋರ್ಡಿನವರು ನಡೆಸಿದ ಈ ಪ್ರಯತ್ನವು ಅಭಿನಂದನೀಯವೂ ಅವಶ್ಯವೂ ಎಂದು ಬೇರೆ ಹೇಳಬೇಕಿಲ್ಲ. ಆದುದರಿಂದ ಕರ್ನಾಟಕದ ಮತ್ತು ನೆರೆಯ ಪ್ರಾಂತಗಳಲ್ಲಿಯ ಹಣವಂತರು ಹಣವನ್ನು ಕೊಟ್ಟು ಕಾಲೇಜು ಅಭಿವೃದ್ಧಿ ಹೊಂದುವಂತೆ ನೋಡಿಕೊಳ್ಳಬೇಕೆಂದು ಬಿನ್ನವಿಸುತ್ತೇವೆ.

ವಾಚನಾಲಯಗಳು

ಜ್ಞಾನಪ್ರಸಾರ ಕಾರ್ಯದಲ್ಲಿ ವಾಚನಾಲಯಗಳು ಎಷ್ಟೊಂದು ಸಹಾಯಕವಾಗಿವೆಯೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಮುದ್ರಣ ಕಲೆಯು ಇಲ್ಲದ ಕಾಲದಲ್ಲಿ ನಮ್ಮ ದಾಸರು, ಶರಣರು ಭಟ್ಟಂಗಿಗಳು ಗಮಕಿಗಳು ಕೀರ್ತನಕಾರರು ಮೊದಲಾದವರೆಲ್ಲ ಈ ಕಾರ್ಯವನ್ನು ಮಾಡುತಿದ್ದರು. ಆದರೀಗ ಅಕ್ಷರ ಪ್ರಚಾರ ಕಾರ್ಯವು ಭರದಿಂದ ನಡೆದು ಎಲ್ಲೆಲ್ಲಿಯೂ ಓದುಗರ ಸಂಖ್ಯೆ ಹೆಚ್ಚುತಿರುವದರಿಂದ ವಾಚನಾಲಯಗಳು ಪುಸ್ತಕ, ಭಾಂಡಾರಗಳು ಸಂಚಾರಕ ವಾಚನಾಲಯ ಪುಸ್ತಕಾಲಯಗಳು ಹೆಚ್ಚುವದು ಅವಶ್ಯವಾಗಿದೆ. ಮೈಸೂರು ಪ್ರಾಂತವು ಈ ದಿಸೆಯಲ್ಲಿ ಹೆಚ್ಚು ಪ್ರಶಂಸನೀಯ ಕಾರ್ಯವನ್ನು ಮಾಡುತಿರುವುದು. ನಮ್ಮ ಮುಂಬಯಿ ಸರಕಾರವು ಗ್ರಂಥಾಲಯಗಳನ್ನು ಹೊರಡಿಸಿ ಹಳ್ಳಿಗಳ ವಾಚನಾಲಯ, ಗ್ರಂಥಾಲಯಗಳಿಗೆ ಧನಸಹಾಯ ಮಾಡುತಿರುವದು ಆದರೆ ಬರಿ ಸರಕಾರದ ಸಹಾಯದಿಂದ ಇಂಥ ಚಟುವಟಿಕೆಗಳು ಸಂಪೂರ್ಣವಾಗಿ ಯಶಸ್ವಿಯಾಗವು. ಜನತೆಯು ಜ್ಞಾನದಾನದ ಈ ಪವಿತ್ರ ಕಾರ್ಯದಲ್ಲಿ ಸಹಾಯ ಮಾಡಬೇಕು. ಇದೆಲ್ಲವನ್ನು ಮನದಂದೇ ಧಾರವಾಡದಲ್ಲಿ ಸ್ಥಾಪಿತವಾದ ಗ್ರಂಥಾಲಯಕ್ಕೆ ಮಹಾಜನಗಳು ಧನಸಹಾಯ ಸಲ್ಲಿಸುತ್ತಿರುವರು. ಈ ಪುಸ್ತಕ ಭಾಂಡಾರವು ಎಲ್ಲ ಬಗೆಯಿಂದ ಪರಿಪೂರ್ಣವಾಗಬೇಕಾದರೆ ನೀರಿನಂತೆ ಹಣವನ್ನು ಸೂರೆಮಾಡಬೇಕಾಗುವದು. ವಾಚನಾಲಯ ಮತ್ತು ಗ್ರಂಥಾಲಯಗಳ ಮಹತ್ವವನ್ನು ಜನತೆಗೆ ತಿಳಿಸಿಕೊಡುವ ಉದ್ದೇಶದಿಂದಲೇ ಧಾರವಾಡದಲ್ಲಿ ಮೊನ್ನೆ ದಿನ ಮೈಸೂರಿನ ಶ್ರೀ ಜಿ ಹನುಮಂತರಾಯರ ಅಧ್ಯಕ್ಷತೆಯಲ್ಲಿ ವಾಚನಾಲಯಗಳ ಪರಿಷತ್ತನ್ನು ಕೂಡಿಸಿದ್ದು. ಜ್ಞಾನಪ್ರಸಾರದ ಕಾರ್ಯವು ಭರದಿಂದ ನಡೆಯುವದಕ್ಕಾಗಿ ಅಲ್ಲಲ್ಲಿ ವಾಚನಾಲಯಗಳು ಸ್ಥಾಪಿತವಾದರೆ ಪರಿಷತ್ತು ಕೂಡಿಸಿ ಮತ್ತು ನ್ಯಾಯಮೂರ್ತಿ ಚಗಲಾರವರಿಂದ ಅದನ್ನು ಉದ್ಘಾಟಿಸಿದ್ದು ಸಾರ್ಥಕವಾಗುವದು.

ಜಯಪುರ ಕಾಂಗ್ರೆಸ್

ಜಯಪುರದಲ್ಲಿ ಹಿಂದೀ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧಿವೇಶನ ಮುಂದಿನ ವಾರದಲ್ಲಿ ಪ್ರಾರಂಭವಾಗಿ ತನ್ನ ಕಾರ್ಯಕಲಾಪಗಳನ್ನು ಮುಗಿಸುವದು. ಡಾ. ಪಟ್ಟಾಭಿ ಸೀತಾರಾಮಯ್ಯನವರ ಮನಸಿನಲ್ಲಿ ಯಾವ ವಿಚಾರಗಳೂ ಕಾರ್ಯಕ್ರಮಗಳೂ ಇವೆಯೋ ನಾನರಿಯೆ.

ಗಾಂಧೀಜಿಯ ಮರಣಾನಂತರ ಕಾಂಗ್ರೆಸ್ಸು ಸೇರುತಿರುವುದು ಇದೇ ಮೊದಲು. ಅವರ ಪಾರ್ಥಿವ–ಉದಾರ ಪ್ರಶಂಸೆಗಳು ಸಭೆಯಲ್ಲಿ ನಡೆಯುವವೆಂಬಲ್ಲಿ ಸಂಶಯವಿಲ್ಲ. ಆ ದೃಶ್ಯ ಹೃದಯಸ್ಪರ್ಶಿಯಾಗುವ ಸಂಭವವುಂಟು. ಹಿಂದಿ–ಹಿಂದುಸ್ಥಾನಿಗಳ ಬಗ್ಗೆ ಬಿಸಿ ಬಿಸಿ ವಿವಾದ ಒಂದಿಷ್ಟು ಧೂಳೆಬ್ಬಿಸಿದರೂ ಎಬ್ಬಿಸಬಹುದು. ಭಾಷಾನುಗುಣ ಪ್ರಾಂತರಚನೆ, ಶಾಸನ ಸಭೆಯೊಳಗಿನ ಮತ್ತು ಇತರ ಕಾಂಗ್ರೆಸ್ ಸಂಸ್ಥೆಗಳ ಸಂಬಂಧ ಇವುಗಳ ಬಗ್ಗೆಯೂ ಅಂತೆಯೆ ಅಧಿಕಾರಸ್ಥ ಮತ್ತು ಅಧಿಕಾರರಹಿತ ಕಾಂಗ್ರೆಸ್ಸಿಗರೊಳಗೂ ಉಗ್ರ ವಾಗ್ವಾದಗಳಾಗಬಹುದು. ಇನ್ನೂ ನಾಲ್ಕಾರು ವಿವಾದಾಸ್ಪದ ವಿಷಯಗಳನ್ನು ಉಲ್ಲೇಖಿಸಲು ಸಾಧ್ಯವುಂಟು.

ಆದರೆ [illegible] ನಮ್ಮ ಅಭಿಪ್ರಾಯವೇನಂದರೆ ರಾಷ್ಟ್ರದ ಜೀವನವನ್ನೂ ಕಾಂಗ್ರೆಸ್ ಸಂಸ್ಥೆಯನ್ನೂ ವ್ಯಾಪಿಸಿರುವ ಮೂಲಭೂತ ವ್ಯಾಧಿಗಳನ್ನು ಮನಗಂಡು ಅವನ್ನು ಗುಣಪಡಿಸುವ ನಿರ್ಧಾರಕ್ಕೆ ಬಂದ ಹೊರತು ಈ ಚರ್ಚೆಗಳಿಂದ ಯಾವ ಸಮಸ್ಯೆಗೂ ಪರಿಹಾರ ದೊರಕದೆ ಹೋಗಬಹುದು. ಆ ವ್ಯಾಧಿಗಳು ಈ ಕೆಳಗಿನಂತಿವೆ:

೧. ನಾವು ಪರಮಾತ್ಮನನ್ನು ನಮ್ಮ ಜೀವನದಿಂದ ಹೊರತಳ್ಳಿ ಸತ್ಯ, ಪ್ರಾಮಾಣಿಕತೆ, ಸೇವೆ, ನಮ್ಮ ಸಹಜೀವಿಗಳ ನಿಜವಾದ ಸುಖ ಮತ್ತು ಮನುಷ್ಯಸಂಸ್ಕೃತಿಗೆ ಅತ್ಯವಶ್ಯವಾದ ಇತರ ವಿಷಯಗಳನ್ನು ಅಲಕ್ಷಿಸಿ ಅವುಗಳಿಗಿಂತ ರಾಜಕಾರಣದ, ವ್ಯಾಪಾರದ, ಚುನಾವಣೆಯ ಮತ್ತು ಇನ್ನಿತರ ಬಗೆಯ ವಿಚಾರಗಳಿಗೆ ಪ್ರಾಶಸ್ತ್ಯ ಕೊಡುತಿದ್ದೇವೆ. ಪರಿಣಾಮವಾಗಿ ನಾವು ಸರಳತೆಯನ್ನು ಬಲಿಗೊಟ್ಟು ಅಧುನಿಕ ವಿಜ್ಞಾನದಿಂದ ದೊರಕಿದ ಭೋಗವಿಲಾಸ ಸಾಮುಗ್ರಿಗಳಿಗೆ ಮಾರುಹೋಗಿದ್ದೇವೆ. ಅವುಗಳನ್ನು ಅನುಭೋಗಿಸುವ ಆವಸರದಲ್ಲಿ ನಾವು ನಮ್ಮ ನಮ್ಮದ ಸಾಂಸ್ಕೃತಿಕ ಸ್ಥಿತಿಯನ್ನು ಕೂಡ ಮರೆತುಬಿಟ್ಟಿದ್ದೇವೆ, ಜೀವನದ ಪ್ರಾಥಮಿಕ ಆವಶ್ಯಕತೆಗಳನ್ನು ಕೂಡ ತೊರೆಯುತಿದ್ದೇವೆ.

೨. ಕಾಂಗ್ರೆಸ್ಸಿನಲ್ಲಿ ಈಗ ಹಬ್ಬಿರುವ ದ್ವಿದಲ ರಾಜ್ಯ ಪದ್ಧತಿಯಿಂದ ಅದರ ಎಲ್ಲ ಕೆಲಸಗಳಿಗೂ ಆತಂಕವಾಗಿದೆ. "ಕಾಂಗ್ರೆಸ್" ಎಂಬ ಹೆಸರನ್ನು ಕೇವಲ ಅದರ ಶಾಸನಸಭಾತ್ಮಕ ಅಂಗಕ್ಕೆ ಮಾತ್ರ ಇಲ್ಲವೆ ಜನತೆಯ ಅಧಿಕಾರೀತರ ಸಂಸ್ಥೆಗೆ ಮಾತ್ರ ಮೀಸಲಾಗಿರಿಸಬೇಕು. ಎರಡನೆಯದು ಸಂಸ್ಥಾತ್ಮಕ ಸರಕಾರದ ಅಧಿಕಾರಸ್ಥಾನಗಳಿಗೆ ಸ್ಪರ್ಧಿಸದೆ ಸ್ವತಂತ್ರ ಸಂಸ್ಥೆಯಾಗಿರಬೇಕು. ಕೇವಲ ತಾನು ಕಟ್ಟಿ ಬೆಳಸಿದ ಜನಾಭಿಪ್ರಾಯದ ಬಲದಿಂದ ಅದು ಸರಕಾರವನ್ನು ನಿಯಂತ್ರಿಸಲೆಳಸಬೇಕು. ಪ್ರಜೆಗಳ ನಡುವೆ ಪ್ರತ್ಯಕ್ಷವಾಗಿಯೂ ಅಧಿಕಾರಬಲರಹಿತವಾಗಿಯೂ ರಚನಾತ್ಮಕ ಕಾರ್ಯಗಳನ್ನು ಮಾಡಿದರೆ ಮಾತ್ರ ಇದು ಸಾಧ್ಯವಾದೀತು. ಇದರಿಂದ ಸರಕಾರದೊಡನೆ ಅಸಹಕಾರದ ಇಲ್ಲವೆ ಶಾಶ್ವತ ವಿರೋಧದ ಧೋರಣೆಯನ್ನು ಅನುಸರಿಸಬೇಕೆಂದು ಅರ್ಥವಾಗುವದಿಲ್ಲ. ವಿಶಿಷ್ಟಸಂದರ್ಭಗಳಲ್ಲಿ ಹೊರತು ಯಾವಾಗಲೂ ಸಹಕಾರ ಇರಬಲ್ಲದು. ಇರಬಹುದು ಆದರೆ ಅಧೀನತೆ ಮಾತ್ರ ಸಲ್ಲದು. ಕಾಂಗ್ರೆಸ್ ಸಂಸ್ಥೆಯನ್ನು ಹೊಕ್ಕಿರುವ ಎಷ್ಟೋ ದೋಷಗಳು, ಈ ಎರಡು ಕರ್ತವ್ಯಾಂಗಗಳು ಬೇರ್ಪಡಿಸಲ್ಪಟ್ಟರೆ ತೊಡೆದು ಹೋಗುವವು. ಶಾಸನ ಸಭೆಯ ಹೊರಗಿರುವ ಅಂಗಕ್ಕೆ "ಲೋಕ ಸೇವಕ ಸಂಘ"ವೆಂದು ಹೆಸರಿಡಬಹುದೆಂದು ಗಾಂಧೀಜಿ ಸೂಚಿಸಿದ್ದರು. ಇದನ್ನು ಗಂಭೀರವಾಗಿ ಆಲೋಚಿಸುವದು ಉಚಿತವಾಗಿದೆ.

ಈ ಎರಡು ವಿಷಯಗಳನ್ನು ನಾವು ಸರಿಪಡಿಸಿಕೊಂಡರೆ, ವಿವಿಧ ವಿವಾದಾತ್ಮಕ ಪ್ರಶ್ನೆಗಳ ಬಗ್ಗೆ ನಮಗಿರುವ ದೃಷ್ಟಿ ಬದಲಾಗಿ ಸರಿಯಾದ ಪರಿಹಾರೋಪಾಯವನ್ನು ಕಂಡು ಹಿಡಿಯಲು ಅನುಕೂಲವಾಗುವದು.

ಮುಂಬಯಿ ೪-೧೨-೪೮ — ಕಿ. ಘ. ಮಶ್ರೂವಾಲಾ

ಅಧಿಕಾರಮದ

[illegible] ಅಧಿಕಾರ [illegible] ಅಧಿಕಾರಮದದ [illegible] ವರ್ಷಗಳ ಹಿಂದೆ ಗಾಂಧೀಜಿ ನನಗೆ [illegible] ಮಾತುಗಳು [illegible]. ಗಾಂಧೀಜಿ ಎರಡು ದಿನಗಳ ಮಟ್ಟಿಗಾಗಿ ಶಾಂತಿನಿಕೇತನಕ್ಕೆ ಬಂದಿದ್ದರು. [illegible] ಅವರು [illegible] ಸವಾರಿಗೆ ಹೊರಟಿದ್ದಾಗ ಅವರ ಜೊತೆಗೆ ಹೋಗುವ ಸೌಭಾಗ್ಯ ನನಗೆ ದೊರಕಿತ್ತು. ಗುರುದೇವ ರವೀಂದ್ರನಾಥರು ಅವರ ಬೀಳ್ಕೊಡಲಾಗಿ ಕೊಟ್ಟಿದ್ದ "ವ್ಯಾಮಲಿ" ಗೆ ಮರಳಿ ಬಂದು ನಾಯಂಪ್ರಾರ್ಥನೆಗೆ ಅಣಿಯಾಗುತ್ತಾ ಇದ್ದಾಗ ಒಮ್ಮಿಂದೊಮ್ಮೆ ಗಾಂಧೀಜಿ ನುಡಿದರು: "ಅಧಿಕಾರಗ್ರಹಣದಿಂದ ನಮ್ಮ ಇಷ್ಟು ಜನ ಒಳ್ಳೆಯ ಕೆಲಸಗಾರರು ನೀತಿಗೇಡಿಗಳಾಗುವರೆಂದು ಮೊದಲೇ ಗೊತ್ತಿದ್ದರೆ ಅಂಥ ಸಲಹೆಯನ್ನೆ ನಾನು ಕೊಡುತ್ತಿದ್ದಿಲ್ಲ!" ನಾನು ಅವರ ಮುಖವನ್ನು ನೋಡಿದೆ. ಅದು ದಾರುಣವಾದ ಅಂತರ್ವೇದನೆಯಿಂದ ವಿದೀರ್ಣವಾದಂತಿತ್ತು.

ಈ ವಾಕ್ಯ ಯಾವ ಮಾನಸಿಕ ಹಿನ್ನೆಲೆಯಿಂದ ಸ್ಫುರಣಗೊಂಡಿತೋ ನಾನರಿಯೆ. ಆದರೆ ಗಾಳಿಸವಾರಿಯುದ್ದಕ್ಕೂ ಅವರು ಬಿಗಿಯಾದ ಮೌನ ಧರಿಸಿದ್ದರು. ಇದರಿಂದ ಅವರಲ್ಲಿ ಏನೋ ಒಂದು ಅಂತರ್ಮಂಥನ ನಡೆದಿರಬೇಕೆಂದು ನಾನು ಅನುಮಾನಿಸಿದೆ.

ಅದು ಹೇಗೆಯೆ ಇರಲಿ, ನಿಸ್ಸಿನಸ್ವಯಂಪ್ರೇರಿತ ಸೇವಾತತ್ಪರನನ್ನು ರಾತ್ರಿ ಬೆಳಗಾಗುವಷ್ಟರಲ್ಲೆ ಇಂದಿನ "ಬೇಗಡೆಯ ದೇವತೆ"

ಇಲ್ಲಿದೊ ಅದು ಎಲ್ಲರಿಗೂ ಯಾವಾಗಲೂ ಕಾಯಿದೆ ಬದ್ಧವಾಗಲಾರದು. ಸಾತ್ವಿಕನಿಗೆ ವಿಷಯೋಪಭೋಗದತ್ತ ಮನಸ್ಸು ಹಾಕಲು ವೇಳೆ ಸಿಕ್ಕುವದಿಲ್ಲ. ಈ ರೀತಿಯಾಗಿ ಅದರಲ್ಲಿ ಅವರ ಇಚ್ಛೆಯೇ ಇಲ್ಲದಂತಾಗುವದು ಈ ಅರ್ಥದಲ್ಲಿ ಬ್ರಹ್ಮಚರ್ಯಕ್ಕೆ ಶ್ರೇಷ್ಠ ಸ್ಥಾನವಿದೆ.

ನಾನಾಗಲಿ ಎರಡನೆಯವರಾಗಲಿ ಮದುವೆಗಳಿಗೆ ಅಪ್ಪಣೆಕೊಡುವ ಇಲ್ಲವೆ ನಿರಾಕರಿಸುವ ಪ್ರಶ್ನೆಯೇ ಉದ್ಭವಿಸುವದಿಲ್ಲ. ಆಯ್ಕೆಯ ಕ್ಷೇತ್ರವನ್ನು ಮರ್ಯಾದಿತಗೊಳಿಸುವದು ಜಾಣತನದ್ದು ಎಂದು ಮಾತ್ರ ನಾನು ಹೇಳಬಲ್ಲೆ: ಉಳಿದ ಯಾವ ಬಗೆಯ ಮರ್ಯಾದೆಯೂ ಈ ಗೆಳೆತನದಲ್ಲಿ ಇರುವದಿಲ್ಲ. ಆದರೆ ಈ ಪದ್ಧತಿಯಲ್ಲಿ ಒಬ್ಬರೇ ಒಬ್ಬರು ಜೀವಾವಧಿ ಗೆಳೆಯರಿರಬಲ್ಲರಾದ್ದರಿಂದ ಕ್ಷೇತ್ರವನ್ನು ಮರ್ಯಾದಿತಗೊಳಿಸಿ ಸ್ವಲ್ಪ ಪರಿಚಿತವಾಗಿದ್ದರೆ ಆಯ್ಕೆ ಸುಲಭ ಮತ್ತು ಕಡಮೆ ಗಂಡಾಂತರದ್ದಾಗುವದು ಅಸ್ಪೃಶ್ಯತೆಯು ಸಾಮಾನ್ಯವಾಗಿಪಾಪವು; ಜೈನಧರ್ಮದಲ್ಲಿ ಕೂಡ ಅದು ಪಾಪವು. ಹೆಣ್ಣುಮಗಳ ಪಾತಿವ್ರತ್ಯ ಭಂಗಮಾಡಲು ಪ್ರವೃತ್ತರಾದಾಗ, ಈ ದೇಹವನ್ನು ನಾಶಪಡಿಸಿಕೊಳ್ಳುವದರಿಂದ ಅಂಥಂತಮುಸ್ಸಿನಿಂದ ಪಾರಾಗುವೆನೆಂಬ ವಿವೇಕ ಹೊಳೆದಾಗ ಮಾನವನು ಅಂಥಂತಮುಸ್ಸು ಮತ್ತು ಅಸ್ಪೃಶ್ಯತೆಯಲ್ಲಿ ಎರಡನೆಯದನ್ನೇ ಆರಿಸಿಕೊಳ್ಳಬೇಕು. ಆಶ್ರಮದಲ್ಲಿ ಕೆಲ ಮಟ್ಟಿಗೆ ಉಪವಾಸದ ದುರುಪಯೋಗ ನಡೆದಿದೆ ಆದರೆ ಅದರ ದುರುಪಯೋಗವು ಕೂಡ ಸುಲಭವಲ್ಲಾದ್ದರಿಂದ ಅದು ಸಾಂಕ್ರಾಮಿಕವೆಂದೂ ಆಗಲಾರದು. ಹಸಿವೆಯು ಬೆನ್ನುಹತ್ತಿದ ಬೇತಾಳವೇ, ಇದು.

ನಿಜವಾದ ಅಹಿಂಸೆಯು ಅತಿರೇಕ ಆದರೆ ಉಪಸಾಧ್ಯವಿಲ್ಲ ವಾಸವನ್ನು ವಿಡಂಬನೆ ಮಾಡಿದಂತೆ ಸಾಮಾನ್ಯ ಜೈನರು ಕೂಡ ಈ ಅಹಿಂಸೆಯನ್ನು ಅಪಹಾಸಕ್ಕೆ ಗುರಿಪಡಿಸಿರುವದು ಸಾಮಾನ್ಯ ಜೈನನಿಗೆ ಅಹಿಂಸೆಯ ಹೊಟ್ಟು ಮಾತ್ರಗೊತ್ತಿದೆ ಅದರ ಸಾರಸರ್ವಸ್ವ ಮಾತ್ರ ಗೊತ್ತಿಲ್ಲ. ಇದೀ ಜೀವನದಲ್ಲಿ ಅಮಿತ ಪ್ರೇಮವೇ ಅಹಿಂಸೆ. ಅದುದರಿಂದ ಎರಡನೆಯವರನ್ನು ಉಳಿಸುವುದಕ್ಕಾಗಿ ಆತ್ಮ ಬಲಿದಾನ ಮಾಡಲು ಸಿದ್ಧನಿರುವನೆಂದು ಅದರ ಅರ್ಥ.

ಮೇಲಿನ ವಿವರಣೆಯಿಂದ ನಿಮ್ಮ ಮನಸ್ಸು ಸಮಾಧಾನ ಹೊಂದುವದೆಂದು ನಾನು ಆಶಿಸುತ್ತೇನೆ. ಆದರೆ ಯಾವದೊಂದು ಶಾಶ್ವತ ಸೇವಾಕಾರ್ಯದಲ್ಲಿ ನೀವು ಪೂರ್ಣ ಸಮಾಧಾನ ಹೊಂದಿದ ನಂತರವೇ ನಿಮಗೆ ನಿಜವಾದ ಶಾಂತಿಯು ಲಭಿಸಬಲ್ಲುದು.

ಪ್ರೀತಿಯ
"ಬಾಪೂ"

[illegible]

ಕ್ಷತ್ರ ಕೋಟಿಯ್ಸಿ ಅಂಥಕೂಪಗಳಿಂದ ತಪ್ಪಿಸಿಕೊಳ್ಳಬಲ್ಲನು. ಆಗ "ಅಧಿಕಾರದೊಡನೆ ನೀತಿ ಭ್ರಷ್ಟತೆ ಬಂದೇ ಬರುತದೆ" ಎಂಬ ನಾಣ್ಣುಡಿ ಹೋಗಿ "ಅಧಿಕಾರದಿಂದ ನೀತಿಯ ಉನ್ನತಿಯಾಗುವದು" ಎಂಬ ನಾಣ್ಣುಡಿ ಬಂದೀತು. ಏಕೆಂದರೆ, ವಿಚಾರಿಸಿ ನೋಡಿದಲ್ಲಿ, ಶಾಂತಿಯಂತೆ ಅಧಿಕಾರವೂ ಭಗವಂತನ ಅಂಶವಲ್ಲವೇ ?

— ಎಂ. [illegible]

ಬಾಪುಮಂಟಪ

ಸರ್ವೋದಯ ಪ್ರದರ್ಶನದಲ್ಲಿ ಆಕರ್ಷಕವಾದ ಸ್ಥಾನದಲ್ಲಿ ಬಾಪುಮಂಟಪವೊಂದನ್ನು ರಚಿಸಿ ಅಲ್ಲಿ ಮಹಾತ್ಮಾ ಗಾಂಧಿ ಅವರ ಭಾವಚಿತ್ರಗಳನ್ನು ಇರಿಸಬೇಕೆಂದು ಸೂಚಿಸಲಾಗಿದೆ ಗಾಂಧೀಜಿಯ ನಾನಾ ಮುಖ ಜೀವನ ಘಟನಾವಳಿಗಳನ್ನು ಸಮಗ್ರವಾಗಿ ಚಿತ್ರಿಸುವ ಅವರ ಸ್ಥಾಂತರಗಳನ್ನು ಜೀವನ ವಿಕಾಸದ ಮೆಟ್ಟಿಲುಗಳನ್ನೂ ತೋರಿಸುವಂತೆ ಇಲ್ಲಿ ಅವರ ಪಟಗಳನ್ನು ವಿಂಗಡಿಸಿ ಇಡಬೇಕೆಂಬ ಉದ್ದೇಶವಿದೆ. ಗಾಂಧೀಜಿಯ ಇಂತಹ ಭಾವಚಿತ್ರಗಳನ್ನುಳ್ಳ ಸ್ನೇಹಿತರು ಆ ಚಿತ್ರಗಳನ್ನು ಸರ್ವೋದಯ ಪ್ರದರ್ಶನಕ್ಕೆ ಕಳಿಸಿಕೊಡುವ ಕೃಪೆ ಮಾಡಬೇಕೆಂದು ಪ್ರಾರ್ಥಿಸುತ್ತೇವೆ. ಆ ಚಿತ್ರಗಳು ತಮಗೆ ಮರಳಿ ಬೇಕೆಂದರೆ ಆ ಚಿತ್ರಗಳ ಪ್ರತಿ ತೆಗೆದುಕೊಂಡು ಮರಳಿ ಕಳಿಸುವ ಏರ್ಪಾಟು ಮಾಡಲಾಗುವದು.

ದೇಶೀಯ ಮತ್ತು ವಿದೇಶೀಯ ಅನೇಕಾನೇಕ ಭಾಷೆಗಳಲ್ಲಿ ಗಾಂಧೀಜಿಯವರನ್ನು ಅವರ ಕಾರ್ಯವನ್ನು ಕುರಿತು ಅಪಾರ ಸಾಹಿತ್ಯವಿದೆ ಎಂಬ ಮಾತು ಸರ್ವವಿದಿತವಿದೆ. ಸಾಧ್ಯವಿದ್ದಷ್ಟು ಈ ಸಾಹಿತ್ಯವನ್ನು ಕೂಡಿಸಿ ಈ ಮಂಟಪದಲ್ಲಿ ಪ್ರದರ್ಶಿಸಬೇಕೆಂದಿದ್ದೇವೆ. ಅದ್ದರಿಂದ ಎಲ್ಲ ಪ್ರಕಾಶಕರೂ ಗ್ರಂಥಕರ್ತರೂ ತಾವು ಪ್ರಕಟಿಸಿದ ಪುಸ್ತಕಗಳ ಒಂದೊಂದು ಪ್ರತಿಯನ್ನು ಪುಸ್ತಕದ ಹೆಸರನ್ನು [illegible] ಪುಸ್ತಕದಲ್ಲಿ ಹಿಂದಿಯಲ್ಲಾಗಲೀ ಇಂಗ್ಲೀಷಿನಲ್ಲಾಗಲೀ ಬರೆದು ದಯವಿಟ್ಟು ಕಳುಹಿಸಬೇಕೆಂದು ಬೇಡುತ್ತೇವೆ. ಹೀಗೆ ಕಳಿಸಿದ ಪುಸ್ತಕಗಳನ್ನು ಮಾತ್ರ ಮರಳಿ ಕಳಿಸಲಾಗುವದಿಲ್ಲ.

ಗಾಂಧೀಜಿಯವರಿಗೆ ಸಂಬಂಧಪಟ್ಟ ಈ ಚಿತ್ರಗಳನ್ನು ಪುಸ್ತಕಗಳನ್ನು ಸರ್ವೋದಯ ಪ್ರದರ್ಶನಾನಂತರ, ಗಾಂಧೀ [illegible]

— [illegible]

ವಿವಿಧ ಸಂಶಯಗಳಿಗೆ ಉತ್ತರ

[೧೯೩೨–೩೩ ರಲ್ಲಿ ಯರವಡಾ ತುರುಂಗದಲ್ಲಿ ಬಾಪೂಜಿಯನ್ನು ಸಂದರ್ಶಿಸುವ ಸುದೈವ ನನಗೆ ಲಭಿಸಿತ್ತು. ನನ್ನ ಸಂಗಡ ಮಣಿಬೇನ, ಸತಿ ಧ್ಯಾಕರಿಸಿ ಮತ್ತು ಮೀರಾ ಬೇನರೂ ಇದ್ದರು. ನಾನು ಸಾಬರಮತಿಗೆ ಮರಳಿದ ನಂತರ ಬಾಪು ನನಗೆ ಕೆಳಗಿನ ಪತ್ರವನ್ನು ಬರೆದರು. ಆ ಪತ್ರಕ್ಕೆ ಅವರು ದಿನಾಂಕ ಹಾಕಿರಲಿಲ್ಲ.

— ಪ್ರೊ. ಪಿ. ಜಿ. ಮ್ಯಾಥ್ಯು]

"ಅಪರಿಶೋಧಿತ

"ನನ್ನ ಪ್ರಿಯ ಮ್ಯಾಥ್ಯು,

"ನಿಮ್ಮ ಮೂರು ಪತ್ರಗಳು ನನ್ನ ಕೈ ಸೇರಿವೆ. ವಿವೇಚನೆಗೆ ತಕ್ಕದಾದ ಸ್ಥಳವಿದೆ. ಆದರೆ ಅದು ಭಾವನೆಯ ಸ್ಥಾನವನ್ನು ಮಾತ್ರ ಆಕ್ರಮಿಸಬಾರದು. ಯಾವನೊಬ್ಬ ವಿವೇಚನಾಪರ ಮನುಷ್ಯನ ಇಪ್ಪತ್ನಾಲ್ಕು ಗಂಟೆಗಳ ಕಾರ್ಯ ಕಲಾಪಗಳನ್ನು ನೋಡಿದರೆ ಅವನು ವಿವೇಚನಾಪರನಾಗದೆ ಭಾವನಾತ್ಮಕವಾಗಿಯೆ ಎಲ್ಲವನ್ನು ಮಾಡುವನು ಎಂಬುದು ನಿಮಗೆ ಕಂಡುಬರದಿರದು. ಇದರ ಅರ್ಥವೆಂದರೆ ವಿವೇಚನಾಶಕ್ತಿಯು ಒಮ್ಮೆ ಬೆಳವಣಿಗೆ ಹೊಂದಿತೆಂದರೆ ತಾನಾಗಿಯೆ ಕಾರ್ಯ ಮಾಡಹತ್ತುವದು ಮತ್ತು ಭಾವನೆಯು ದೃಢವಾಗಿದ್ದರೆ ಅಂಧಶ್ರದ್ಧೆಯನ್ನಾಗಲಿ ಅನೀತಿಯನ್ನಾಗಲಿ ನಿರಾಕರಿಸಿಬಿಡುವದು. ವಿವೇಚನಾಪರ ಶಕ್ತಿಯು ಯಾವಾಗಲೂ ತಿದ್ದುವದಕ್ಕೆ ದಕ್ಷವಾಗಿ ತನ್ನ ಸ್ಥಳದಲ್ಲಿಯೇ ಉಳಿದುಕೊಳ್ಳುವದು. ಅದೆಂದೂ ಚಲಿಸುವದಿಲ್ಲ. ಮತ್ತು ಈ ಕಾರ್ಯವನ್ನು ಅದು ಅಶ್ರಮದಲ್ಲಿಯೇ ಮಾಡುತಿದೆಂದು ನಾನು ಹೇಳಬಯಸುತ್ತೇನೆ. ಕರ್ತವ್ಯವೇ ಜೀವನ, ಅಂದರೆ ಜೀವನವು ಕರ್ಮಮಯ - ಇದನ್ನು ತರ್ಕಬಲದಿಂದ ಹಾರಹೊಡೆದರೆ ಅದು ಅಪ್ರಮಾಣವಾಗುವದು. ಅದನ್ನು ಪದಚ್ಯುತ ಮಾಡಬೇಕಾಗುವದು.

ಇನ್ನು ನಿಮ್ಮ ಎರಡನೇ ಪತ್ರವನ್ನು ವಿಮರ್ಶಿಸುವಾ—ನಮ್ಮ ಟಣ್ಣು ಮತ್ತು ಇತರ ಅನೇಕ ವಿಷಯಗಳಂತೆ ನಮ್ಮ ವೃತ್ತಿಯೂ ಜನ್ಮ ನಿಯಮಿತವಾಗಿರಬೇಕೆಂದು ನಾನು ಹೇಳುವದಿಲ್ಲ. ಆದರೆ ವಸ್ತುಸ್ಥಿತಿ ಮಾತ್ರ ಹಾಗೆ ಇದೆ. ನಾನು ಸೃಷ್ಟಿ ನಿಯಮವನ್ನು ಹೇಳುತಿದ್ದೇನೆ. ನನ್ನ ಅಭಿಪ್ರಾಯವನ್ನಲ್ಲ ಅದು ಸುನೀತ ಮನುಷ್ಯನಿಗೆ ಅವಶ್ಯವಾಗಿ ಬೇಕಾದ ಉತ್ಸಾಹ ಶಕ್ತಿಯು ಕೊಳ್ಳುವದು ನಮ್ಮ ಹತ್ತಿರದ ಮತ್ತು ದೂರದ ಪೂರ್ವಜರಿಂದ ಅನುವಂಶಿಕವಾಗಿ ಬಂದ ಶಾರೀರಿಕ ಮತ್ತು ಬೌದ್ಧಿಕ ಒಲವುಗಳು ಜನ್ಮತಃ ನಮಗೆ ಪ್ರಾಪ್ತವಾಗಿವೆಯೆಂದು ಕಾಯಿದೆಯಿಂದ ನಿಷ್ಪನ್ನವಾಗುತ್ತದೆ. ಈ ಒಲವುಗಳನ್ನು ಬದಲಿಸಬಹುದು; ಆ ಒಲವುಗಳುದುಷ್ಟವಾಗಿದ್ದಾಗ ಇಲ್ಲವೆ ಸ್ವಾರ್ಥಕ್ಕಲ್ಲದೆ ಪರಾರ್ಥಕ್ಕಾಗಿ ಅವಶ್ಯವೆನಿಸಿದಾಗ ಬದಲಾವಣೆಯು ಅತ್ಯಗತ್ಯವೆನಿಸುತ್ತದೆ.

ದಂಪತಿಗಳಲ್ಲಿ ಯಾರೊಬ್ಬರಿಗೂ ಯಾವದೇ ಕಾಲಕ್ಕೆ ಬಿಟ್ಟು ಹೋಗುವ ಅಧಿಕಾರವಿದೆ. ಸಮಾಗಮವು ಕೇವಲ ಐಚ್ಛಿಕವಾಗಿರತಕ್ಕದ್ದು. ಅದುದರಿಂದ ದಂಪತಿಗಳಲ್ಲಿ ಯಾರೊಬ್ಬರು ಸಮಾಗಮವನ್ನು ನಿಶ್ಚಯ ಪೂರ್ವಕವಾಗಿ ನಿರಾಕರಿಸಿದಾಗ, ಇಂದ್ರಿಯನಿಗ್ರಹ ಮಾಡಿಕೊಳ್ಳುವ ಶಕ್ತಿ ಇಲ್ಲದಿದ್ದರೆ ಅವರು ಎರಡನೆಯವರನ್ನು ಆರಿಸಿಕೊಳ್ಳಬಲ್ಲರು. ನಿಜಾರ್ಥದಲ್ಲಿ ವಿವಾಹವಾಗದಿದ್ದಾಗ ಈ ಪ್ರೇಮಮಯ ವಿವಾಹವಾಗದಿದ್ದಾಗ ಮಾತ್ರ ಇದು ಸಂಭವಿಸುವದು. ವಿವಾಹವೆಂದರೆ ಸ್ತ್ರೀ ಪುರುಷರಲ್ಲಿಯ ಶಾಶ್ವತ ಮಿತ್ರತ್ವವು; ಅದುದರಿಂದ ಪರಸ್ಪರರಲ್ಲಿಯ ಶಾರೀರಿಕ ಸಂಬಂಧಕ್ಕೆ ಇದರಿಂದ ಅವಕಾಶವುಂಟಾದರೂ ಆ ವಿಷಯವಾಸನೆಯನ್ನು ನಿಗ್ರಹಿಸಲು ಪ್ರಬಲವಾದ ಒಲೆತಗಳು ಅದರಲ್ಲಿ ಯಾವಾಗಲೂ ಇದ್ದೇ ಇವೆ. ಈ ಬಗೆಯ ಗೆಳೆತನದಲ್ಲಿ ಇಂದ್ರಿಯ ತೃಪ್ತಿಯಾಗದಿದ್ದರೂ ವಿವಾಹ ಸಂಬಂಧವು ಮಾತ್ರ ಮುರಿಯುವದಿಲ್ಲ. ಶ್ರೇಷ್ಠ, ಕನಿಷ್ಠ ಪ್ರಶ್ನೆ ಇದರಲ್ಲಿ ಬರುವದಿಲ್ಲ. ಒಬ್ಬರಿಗೆ ಯಾವದು ಕಾಯಿದೆಬದ್ಧವಾಗ

ಗಾಂಧೀ ಸ್ಮಾರಕ ನಿಧಿ

ಪ್ರಶ್ನೆಗಳನ್ನು ಕೇಳಲಾಗಿದೆ.

"೧ ಗಾಂಧೀಸ್ಮಾರಕನಿಧಿಯ ಬಗ್ಗೆ ಹರಿಜನ ಪತ್ರಿಕೆಗಳು ಬಿಟ್ಟು ಬಿನ್ನಹ ಮುಂತಾಗಿ ಯಾವುದನ್ನೂ ಪ್ರಕಟಿಸಲಿಲ್ಲವೇಕೆ? ಏನೋ ಜಾತಿ, ಪ್ಯಾರೇಲಾಲಜಿ, ಕಾಕಾ ಕಾಲೇಲಕರರು ನೀವು ಮತ್ತು ಇತರರು ಗಾಂಧಿಯವರ ಹಳೆಯ ಗೆಳೆಯರಿದ್ದು ಈ ನಿಧಿ ಸಂಗ್ರಹಿಸುವುದರ ಪರವಾಗಿ ಯಾವ ವಿಶಂತಿಯನ್ನೂ ಮಾಡಿಕೊಂಡಿಲ್ಲ. ಇದೇನು? ನಿಮ್ಮ ಮೌನಕ್ಕೇನಾದರೂ ಕಾರಣವಿದೆಯೇ?

"೨. ಈ ಸಂಗ್ರಹಕಾರ್ಯಕ್ಕೆ ನಡೆಸಿದ ಪ್ರಯತ್ನ ಮತ್ತು ಅದಕ್ಕೆ ಬಂದ ಜನರ ನೆರವು ಬಹಳ ಸ್ವಲ್ಪವೆಂಬುದನ್ನು ನೀವು ಒಪ್ಪುವಿರಾ? ಔದಾರ್ಯಕ್ಕೆ ಹೆಸರಾದ ಮುಂಬಯಿ ಈ ವರೆಗೆ ಒಂದು ಲಕ್ಷ ಸಹ ಕೊಟ್ಟಿಲ್ಲ. ಈಗಿಗಿಂತ ರೂಪಾಯಿಯ ಬೆಲೆ ನಾಲ್ಕು ಪಟ್ಟಿದ್ದ ಕಾಲದಲ್ಲಿ ಚಿಕ್ಕ ಪುಟ್ಟ ಕೆಲಸಕ್ಕಾದರೂ ಇದಕ್ಕಿಂತ ಹೆಚ್ಚು ಕೊಡುತ್ತಿತ್ತೆಂಬುದು ತಿಳಿದ ವಿಷಯ. ಹೀಗೇಕಾಯಿತು?

"೩. ಸ್ವಯಂ ಪ್ರವೃತ್ತರಾಗಿ ಜನರು ಕೊಡದಿರುವಾಗ ಈ ನಿಧಿ ಎತ್ತಲು ಸಹಾಯ ಮಾಡಲು ಕಾಯದೆಯನ್ನೇಕೆ ಮಾಡಬಾರದು?"

ಉತ್ತರಗಳು

ಇಂಥ ಸಂದೇಹ ಹುಟ್ಟಿದ್ದು ನನಗೂ ಪ್ರಶ್ನೆ ಕರ್ತ ಹೆಸರಿಸಿದ ನನ್ನ ಸಹೋದ್ಯೋಗಿಗಳಿಗೂ ಆಶ್ಚರ್ಯವನ್ನುಂಟುಮಾಡಿದೆ. ಆದರೆ ಅದು ಹುಟ್ಟಿದ್ದು ನಿಜವಾದ ಮೇಲೆ, ಇದೇ ಮೇರೆಗೆ ಇನ್ನೂ ಅನೇಕರಿಗೆ ಈ ಸಂದೇಹವಿರಬಹುದಾದುದರಿಂದ, ಇಂಥ ಸಂದೇಹಕ್ಕೆ ಎಳ್ಳಷ್ಟೂ ಎಡೆಯಿಲ್ಲವೆಂದು ಈಗಿಂದೀಗ ನಾನು ಸ್ಪಷ್ಟಪಡಿಸುತ್ತೇನೆ. ನಿಧಿ ಗಾಂಧಿಯವರ ರಚನಾತ್ಮಕ ಕಾರ್ಯಕ್ರಮಕ್ಕೆಂದು ನಿಶ್ಚಯಿಸಲಾಗಿದೆ. ಅದಕ್ಕಾಗಿಯೇ ನಮ್ಮ ವೈಯಕ್ತಿಕ ಜೀವನವನ್ನು ಮುಡಿಪಿಡಲಾಗಿದೆ. ಅವರ ನ್ಯಾಯವಾದ ಬಳಕೆಯಲ್ಲಿ ಹೇಗೋ ಹಾಗೇ ಸಂಗ್ರಹ ಕಾರ್ಯದಲ್ಲೂ ನಾವು ತೀವ್ರಾಸಕ್ತಿಯುಳ್ಳವರಾಗಿದ್ದೇವೆ. ನಮ್ಮ ವೈಯಕ್ತಿಕ ಹಿತಕ್ಕಾಗಿ, ನಾವು ಸಾಧಿಸಲು ಪಣ ತೊಟ್ಟ ಗುರಿಗಳಿಗಾಗಿ ನಿಧಿಸಂಗ್ರಹವು ಸಂಪೂರ್ಣ ಜಯಪ್ರದವಾಗಬೇಕೆನ್ನುತ್ತೇವೆ. ನಿಧಿಗಾಗಿ ಬಿನ್ನಹ ಮಾಡಿಕೊಂಡವರೂ ನಿಧಿ ಸಂಗ್ರಾಹಕರೂ ನಮ್ಮ ವಿಶ್ವಾಸ್ಯರಾದ ನೇತ್ಯಗಳೂ ಹಿರಿಯ ಸಹೋದ್ಯೋಗಿಗಳೂ ಆಗಿದ್ದಾರೆ. ಅವರ ಕಾರ್ಯದರ್ಶಿಗಳು ರಚನಾತ್ಮಕ ಕಾರ್ಯಪರ ಸವಸ್ಯರಿದ್ದಾರೆ. ನಮ್ಮಿಂದ ಅವರ ವಿನಂತಿಗೆ ಯಾವ ಬೆಂಬಲವೂ ಬೇಕಾಗಿಲ್ಲ. ಏಕೆಂದರೆ, ನಾವು ಎಂದಿನಿಂದಲೂ ಸಾರ್ವಜನಿಕರ ದೃಷ್ಟಿಗೆ ಹೆಚ್ಚಾಗಿ ಬೀಳದಂತೆ ಕೆಲಸ ಮಾಡುತ್ತ ಬಂದವರು. ಮತ್ತು ನಮ್ಮ ನಮ್ಮ ಪಾಲಿಗೆ ಬಂದ ಕರ್ತವ್ಯಗಳನ್ನು ನಿರ್ವಹಿಸುವುದರಲ್ಲೇ ನಾವು ಮಗ್ನರಾಗಿದ್ದೇವೆ.

ಇದರ ಮೇಲೆ ಅಂಥ ಬಿನ್ನಹಗಳನ್ನು ಸಾಮಾನ್ಯವಾಗಿ ಬೇರೆ ಬೇರೆ ವೃತ್ತಪತ್ರಿಕೆಗಳಿಗೆ ಕಳಿಸಲಾಗುವುದು ಮತ್ತು ಅವನ್ನು ದಿನ ಪತ್ರಿಕೆಗಳು ಹರಿಜನಕ್ಕಿಂತ ಎಷ್ಟೋ ಮುಂಚಿತವಾಗಿ ಭಾರತದಲ್ಲೆಲ್ಲ ಪ್ರಕಟಿಸಿಬಿಡುತ್ತವೆ. ಹರಿಜನದಲ್ಲಾದರೆ ಅವು ಬಹಳ ತಡವಾಗಿ ಪ್ರಕಟವಾಗಬೇಕಾಗುತ್ತದೆ. ಅವು ಎಲ್ಲೆಲ್ಲೂ ಪ್ರಕಟವಾದ ಬಳಿಕ ಪುನಃ ಅವನ್ನು ಪ್ರಕಟಿಸುವುದು ಅನವಶ್ಯಕ.

ಔದಾರ್ಯದಿಂದ, ದೊಡ್ಡ ಪರಿಮಾಣದಿಂದ ಜನರು ನಿಧಿಗೆ ಹಣಕೊಡಲಿ ಎಂಬುದೇ ನಮ್ಮ ಇಷ್ಟ ಎಂಬುದನ್ನು ಎಲ್ಲರೂ ಸ್ಪಷ್ಟವಾಗಿ ತಿಳಿದುಕೊಳ್ಳಲಿ.

೨. ನಿಧಿಸಂಗ್ರಹಕಾರ್ಯ ಮತ್ತು ಅದಕ್ಕೆ ಬಂದ ನೆರವು ಬಹಳ ಸ್ವಲ್ಪವೆಂಬುದು ಸತ್ಯಕ್ಕಿಂತ ಸಣ್ಣದಾದ ಮಾತು. ಅದರ ಕಾರಣವನ್ನು ಸರಿಯಾಗಿ ನಿರ್ಧರಿಸಿಹೇಳುವದು ನನಗೆ ಕಠಿನವೆಸುತ್ತದೆ. ತನಗೆ ಕೊಡಲು ಏಕೆ ಮನಸ್ಸು ಬರುವುದಿಲ್ಲ ಎಂಬುದನ್ನು ಹೇಳುವುದು ಇಷ್ಟರೊಳಗೆ ನಿಧಿಗಾಗಿ ಹಣಕೊಡದಿರುವ ಪ್ರತಿಯೊಬ್ಬನ ಪಾಲಿನ ಕರ್ತವ್ಯ.

೩. ಸಂಗ್ರಹವಾದ ಹಣಎಷ್ಟೇ ಸ್ವಲ್ಪನಿದ್ದರೂ ಕಾಯದೆಯಿಂದ ಏನನ್ನೂ ಮಾಡಕೂಡದು ಹಾಗೆ ಮಾಡಿದರೆ ಅದು ಗಾಂಧೀಜಿಯ ಸ್ಮಾರಕಕ್ಕೆ ಅವಮಾನ ಮಾಡಿದಂತೆಯೇ ಸೈ. ಜನರಿಗೆ ಕೊಡುವ ಇಷ್ಟವಿಲ್ಲದಿದ್ದರೆ, ಒತ್ತಾಯದಿಂದ ಅವರು ಕೊಡುವಂತೆ ಮಾಡುವುದಕ್ಕಿಂತ ಒಂದು ಕಾಸನ್ನೂ ಅವರು ಕೊಡದಿರುವುದೇ ಲೇಸು. ಈ ಕಾರ್ಯಕ್ಕಾಗಿ ಸರಕಾರೀ ಅಧಿಕಾರಿಗಳನ್ನು ನಿಯಮಿಸಬಾರದಾಗಿತ್ತೆಂದು ನನ್ನ ಮತ. ಜನರಿಗೆ ದಾನಪರರಾಗಹಚ್ಚಲು ಒಂದು ಕಾಯದೆಯನ್ನು ಅಗಲೇ ರಚಿಸಲಾಗಿದೆ. ಇದು ಕೊಡುವವನಿಗಾಗಲಿ, ಕೊಳ್ಳುವವನಿಗಾಗಲಿ ಯೋಗ್ಯವೆನಿಸದು, ಅದರಲ್ಲೂ ನಮ್ಮ ತಂದೆಯೆಂದು ನಾವು ಸ್ವೀಕರಿಸಿದ ಒಬ್ಬನಿಗಂತೂ ಇದು ಸ್ವೀಕಾರಯೋಗ್ಯವೇ ಅಲ್ಲ.

ಭರ್ತೃಹರಿ ಹೇಳಿದ್ದಾನೆ:

"ದಾನಂ, ಭೋಗೋನಾಶ,ಸ್ತಿಸ್ರೋಗತಯೋ ಭವಂತಿ ವಿತ್ತಸ್ಯ, ಯೊನ್ನದದಾತಿ ನ ಭುಂಕ್ತೇ ತಸ್ಯ ತೃತೀಯಾ ಗತಿರ್ಭವತಿ. ಹಣಕ್ಕೆ ಮೂರು ಗತಿಗಳು: ದಾನ, ಭೋಗ, ಮತ್ತು ನಾಶ. ಅನ್ಯರಿಗೆ ಕೊಡದೆ, ತಾನೂ ತಿನ್ನದೆ ಇರುವವನ ಹಣ ನಾಶವನ್ನು ಹೊಂದುತ್ತದೆ." ಇತ್ತೀಚೆಗೆ ನಾವು ಈ ಮಾತಿನ ಸತ್ಯವನ್ನು ಅನೇಕಸಲ ಕಂಡಿದ್ದೇವೆ. ಒಂದು ಭಾರತೀಯ ಗಾದೆ "ಸೆಟ್ಟಿ ಕಾಸು ಕದ್ದರೆ ದೇವರು ಅವನ ರೂಪಾಯಿಗಳನ್ನು ಕಳುತ್ತಾನೆ" ಎಂದಿದೆ ಮತ್ತೊಬ್ಬ ಕುತಲಮುನಿ, "ಕೊಟ್ಟಿದ್ದು ತನಗೆ ಬಚ್ಚಿಟ್ಟದ್ದು ಪರರಿಗೆ, ಬಳಸಿದ್ದು ಬರಿಯ ವೆಚ್ಚಕ್ಕೆ" ಎಂದಿದ್ದಾನೆ.

ಮುಂಬಯಿ   ಕಿ. ಘ. ಮಶ್ರೂವಾಲಾ.
೨೯—೧೧—೪೮.

ಮ. ಗಾಂಧಿ ಕೊಲೆಯ ಖಟ್ಲೆ
ಸರಕಾರಿ ವಕೀಲರ ವಾದ

ಮಹಾತ್ಮಾ ಗಾಂಧಿ ಕೊಲೆಯ ಖಟ್ಲೆಯ ವಿಚಾರಣೆಯಲ್ಲಿ ತಾ. ೩ ರಂದು ಸರಕಾರಿ ವಕೀಲರಾದ ಶ್ರೀ ದಫ್ತರಿಯವರ ತಮ್ಮ ಪ್ರತಿಪಾದನೆಯನ್ನು ಮುಂದೆಸಾಗಿಸಿದರು. ಅದರ ಸಾರ ಕೆಳಗಿದೆ.

ಸಾವರಕರರ ಭೆಟ್ಟಿ

ಸಿನೆಮಾ ತಾರೆಯಾದ ಮಿಸ್ ಬಿಂದಾ (ಶಾಂತಾ ಮೋದಕ) ಅವಳು ತನ್ನ ಮೋಟರಿನಲ್ಲಿ ನಥುರಾಮ, ಆಪಟೆ ಇವರಿಬ್ಬರನ್ನೂ ಕೂಡಿಸಿಕೊಂಡು ಶಿವಾಜಿ ಪಾರ್ಕಿನಲ್ಲಿ ತಾನು ಅವರನ್ನು ಇಳಿಸಿದ್ದಾಗಿಯೂ ಅವರ ಸಂಭಾಷಣೆಯಿಂದ ಅವರು ಸಾವರಕರರ ಸದನಕ್ಕೆ ಹೋಗಲಿ ಎದರೆಂದು ತಿಳಿದುಕೊಂಡದ್ದಾಗಿಯೂ ಹೇಳಿರುವಳು. ನಥುರಾಮ, ಆಪಟೆ ಇದನ್ನು ಅಲ್ಲಗಳೆಯುವದಿಲ್ಲವೆಂದಬಳಿಕ ಅವರು ಸಾವರಕರರನ್ನು ಭೆಟ್ಟಿಯಾಗಿದ್ದರೆಂಬುದು ಸಿದ್ಧವಾಗುವದು.

ದೀಕ್ಷಿತ ಮಹಾರಾಜರ ಸಂಬಂಧ

ಜಾನೇವರಿ ೧೫ಕ್ಕೆ ಆಪಟೆ ಹಾಗು ಗೋಡಸೆ ಇವರು ದೀಕ್ಷಿತ ಮಹಾರಾಜರನ್ನು ಕಂಡು ತಮ್ಮ ಬಳಿಯಿದ್ದ ಚೀಲದೊಳಗಿನ ಸ್ಫೋಟಕಗಳನ್ನು ದೀಕ್ಷಿತರಿಗೆ ತೋರಿಸಿದರೆಂದು ಬಡಗೆ ಹೇಳಿರುವನು. ದೀಕ್ಷಿತರೂ ಇದನ್ನು ಒಪ್ಪಿರುವರಲ್ಲದೆ ಕೊನೆಗೆ ಒಂದು ಪಿಸ್ತೂಲನ್ನು ಕೇಳಿದರೆಂದೂ ಹೇಳಿರುವರು. ಎಂದ ಮೇಲೆ ಬಡಗೆಯು ಈ ಬಗ್ಗೆ ಹೇಳಿದ್ದು ನಿಜವಾಗಿದೆ ಎಂದೇ ವ್ಯಕ್ತವಾಗುವದು. ದೀಕ್ಷಿತರು ಪೋಲೀಸರ ಒತ್ತಾಯಕ್ಕೆ ಸಾಕ್ಷಿ ನುಡಿದಿರುವರೆಂದು ಆರೋಪಿಗಳು ಹೇಳಿದ್ದರಲ್ಲಿ ಹುರುಳಿಲ್ಲ. ಯಾಕಂದರೆ ಶಸ್ತ್ರಾಸ್ತ್ರ ಮದ್ದುಗುಂಡುಗಳನ್ನು ಸಂಗ್ರಹಿಸಿ ನಾವು ಹಿಂದುಗಳಿಗೆ ಪೂರೈಸುತ್ತಿದ್ದುದು ನಿಜವೆಂದು ಅವರೇ ಒಪ್ಪಿದ್ದಾರೆ.

ಬಿತಪ್ಪನ ಸಾಕ್ಷಿ

ಇನ್ನು ಬಿತಪ್ಪ ಕೋಟಿಯ್ಯ ಎಂಬ ಟ್ಯಾಕ್ಸಿ ಡ್ರಾಯವ್ಹರನ ವಿಚಾರ. ಅವನು ತನ್ನ ಗಾಡಿಯಲ್ಲಿ, ಗೋಡಸೆ, ಆಪಟೆ, ಬಡಗೆ ಇವರನ್ನು ಕರೆದುಕೊಂಡು ಹೋಗಿದ್ದಾಗಿ ಹೇಳಿದ್ದಾನೆ. ಯಾವ ಸ್ಥಳದ ನಂತರ ಯಾವ ಸ್ಥಳಕ್ಕೆ ಹೋದರೆಂಬ ಬಗ್ಗೆ ಇವನ ಮತ್ತು ಬಡಗೆನ ಹೇಳಿಕೆಯಲ್ಲಿ ವ್ಯತ್ಯಾಸ ತೋರಿದರೂ ಭೆಟ್ಟಿ ಕೊಟ್ಟ ಸ್ಥಳಗಳು ಒಂದೇ ಇರುವವು. ಸಾವರಕರರ ಸದನ ಒಂದನ್ನು ಬಿಟ್ಟು ಉಳಿದೆಲ್ಲ ಸ್ಥಳಗಳಿಗೂ ಹೋಗಿರುವದಾಗಿ ಆಪಟೆಯು ಒಪ್ಪಿದ್ದಾನೆ. ಅದ್ದರಿಂದ ಬಿತಪ್ಪನ ಸಾಕ್ಷಿಯನ್ನು ನ್ಯಾಯಾಲಯವು ಒಪ್ಪಲೇಬೇಕು.

ದಾದಾ ಮಹಾರಾಜರ ಸಾಕ್ಷಿ

ದಾದಾ ಮಹಾರಾಜರು ಗೋಡಸೆ ಮತ್ತು ಆಪಟೆ ಇವರೊಡನೆ ಸಂಭಾಷಣೆ ನಡೆಸಿದ್ದನ್ನು ನ್ಯಾಯಾಲಯವು ಒಪ್ಪಿದರೆ ಆಗ ಅವರಿಬ್ಬರ ಮನಸ್ಸಿನಲ್ಲಿದ್ದದು ಶಾಂತಿಯುತ ಮತಪ್ರದರ್ಶನವಲ್ಲವೆಂದೇ ಒಪ್ಪಿಕೊಳ್ಳಬೇಕಾಗುವದು. ದಾದಾ ಮಹಾರಾಜರು ಪೋಲೀಸರ ಒತ್ತಾಯಕ್ಕೂ ಸಾಕ್ಷಿ ಹೇಳದಿದ್ದರೆ ತಾವೂ ಈ ಖಟ್ಲೆಯಲ್ಲಿ ಸಿಗಬಹುದೆಂಬ ಅಂಜಿಕೆಯಿಂದಲೂ ಸಾಕ್ಷಿ ನುಡಿದಿರುವರೆಂದು ಆರೋಪಿಸಲಾಗಿದೆ. ದಾದಾ ಮಹಾರಾಜರಂಥವರು ಅಂಜುವವರೂ ಅಲ್ಲ, ಸುಳ್ಳು ಹೇಳುವವರೂ ಅಲ್ಲ. ಅವರು ಸುಮ್ಮ ಸುಮ್ಮನೆ ಬಡಗೆನನ್ನು ಇದರಲ್ಲಿ ಸೇರಿಸುತ್ತಿದ್ದಿಲ್ಲ.

ಬಿರ್ಲಾಭವನದ ಸಾಕ್ಷಿ

ಇನ್ನು ಬಿರ್ಲಾಭವನದ ಸಾಕ್ಷಿಗಳು. ಟ್ಯಾಕ್ಸಿ ಡ್ರಾಯವ್ಹರನಾದ ಸುರಜಿತಸಿಂಗನು ತಾ ೨೦ ರಂದು ಸಂಜೆ ೪–೧೫ಕ್ಕೆ ತನ್ನ ಗಾಡಿಯಲ್ಲಿ ನಾಲ್ವರನ್ನು ಬಿರ್ಲಾಭವನಕ್ಕೆ ಕರೆದೊಯ್ದುದಾಗಿ ಹೇಳಿರುವನು. ಮತ್ತು ಬಡಗೆ, ಶಂಕರ, ಆಪಟೆ, ಗೋಪಾಲ ಗೋಡಸೆ ಇವರನ್ನು ಗುರುತಿಸಿರುವನು. ಒಂದು ನಿರ್ದಿಷ್ಟ ಸ್ಥಳದಲ್ಲಿಯೇ ಗಾಡಿಯನ್ನು ನಿಲ್ಲಿಸಲು ಆಪಟೆಯು ಹೇಳಿದನಂತೆ. ಇದರಿಂದ ಆಪಟೆಯು ಬಿರ್ಲಾಭವನಕ್ಕೆ ಈ ಮೊದಲು ಬಂದಿರಬೇಕೆಂದು ಸಿದ್ಧವಾಗುತ್ತದೆ. ಬಾಂಬ ಸ್ಫೋಟದ ನಂತರ ಆಪಟೆಯ ಬದಲು ನಥುರಾಮನು ಬಂದಿದ್ದನೆಂದೂ ಕೂಡಲೆ ಗಾಡಿ ಬಿಡು ಎಂದು ಅವನು ಅವಸರಪಡಿಸಿದನೆಂದೂ ಸುರಜಿತಸಿಂಗನು ಹೇಳಿದ್ದಾನೆ. ಇನ್ನು ಸುಲೋಚನಾದೇವಿಯು, ಮರುಸವಾಲಿನಲ್ಲಿ ಬಾಂಬು ಹೇಗಿತ್ತೆಂದು ಕೇಳಿದಾಗ ಅವಳು ಇದ್ದ ಸಂಗತಿಯನ್ನು ಹೇಳಿರುವಳು.

ಸರಕಾರಿ ವಕೀಲರು ತಾ. ೪ ರಂದು ತಮ್ಮ ವಾದವನ್ನು ಮುಂಬರಿಸುತ್ತ ಹೀಗೆ ನಿರೂಪಿಸಿದರು.

ಬಿರ್ಲಾಭವನದ ಕಾವಲುಗಾರನಾದ ಭೂರಸಿಂಗನು ಈ ನಾಲ್ವರನ್ನೂ ಗುರುತಿಸಿ ತಾ. ೨೦ಕ್ಕೆ ಬಾಂಬು ಸ್ಫೋಟವಾಗುವ ಮೊದಲು ಇವರು ಬಿರ್ಲಾಭವನಕ್ಕೆ ಬಂದಿದ್ದನ್ನು ತಾನು ನೋಡಿರುವದಾಗಿ ಹೇಳಿರುವನು. ಮದನಲಾಲನ ಬಳಿ ಒಂದು ಕೈಬಾಂಬು ಮತ್ತು ಕೋಟು ಸಿಕ್ಕಿರುವದಾಗಿ ಕಾವಲುಗಾರನು ಹೇಳಿದ್ದಾನೆ.

ಗೋಪಾಲ ಗೋಡಸೆಯು ಗೋಡಬೋಲೆಗೆ ತಾ ೨೨–೨೩ ರ ಸುಮಾರಿಗೆ ಪಿಸ್ತೂಲು ಕೊಟ್ಟನೆಂದೂ ಅದನ್ನು ತಾ ೩೦ ರ ವರೆಗೆ ಇಟ್ಟುಕೊಂಡು ಗೋಡಬೋಲೆಯು ಕಾಳೆಗೆ ಒಪ್ಪಿಸಿದನೆಂದೂ ಅವರ ಹೇಳಿಕೆಯಿಂದಲೇ ಗೊತ್ತಾಗುತ್ತದೆ.

ಆಪಟೆ, ಗೋಡಸೆ ಇವರ ಬಟ್ಟೆ ಒಗೆದ ಮರೀನಾ ಹೋಟೆಲಿನ ಕಾಳಿರಾಮನೆಂಬವನು ತಾ ೨೧ ರಂದು ಒಗೆದ ಬಟ್ಟೆಗಳನ್ನು ಅವರು ಬಿಟ್ಟುಹೋದರೆಂದು ಹೇಳಿದ್ದಾನೆ. ಇದರಿಂದ ಅವರು ಅಂದು ಬಹಳ ಗಡಿಬಿಡಿಯಲ್ಲಿದ್ದರೆಂದು ವ್ಯಕ್ತವಾಗುತ್ತದೆ.

ಒಳಸಂಚಿನ ಇತರ ಪುರಾವೆ

ಸರಕಾರಿ ವಕೀಲರು ತಾ ೬ ರಂದು ತಮ್ಮ ಪಕ್ಷ ಮಂಡನವನ್ನು ಮಾಡುತ್ತ ಆರೋಪಿಗಳು ಒಳಸಂಚು ನಡೆಸಿದ್ದರೆಂಬುದಕ್ಕೆ ಬೇರೆ ಸಾಕಷ್ಟು ಪುರಾವೆಗಳು ಇರುವವೆಂದು ಹೇಳಿದರು.

ನಥುರಾಮ, ಆಪಟೆ, ಮದನಲಾಲ, ಕರಕರೆ, ಶಂಕರ, ಗೋಪಾಲ ಗೋಡಸೆ ಈ ಆರು ಜನ ಆರೋಪಿಗಳಲ್ಲಿ ೫ ಜನರು ತಾವು ತಾ. ೨೦ಕ್ಕೆ ದಿಲ್ಲಿಯಲ್ಲಿ ಪ್ರಾರ್ಥನಾ ಸಮಯಕ್ಕೆ ಬಿರ್ಲಾಭವನದಲ್ಲಿ ಇದ್ದುದಾಗಿ ಒಪ್ಪಿಕೊಂಡಿರುವರು. ಅದ್ದರಿಂದ ಪೂರ್ವ ಯೋಜನೆಗನುಸರಿಸಿ ಈ ೬ ಜನರೂ ಅಲ್ಲಿ ಬಂದಿದ್ದರೆಂದು ಹೇಳಲು ಅಡ್ಡಿಯಿಲ್ಲ. ಅಲ್ಲದೆ ಜಾನೇವರಿ ತಾ ೨೦ ಕ್ಕೆ ಮದನಲಾಲನ ಹತ್ತಿರ ಒಂದು ಕೈಬಾಂಬೂ ಪ್ರಾರ್ಥನಾ ಪಟಾಂಗಣದಲ್ಲಿದ್ದ ಅವನ ಸಂಗಾತಿಯ ಬಳಿ ೩ ಕೈಬಾಂಬುಗಳೂ ಸಿಕ್ಕಿರುವವು.

ದೀಕ್ಷಿತ ಮಹಾರಾಜ ಮತ್ತು ದಾದಾ ಮಹಾರಾಜ ಮತ್ತೆ ಕೆಲ ಆರೋಪಿಗಳು ತಮ್ಮ ಹೇಳಿಕೆಗಳಲ್ಲಿ ತಾವು ಶಸ್ತ್ರಾಸ್ತ್ರಗಳ ವ್ಯವಹಾರ ನಡೆಸಿದ್ದು ನಿಜವೆಂದು ಒಪ್ಪಿಕೊಂಡಿರುವರು. ಇದರಿಂದ ಅವರಲ್ಲಿ ನಿಕಟ ಸಂಬಂಧವಿದ್ದುದು ಸಿದ್ಧವಾಗುತ್ತದೆ. ಗೋಪಾಳ ಗೋಡಸೆ ರಜೆಗಾಗಿ ಅರ್ಜಿ ಮಾಡಿದ್ದು, ನಥುರಾಮನು ತನ್ನ ಪಾಲಿಸಿಗಳನ್ನು ಎರಡನೆಯವರ ಹೆಸರಿಗೆ ವರ್ಗಾಯಿಸಿದ್ದು, ದೀಕ್ಷಿತರ ಹಾಗೂ ದಾದಾ ಮಹಾರಾಜರ ಬಳಿ ಪಿಸ್ತೂಲು ಕೇಳಿದ್ದು, ಜಾನೇವರಿ ತಾ ೧೬ ಕ್ಕೆ ಬಡಗೆ ಇವನು ಹೆಚ್ಚಿನ ಶಸ್ತ್ರಾಸ್ತ್ರ ಹಾಗೂ ಸ್ಫೋಟಕಗಳನ್ನು ಸಂಚಿದ್ದು ಇವನ್ನೆಲ್ಲ ಒಟ್ಟಾರೆ ನೋಡಿದರೆ ಒಳಸಂಚು ನಡೆದಿತ್ತೆಂಬುದು ಒಡೆದು ಕಾಣುತ್ತದೆ.

ಪ್ರೊ. ಜೈನರ ಹೇಳಿಕೆ

ಶ್ರೀ ದಫ್ತರಿಯವರು ಪ್ರೊ. ಜೈನರ ಹೇಳಿಕೆಯತ್ತ ಹೊರಳಿ ಹೀಗೆ ಹೇಳಿದರು.

ಮದನಲಾಲನು ಪಾಕಿಸ್ತಾನದಲ್ಲಿ ಬಹಳ ಕಷ್ಟಕ್ಕೀಡಾಗಿ ವಿಕಾರ ವಶನಾಗಿದ್ದರಿಂದ ಅವನು ತಮ್ಮ ಕಾರ್ಯದಲ್ಲಿ ಉಪಯೋಗ ಬೀಳಬಹುದೆಂದು ಉಳಿದವರು ಅವನನ್ನು ತಮ್ಮ ಸಂಚಿನಲ್ಲಿ ಕೂಡಿಸಿಕೊಂಡಿರಬೇಕೆಂದೂ ಅವನು ತಾನು ಪಾರಾಗುವ ಉದ್ದೇಶದಿಂದ ಮೊದಲೇ ಪ್ರೊ. ಜೈನರಲ್ಲಿ ಎಲ್ಲವನ್ನೂ ನಿವೇದಿಸಿರಬೇಕೆಂದೂ ಹೇಳಲು ಅಡ್ಡಿಯಿಲ್ಲ. ಈ ಸಂಗತಿಯನ್ನೆಲ್ಲ ನಿವೇದಿಸಿದ ಪ್ರೊ. ಜೈನರು ಅಂಜಿ ಕಟ್ಟುಕಥೆ ಮಾಡಿ ಹೇಳಿರುವರೆಂಬುದಕ್ಕೆ ಅರ್ಥವಿಲ್ಲ. ಪ್ರೊ ಜೈನರು ಆದರಣೀಯ ಗೃಹಸ್ಥರು. ಮದ್ದುಗುಂಡುಗಳ ವ್ಯವಹಾರದಲ್ಲೇನು ಅವರು ಇರುವದಿಲ್ಲ. ಅಂದಮೇಲೆ ಖಟ್ಲೆಯಲ್ಲಿ ಸಿಕ್ಕುಬೀಳುವ ಅಂಜಿಕೆ ಅವರಿಗೇಕೆ ಇರಬೇಕು? ಆದ್ದರಿಂದ ಪ್ರೊ. ಜೈನರ ಹೇಳಿಕೆಯನ್ನು ನ್ಯಾಯಾಲಯವು ಧಾರಾಳವಾಗಿ ನಂಬಬಹುದು.

ಮುರಾರಜಿ ದೇಸಾಯಿ, ಅಂಗದಸಿಂಗ, ಪ್ರೊ. ಜೈನ ಇವರ ಸಾಕ್ಷಿಗಳನ್ನು ನೋಡಲಾಗಿ ಮಹಾತ್ಮರನ್ನು ಕೊಲ್ಲುವ ಒಳಸಂಚು, ಮದನಲಾಲನು ಪ್ರೊ. ಜೈನರೊಡನೆ ಸಂಭಾಷಣೆ ನಡೆಸುವ ಮೊದಲೇ ನಡೆದಿತ್ತೆಂಬುದು ತಿಳಿದುಬರುತ್ತದೆ. ಇದಲ್ಲದೆ, ಸುಂದರಲಾಲ, ಹರಿಕಿಶನ, ಜಾನ, ಜ್ಯೋತಿ ಇವರ ಸಾಕ್ಷಿಗಳಿಂದ ಆಪಟೆ, ಗೋಡಸೆ, ಕರಕರೆ ಇವರು ಜಾನೇವರಿ ತಾ ೨೯ ಕ್ಕೆ, ಮತ್ತು ೩೦ಕ್ಕೆ ದಿಲ್ಲಿಯಲ್ಲಿ ಇದ್ದುದು ಸಿದ್ಧವಾಗುತ್ತದೆ ಎಂದು ಮೊದಲಾಗಿ ಪ್ರತಿಪಾದಿಸಿದರು. ಅಷ್ಟಕ್ಕೆ ವೇಳೆಯಾಗಿದ್ದರಿಂದ ವಿಚಾರಣೆಯು ಮರುದಿನಕ್ಕೆ ಮುಂಬರಿದಿತು.

ತಾ. ೭ ರಂದು ದಫ್ತರಿಯವರು ಆರೋಪಿಗಳ ಹೇಳಿಕೆಗೆ ಪ್ರತ್ಯುತ್ತರ ಕೊಡುತ್ತ, ಹೀಗೆ ಹೇಳಿದರು.

ನಥುರಾಮ ಗೋಡಸೆಯು ಮಹಾತ್ಮರ ಕೊಲೆಯ ಹೊಣೆಯನ್ನು ತಾನೇ ಹೊತ್ತು ಉಳಿದವರನ್ನೆಲ್ಲ ಪಾರು ಮಾಡುವ ಉದ್ದೇಶದಿಂದ ಒಳಸಂಚಿಗೆ ಸಂಬಂಧಿಸಿದ ಎಲ್ಲ ಘಟನೆಗಳನ್ನು ನಿರಾಕರಿಸುವ ಧೋರಣೆ ವಹಿಸಿದುದು ಸ್ವಯಂಸ್ಪಷ್ಟವಿದೆ.

ಆಪಟೆಯು ಜಾನೇವರಿ ೩೧ ಕ್ಕೆ ತಾನು ದಿಲ್ಲಿಯಲ್ಲಿ ಇರಲೇ ಇಲ್ಲನೆಂದೂ ಅಂದು ಮುಂಬಯಿಯಲ್ಲಿದ್ದು ಓರ್ವ ವಿಶಿಷ್ಟ ಗೃಹಸ್ಥನಿಗೆ ಟೆಲಿಫೋನು ಮಾಡಿದ್ದಾಗಿಯೂ ಮತ್ತೆ ಓರ್ವ ವಕೀಲರ ಸಲಹೆ ವಿಚಾರಿಸಲು ಹೋಗಿದ್ದಾಗಿಯೂ ಹೇಳಿರುವನು. ಇದೆಲ್ಲ ನಿಜವಿದ್ದರೆ ಆಪಟೆಯು ಇವರನ್ನು ಸಾಕ್ಷಿಗೆ ಕರೆಯಬಹುದಿತ್ತು. ಹಾಗೆ ಕರೆದಿಲ್ಲವೆಂದ ಮೇಲೆ ಇದರಲ್ಲಿ ಸತ್ಯಾಂಶ ಎಷ್ಟೆಂಬುದು ತಾನೇ ಒಡೆದು ಕಾಣುವದು. ಇನ್ನು ಕುಮಾರಿ ಮನೋರಮಾ ಸಾಳ್ವಿ ಎಂಬವಳನ್ನು ತಾನು ಜಾನೇವರಿ ೩೧ ಕ್ಕೆ ಮುಂಬಯಿಯಲ್ಲಿ ಕಂಡೆನೆಂದು ಆಪಟೆ ಹೇಳಿರುವನು. ಆದರೆ ಆಕೆ ತಿರುಗಿ ಬಿದ್ದ ಪುರಾವೆ ಹಾಜರ ಮಾಡಲಾಗಿದೆ. ಯಾಕಂದರೆ ಅವಳು ಆಪಟೆಯ ಪರಮ ಸ್ನೇಹಿತಳಿದ್ದಂತೆ ತೋರುತ್ತದೆ. ಇಷ್ಟಕ್ಕೆ ವಿಚಾರಣೆ ಮರುದಿನಕ್ಕೆ ಮುಂಬಯಿರಿತು.

ಬಾಪುಮಂಟಪ

(೯ ನೆಯ ಪುಟದಿಂದ ಬಂದದ್ದು)

ಮಂಡಲದವರು ಯೋಜಿಸಿದ ಗಾಂಧೀ ಸ್ಮಾರಕ ವಸ್ತು ಸಂಗ್ರಹಾಲಯಕ್ಕೆ ಕೊಡಲಾಗುವದು.

ಬಾಪುಮಂಟಪಕ್ಕೆ ಕಳಿಸಲಾಗುವ ಚಿತ್ರಗಳನ್ನೂ ಪುಸ್ತಕಗಳನ್ನೂ ಚನ್ನಾಗಿ, ಜೋಪಾನವಾಗಿ ಹೊದಿಕೆಹಾಕಿ ಕಟ್ಟಿ ರಜಿಸ್ಟರ ಪೋಸ್ಟಿನಿಂದ, ಕಾರ್ಯದರ್ಶಿ, ಸರ್ವೋದಯ ಪ್ರದರ್ಶನೀ, ಗಾಂಧಿ ನಗರ, ಜಯಪುರ, ಈ ವಿಳಾಸಕ್ಕೆ ಕಳಿಸಬೇಕು.

ಕೃಷ್ಣದಾಸ ಗಾಂಧಿ
ಕಾರ್ಯದರ್ಶಿ
ಸರ್ವೋದಯ ಪ್ರದರ್ಶನೀ ಜಯಪುರ

ಮಹಿಳಾ-ಲೋಕ

ಗೊಣಗುವ ಹೆಂಡತಿಯರು

ಶೆಫೀಲ್ಡಿನ ಸಮಾಜಸೇವಾಸಂಘದ ಕಾರ್ಯಕರ್ತಳಾದ ಶ್ರೀಮತಿ ಮೇರಿ ಮೂರಿ ಹೊಸದೊಂದು Boarding School ಬೋರ್ಡಿಂಗ್ ಶಾಲೆಯನ್ನೀಗ ತೆರೆದಿದ್ದಾಳೆ. ಆ ಶಾಲೆ ಹಗಲಿರುಳೂ ರಗಳೆಮಾಡುವ ಹೆಂಡತಿಯರ ಶಿಕ್ಷಣಕ್ಕೆಮೀಸಲಂತೆ! ಐರೋಪ್ಯರಲ್ಲಿ Nagging Cop wives ಗೊಣಗುಟ್ಟುವ ಹೆಂಡತಿಯರೆಂದು ಹೆಚ್ಚಾಗಿರುವರು. ತಮ್ಮ ಅರ್ಹತೆಗೆ ಮೀರಿದ ಅಪೇಕ್ಷೆಗಳನ್ನಿಟ್ಟುಕೊಂಡ ಕ್ಷಣಚಿತ್ತ ಸ್ತ್ರೀಯರು ಹೊಣೆಯುಳ್ಳ ಗಂಡನೊಡನೆ ಹಕ್ಕಿಗಾಗಿ ಗುದ್ದಾಡುವುದು ಬಹಳ ಹೆಚ್ಚಾಗಿದೆ. ಇಂಥವರು ಶ್ರೀಮಂತರ ಸಂಬುದ್ಧಿಯಿಂದ ಎಷ್ಟು ತಂದುಹಾಕಿದರೂ ಸಾಲದೆಂದು ಪತಿಪೀಡಕರೂ ಸದಾಸುಖಿಗಳೂ ಆಗಿರುವರು. ಇಂಥವರ ಬುದ್ಧಿಯನ್ನು ತಿದ್ದುವುದೇ ಈ ಶಾಲೆಯ ಗುರಿ. ಈ ಶಾಲೆಯಲ್ಲಿ ಗೃಹಕೃತ್ಯದ ಮತ್ತು ತಾಯ್ತನದ ಕೆಲಸಗಳನ್ನು ಕಲಿಸಲಾಗುತ್ತದೆ. ಶಿಶುಸಂಗೋಪನ, ಮನೆಗೆಲಸದರೀತಿ, ಚೊಕ್ಕ, ಶಿಸ್ತು, ಕಾಲನಿಯಮ, ಪಾಕವಿಧಾನ, ಬಟ್ಟೆ ಬರೆಗಳ ಸಂರಕ್ಷಣಕ್ರಮ ಮುಂತಾದವನ್ನು ಅಲ್ಲಿ ಈ ಗೊಣಗಿಯರು ಕಲಿತು ತಮ್ಮ ಮತ್ತು ತಮ್ಮ ಗಂಡಂದಿರ ಜೀವನದಲ್ಲಿ ಹರ್ಷವನ್ನು ತರಬಲ್ಲವರಾದಾರೆಂದು ಶ್ರೀಮತಿಯ ಆಶಯ.

ಶಿಶುಸಂಗೋಪನ, ಅಡಿಗೆ, ಮನೆಗೆಲಸ ಇತ್ಯಾದಿಗಳನ್ನು ತಾಯಿಂದಲೇ ನಮ್ಮ ಮಕ್ಕಳು ಖರ್ಚಿಲ್ಲದೆ ಬಾಲ್ಯದಲ್ಲಿ ಮನೆಯಲ್ಲಿದ್ದೇ ಕಲಿಯುವುದು ಎಲ್ಲರಿಗೂ ಗೊತ್ತಿದೆ. ಪಾಶ್ಚಾತ್ಯ ನಾಗರಿಕತೆಯ ಮರುಳುಹಿಡಿದರೆ ಏನಾದೀತೆಂಬುದಕ್ಕೆ ಮೇಲಿನದೊಂದು ಒಳ್ಳೆಯ ಉದಾಹರಣೆ. ಗೃಹಿಣಿ ಮಕ್ಕಳನ್ನು ನರ್ಸರಿ ಶಾಲೆಗಳಿಗೆ ಕಳಿಸಿ ಅವುಗಳಿಗೆ ಶೀಲ, ಸಿರಿ, ಶಿಸ್ತು, ವ್ಯವಸ್ಥೆಗಳನ್ನು ಕಲಿಸಲು ಹಣ ವೆಚ್ಚಮಾಡುವ ಈ ದಂದುಗಾರಿಕೆ, ವಾತ್ಸಲ್ಯಭಾವ ಹೇಯವೇ ಸರಿ. ಹೊಟ್ಟೆಗೇಡಿತನದಂತೆ ಮನೆಗೆಲಸವನ್ನು ಮತ್ತು ಸ್ವಾದ ಪಾಕಕ್ರಮ ಮುಂತಾದವನ್ನು ಕಲಿಯಲು ಕಾಲೇಜು ಅಥವಾ ಶಾಲೆಗೆ ಹೋಗುವರಂಥ ನಾಗರಿಕೆಯರ ನಾಗರಿಕತೆಯಾದರೂ ಹಾಸ್ಯಾಸ್ಪದವಾದುದೇ ಅಲ್ಲವೆ? ವಿಶೇಷಜ್ಞರಾಗಲು ಆ ವಿಷಯಗಳಿಗೆ ಸಂಬಂಧಿಸಿದ ಶಾಸ್ತ್ರಗಳನ್ನು ಶಾಲೆ ಕಾಲೇಜುಗಳಲ್ಲಿ ಓದುವುದರಲ್ಲಿ ಅರ್ಥವಿದೆ. ಹಾಗಿಲ್ಲದೆ ಬಂದವರಿಗೆ ಒಂದು ಲೋಟ ನೀರುಕೊಡುವ ಬಗೆಯನ್ನೂ ಹೊರಗೆ ಹೋಗಿ ಕಲಿತು ಬರಬೇಕೆಂಬಷ್ಟು ಮಕ್ಕಳನ್ನು ಅಜ್ಞಾನಪಂಜರದಲ್ಲಿ ಸಾಕುವ ತಾಯಂದಿರು ನಮ್ಮಲ್ಲಿ ಹುಟ್ಟದಿರಲಿ. ನಮ್ಮ ತಾಯಂದಿರು ಇನ್ನೂ ಆ ದರ್ಜೆಗಿಳಿದಿಲ್ಲದರೂ ಅವರು ತಮಗೆ ಇರುವ ಜ್ಞಾನವನ್ನು ಪರಿಷ್ಕರಿಸಿಕೊಳ್ಳಲು ಪುಸ್ತಕಾದಿಗಳನ್ನು ಓದುವುದು ಅತ್ಯವಶ್ಯಕವೆಂದು ನಾನು ಹೇಳದಿರಲಾರೆ. ಏಕೆಂದರೆ ನಮ್ಮಲ್ಲಿ ಕುಕಲ್ಪನೆಗಳು ಬಹಳವಿವೆ. ಅವನ್ನು ಆರೋಗ್ಯಶಾಸ್ತ್ರದ ಅಭ್ಯಾಸದಿಂದ ಕಿತ್ತೊಗೆಯಬೇಕು.

ಪಟ್ಟಣಿಗರಾದ ಮಧ್ಯಮವರ್ಗದ ಜೀವನಕ್ಕೆ ಹಿಂದು ಕೆಲವೆಡೆ ಮೇಲಿನ ಉದಾಹರಣೆಗೆ ತೆಗೆದುಕೊಳ್ಳಲು ಯೋಗ್ಯರೆನಿಸುತ್ತಿರುವುದು ಅಯೋಗ್ಯವೆಂಬುದನ್ನು ಬುದ್ಧಿಮತಿಯಾದವಳು ತಿಳಿಯದಿರಲಾರಳು; ತಿಳಿದೂ ಇದ್ದಾಳೆ. ಗೃಹಿಣೀಪದವು ವಿಶ್ವವಿದ್ಯಾಲಯದ ಪದವಿಯಷ್ಟೇ ದೊಡ್ಡದೆಂಬುದನ್ನು ಆರೋಗ್ಯಶಾಸ್ತ್ರ, ವೈದ್ಯಕೀಯಜ್ಞಾನ, ಪಾಕಕೌಶಲ ಮತ್ತು ಶಿಶುಸಂಗೋಪನಾದಿ ಗೃಹಕೃತ್ಯದ ಇತರ ಕೆಲಸಗಳನ್ನು ಬಲ್ಲ ಗೃಹಿಣಿ ಅರಿತಿದ್ದಾಳೆ; ಇನ್ನೂ ಹೆಚ್ಚು ಹೆಚ್ಚಾಗಿ ಅರಿತುಕೊಳ್ಳುತ್ತಿದ್ದಾಳೆ. [illegible] ಎಂಬುದನ್ನು ಗೊಣಗುವ ಹೆಂಡತಿಯರು ಯಾರಿದ್ದರೂ ಮೊದಲು ಗಮನಕ್ಕೆ ತಂದುಕೊಳ್ಳಬೇಕು.

—ಹಿರಿಯಕ್ಕ

ಸಂತಾನಸಮೃದ್ಧಿ

ಓಸ್ಲೋದ ಸೂತಿಕಾಗೃಹಗಳ ಯೋಗಕ್ಷೇಮಾಧಿಕಾರಿಗಳ ಅಭಿಪ್ರಾಯದ ಮೇರೆಗೆ ಬಹಳ ಹೆಂಗಸರು ತಮಗಿನ್ನು ಮಕ್ಕಳು ಬೇಡ ಎನ್ನುತ್ತಿದ್ದಾರೆಂದು ತಿಳಿಯುತ್ತದೆ. ಅದಕ್ಕೆ ವಸತಿಸ್ಥಳದ ಸಂಕೋಚ, ಜೀವನದ ಏರುಬೆಲೆ ಇವೇ ಕಾರಣಗಳೆಂದು ಆ ಹೆಂಗಸರು ಹೇಳುತ್ತಾರೆ. ಅವರಲ್ಲಿ ಒಬ್ಬೊಬ್ಬಳಿಗೆ ೫..೬ ಮಕ್ಕಳಿವೆಯಂತೆ! ಅದಕ್ಕೆ ಅವರಿಗೆ ಭಯಾಭ್ಯಾಸ ಹತ್ತಿಬಿಟ್ಟಿದೆ, ಹಣಕಾಸಿನ ಪರಿಸ್ಥಿತಿ ಇನ್ನೂ ಕೆಡಬಹುದೆಂದು. ಏತದ್ವಿರುದ್ಧವಾಗಿ ನ್ಯೂ ಸೌತ್ ವೇಲ್ಸಿನಲ್ಲಿ ೪೦೦೦ ಹೆಂಗಸರು ಮಕ್ಕಳನ್ನು ಕೊಡುವವರಿದ್ದರೆ ಬೇಕು, ಸಾಕಿಕೊಳ್ಳುತ್ತೇವೆ, ನಮಗೆ ಮಕ್ಕಳಿಲ್ಲ ಎನ್ನುತ್ತಿದ್ದಾರಂತೆ!

ಸ್ವಯಂಕೃತ ವಿಧವೆಯರು!

೧೮ ವರ್ಷ ವಯಸ್ಸಿನವಳೊಬ್ಬಳು. ಹೆಸರು ಜಾಕೆಲ್ಯಿನ್ ಪ್ರೈಸರ್. ೪೮ ವರ್ಷ ವಯಸ್ಸಿನವಳಿನ್ನೊಬ್ಬಳು ವಿರೋನಿಕಾ ಇಲಿಯಟ್. ಇವರು ಚಿಕಾಗೋ ಜೈಲಿನಲ್ಲಿ ಪರಸ್ಪರ ಸಂದರ್ಶನ ಪಡೆದರು. ಮೊದಲನೆಯಾಕೆಯ ಗಂಡ ಸಿರಿಲ್ ಅವಳಿಂದ ಕೊಲೆಯಾದಾಗ ೨೪ ವರ್ಷ ವಯಸ್ಸಿನವನಿದ್ದ. ಎರಡನೆಯಾಕೆಯ ಗಂಡ ೫೬ ವರ್ಷದವನಿದ್ದ. ಇಬ್ಬರೂ ಹೆಚ್ಚು ಕುಡಿಯುತ್ತಿದ್ದರೆಂಬುದೇ ಈ ವಿಧವೆಯರ ದೂರು. ಅತೃಪ್ತಿಯಿಂದ ಬರುವ ಈ ದುರಭ್ಯಾಸಕ್ಕೆ ತಮ್ಮ ನಿಕ್ಕದ ಯಾವ ನಡತೆ ಕಾರಣವೆಂದು ಆತ್ಮಶೋಧ ಮಾಡಿಕೊಳ್ಳದ ಇವರು ಗಂಡಸರ [illegible] ಜೀವಹಿಂಸೆಗೇ ಕೈಹಾಕಿ ಸಾಧಿಸಿಕೊಂಡ ಉದಾಹರಣೆ ಸ್ತ್ರೀಯರಿಗೊಂದು ಪಾಠವಾಗಿದೆ. ಸಂಸಾರದಲ್ಲಿ ಗಂಡನಾಗಲಿ ಹೆಂಡತಿಯಾಗಲಿ ಗಾಂಭೀರ್ಯದಿಂದಲ್ಲದ ದೇಹ ಹಿಂಸಾಕ್ರಮವನ್ನು ಕೈಕೊಂಡು ಅಭಿಪ್ರಾಯ ಭೇದದಿಂದ ಪ್ರತೀಕಾರ ಮಾಡಲು ಹೋದರೆ ಲಭಿಸುವ ಸುಖ ಇದೇ ಎಂಬುದು ದಂಪತಿಗಳಿಗೊಂದು ದೃಷ್ಟಾಂತ.

ವಂಚನಾಪ್ರಪಂಚ

ಸದಾ ತಾವು ಕರುಣೆಗೆ ಪಾತ್ರರೆನಿಸಿಕೊಳ್ಳಬೇಕೆಂಬ ಹಂಬಲಿನಿಂದ ಪ್ರಪಂಚದಲ್ಲಿ ಅನೇಕ ತಾಯಂದಿರು ಯಾವಾಗಲೂ ತಮ್ಮ ಅಶಕ್ತತೆ, ಆ ಕಾರಣಕ್ಕಾಗಿ ಉಪಚಾರ ಮತ್ತು ಮರ್ಯಾದೆ ಇವನ್ನು ಗಂಡ ಮತ್ತು ಮಕ್ಕಳಿಂದ ಪಡೆಯಲು ಆಟ ಹೂಡುತ್ತಾರೆ ಎಂದು ಬ್ರಿಟನ್ನಿನ ಅತಿ ದೊಡ್ಡದಾದ ಹೆಂಗಸರು ಮತ್ತು ಮಕ್ಕಳ ಆಸ್ಪತ್ರೆಯ ಮುಖ್ಯ ಸೂಲಗಿತ್ತಿ ಶ್ರೀಮತಿ ಬೇಕರೆಂಬ? ತನ್ನ ಅನುಭವದಿಂದ ಹೇಳುತ್ತಾಳೆ. ಈ ದುರ್ವಿಧಿಯಿಂದ ಕುಟುಂಬದಲ್ಲಿ ವಿಷ ಉಂಟಾಗುವುದಲ್ಲದೆ, ಹೆಣ್ಣುಮಕ್ಕಳಿಗೆ ದುರ್ವಿಧ್ಯ ಕಲಿಸಿದಂತೆಯೂ ಆಗುವುದು ಎಂದು ಅವಳು ಎಚ್ಚರಿಕೆ ಕೊಟ್ಟಿದ್ದಾಳೆ. ಸಾಮಾನ್ಯವಾಗಿ ಪ್ರಸವವೇದನೆಯನ್ನು ಅತಿ ಭಯಂಕರವೆಂದು ಗಂಡ ಮತ್ತು ಮಕ್ಕಳೆದುರು ಹಗಲೆಲ್ಲ ವರ್ಣಿಸಿ ಅವರನ್ನೂ ಕೆಲವೊಮ್ಮೆ ತನ್ನನ್ನೇ ತಾನೂ ಮೋಸ ಹೆದರಿಕೆಗೆ ಗುರಿಪಡಿಸಿಕೊಂಡು ತನ್ನ, ತನ್ನ ಗಂಡ ಮತ್ತು ಮಕ್ಕಳ ನಿತ್ಯ ಜೀವನದಲ್ಲಿ ದುಃಖವನ್ನು ತಂದು ಹಾಕುವ ಸ್ತ್ರೀಪ್ರವೃತ್ತಿಯನ್ನು ತಡೆಯಲು ಯತ್ನಿಸುವುದು ಅತ್ಯವಶ್ಯ ಎಂದು ಅವಳ ಬುದ್ಧಿವಾದ.

ಹಕ್ಕಿನ ಜೊತೆಗೆ ಬಾಧ್ಯತೆ

ಹೆಂಗಸರು ಹಿಂದುಸ್ಥಾನ ಸ್ವತಂತ್ರವಾದುದರಿಂದ ಸಮಾನ ಹಕ್ಕುಗಳು ಬೇಕೆಂದು ಆಗ್ರಹಪಡಿಸುತ್ತಿದ್ದಾರೆ. ಈ ಸ್ವತಂತ್ರ ಹಿಂದುಸ್ಥಾನದಲ್ಲಿ ಅವರಿಗೀಗ ತಮ್ಮ ಯೋಗ್ಯತೆಯೆಷ್ಟೆಂಬುದನ್ನು ಕಾರ್ಯದಲ್ಲಿ ತೋರಿಸುವ ಸಂದರ್ಭ ಒದಗಿದೆ. ಜೀವನದ ಎಲ್ಲ ರಂಗಗಳಲ್ಲೂ ಗಂಡಸರಂತೆಯೇ ಹೊಣೆಗಾರಿಕೆಯಿಂದ ಕೆಲಸ ಮಾಡಬಲ್ಲವರಾದರೆ ಮಾತ್ರ ಅವರಿಗೆ ಗಂಡಸರಿಗೆ ಸಮಾನ ಸ್ಥಾನ ಸಿಗಬಲ್ಲುದು. [illegible] ಕೊಂಡ ನಾವು ಸಮಯ ಬಂದರೆ ಕಷ್ಟಾರ್ಜಿತವಾದ ನಮ್ಮ ಸ್ವಾತಂತ್ರ್ಯವನ್ನು ರಕ್ಷಿಸಲೂ ಬಲ್ಲೆವೆಂಬುದನ್ನು ಜಗತ್ತಿಗೆ ತೋರಿಸಬೇಕು. ಆಗ ಮಾತ್ರ ನಾವು ಗಂಡಸರೊಡನೆ ಸಮ ಸ್ಥಾನಮಾನ ಪಡೆಯಲು ಅರ್ಹರಾಗುತ್ತೇವೆಂದು ಪೂರ್ವ ಪಂಜಾಬಿನ ಗವರ್ನರರಾದ ತ್ರಿವೇದಿಯವರ ಹೆಂಡತಿ ಹೇಳಿದರು. ಸಮಾನ ಸ್ಥಾನಮಾನಗಳಿಗೆ ಸ್ತ್ರೀಯರು ಯಾವ ಬೆಲೆಯನ್ನು ತೆರಬೇಕೆಂಬುದು ಇದರಿಂದ ಪೂರ್ಣ ಸ್ಪಷ್ಟವಾಗುತ್ತದೆ.

ಹೋರಾಡುವ ಹೆಂಗಸು

"ನೇಶನ್" ಪತ್ರಿಕೆಯಲ್ಲಿ ಅನ್ನಾ ಲುಟ್ಸಳು ಮೇಲಿನ ತಲೆಬರಹದಲ್ಲಿ ಗಂಡಸರೊಡನೆ ಸರ್ವಕ್ಷೇತ್ರಗಳಲ್ಲಿ ಸಮಪಾಲಿಗಾಗಿ ಹೋರಾಡುವ ಹೆಂಗಸು ದ್ವೇಷಬುದ್ಧಿಯವಳಲ್ಲ, ಸ್ವಪರಹಿತಕಾರಿ ಎಂದು ಸಮರ್ಥಿಸುತ್ತಾಳೆ. ಅಲ್ಲದೆ ಹಿಂದಿನಿಂದಲೂ ಮದುವೆಯೆಂಬುದು ಹೆಂಗಸಿನ ದಾಸ್ಯಕ್ಕೆ ಕಾರಣವಾಯಿತೆಂದು ಪ್ರತಿಪಾದಿಸುತ್ತಾಳೆ. ತಾಮ್ಮ ದರ್ಶನವ್ಯಯದಂತೆ ಇದನ್ನು ಒಪ್ಪಿಕೊಂಡರೂ ಉಳಿದ ಸ್ತ್ರೀವಾದಿಗಳಂತೆ ಇವಳಾದರೂ ಮದುವೆ ಮತ್ತು ಕೌಟುಂಬಿಕ ಜೀವನದ ಸಮಾಜ ಘಟಕಸ್ಥಾನದ ಬದಲು ಇಷ್ಟೇ ಅಥವಾ ಅದಕ್ಕಿಂತ ಉತ್ತಮವಾದ ಬೇರೊಂದು ಸಂಸ್ಥೆಯನ್ನು ಯೋಜಿಸಿ ಜಗದ ಮುಂದಿರುವ ಗೋಜಿಗೆ ಹೋಗಿಲ್ಲ. ರಾಷ್ಟ್ರ ಮತ್ತು ಸಮಾಜದ ಪೀಳಿಗೆಯ ಹಿತಚಿಂತನವನ್ನು ಗಣಿಸದೆ ಕೇವಲ ಸ್ವಾರ್ಥದ ಈ ಅತಿಸಾಮ್ಯಾಕಾಂಕ್ಷೆ ಮಾನಸಶಾಸ್ತ್ರೀಯವಾದ ನೀಚೋದ್ಭವ ಜನ್ಯವಿದ್ದ ಅತಿವೃತ್ತಿಯೆನಿಸುತ್ತಿತಿಯ ವಿಪರ್ಯಾಸವೂ ಆಗಿದೆಯೆಂದು ಮನಃಶಾಸ್ತ್ರಜ್ಞರೆನ್ನುವ ಸತ್ಯದತ್ತ "ಹೋರಾಡುವ ಹೆಂಗಸು" ಲಕ್ಷ್ಯ ಕೊಡಬೇಕು. ಸಮಾಜವು ನ್ಯಾಯಪದ್ಧತಿಯಿಂದಲೂ ಕುಟುಂಬವು ಸಮತಾವಾದದ ತತ್ವದಂತೆಯೂ ಸಾಗಿರುವ ಅಂಶವನ್ನು ಲಕ್ಷಿಸದೆ ಹೋರಾಟಗಾರ್ತಿಯರಿಗೆ ಎಂಥ ಉದಾರಿಮನವರೂ ಬೆಂಬಲಿಸರು.

ಅಮೇರಿಕದ ಹೆಂಗಸರಿಗೆ ಹುಕ್ಕಾ!

ಪ್ರಾಚೀನ ಕಾಲದಲ್ಲಿ ಭಾರತದ, ತುರ್ಕಸ್ತಾನದ, ರೋಮಿನ ಮತ್ತು ಗ್ರೀಸಿನ ಶ್ರೀಮಂತ ಹೆಂಗಸರೆಲ್ಲ ಹುಕ್ಕಾ ಸೇದುತ್ತಿದ್ದರೆಂಬ ಇತಿಹಾಸವನ್ನು ಬಳಸಿಕೊಂಡು ಅಮೇರಿಕದ ಕ್ಲಬ್ಬುಗಳಲ್ಲಿ ಸಿಗರೇಟಿನ ಬದಲು ಹುಕ್ಕಾ ಸೇವನೆಯನ್ನು ಪ್ರಚುರಪಡಿಸಲಾಗುತ್ತಿದೆ. ಸಿಗರೇಟು ಸಿಗದಿರುವುದರಿಂದ ಯುದ್ಧಕಾಲದಲ್ಲಿ ಅಮೇರಿಕದ ಅನೇಕ ಮಹಿಳೆಯರು ಸಿಗರೇಟಿನ ಬದಲು ಹುಕ್ಕಾ ಸೇವಿಸಲು ಪ್ರಾರಂಭಿಸಿದರು. ಅದೀಗ ಒಂದು ಪ್ರಸಿದ್ಧ ರೂಢಿಯಾಗಿಬಿಟ್ಟಿದೆ. ಈಗಿನ ಪ್ರಚಾರದ ಹಿಂದೆ ಹೊಸತಾದ ಹುಕ್ಕಾ ಉತ್ಪಾದನಾದ ರಾಬರ್ಟ್ ಮಾರ್ಸ್ ಇದ್ದಾನೆ. ಅವನಲ್ಲಿ ಅಸಂಖ್ಯ Light weight pipes ಹಿಲಾಲೆಗಳ [ಬತ್ತಿ] ಶಿಲ್ಕಿದೆಯಂತೆ!

ಬಾಳ ಕೊಳಗಳು!

[illegible]
[illegible]

(೧)

ಹಸಿ ಹಸಿ ರೊಕ್ಕ
ಹಳೆ [illegible] ಪಕ್ಕ
ಇಲ್ಲಿಸಿಲ್ಲ ಬೆಳೆಯ
ಇದು ಹರವು ಹೆಚ್ಚಿನ ಸೆಳೆಯ.
ಕಾಳನ್ನು ಬೆಳೆದು
ಒಕ್ಕಲು ಕಳೆದು
ಉಳಿಲ್ಲಬಿಲ್ಲ ಕಾಳು
ಮಕ್ಕಳ ಮನೆಗೆ ಗೋಳು.
ಕೈ ತುಂಬ ಗಳಿಸಿ
ಕಾಗದ ಗಳಿಸಿ
ಕೆಸರಿಗೆ ಗಿದ್ದಿಲಕ್ಕಿ?
ಬಾಳೇಸು ಏನು ಮುಕ್ಕೆ!
ಹೊಟ್ಟೆಗೂ ಅರೆ ತುತ್ತ!
ಬಾಯಿಗೆ ಬಂದ! ಜನವು ಮತ್ತ!!
ಇದು ಎಂಥ ಜೀವ ಮಾರ್ಗ!!!

(೨)

ಜನ ಬೆಳೆದ ಹತ್ತಿ
ಜನ [illegible] ಗತ್ತಿ
ಕಂಭೀರು ಕಾಸಿಗಾಯ್ತು
ಬಾಳೆಲ್ಲ ಗೋಳಾಯ್ತು!
ಗೇಣರಿವೆ ಏರಿ
ಹೊಸ ನೋಟು ಹಾರಿ
ಬರಿದಾಯ್ತು ಮನೆಮಾರು
ಏರೇರೆ ಯಾರ ನೀರು?
ಏನೆಂಥ ಬೇಟ
ಇದು ಯಾರ ಕಾಟ
ಮಹಾತ್ರಿಕನ ಮುಚ್ಚು ಮಾಟ
ಕೊಂಡೆಂಬೊ[illegible]!
ಬಾಯಿಗೆ ಬಂದರೆ ಕಟ್ಟು!
ಬಂದಾಯ್ತು ಹತ್ತು ಪಟ್ಟು!!
ಇದು ಎಂಥ ಗಟ್ಟಿಮುಟ್ಟು!!!

(೩)

ಕಾಳಿಗೆ ಹುಳುಕು
ಅರಿವೆಯೂ ಕೊಳಕು
ವೈದ್ಯ [illegible] ಮುಂದೊ
[illegible]
ಇಲ್ಲಿಲ್ಲಿ
ಇದು ಒಂದೆ ಸೊಲ್ಲ
ಎಲ್ಲೆಲ್ಲು ಉಳಿವಿಲ್ಲ
[illegible] ಯಾವ ಬಲ್ಲೆ?
ಮುಂದಾಗಲಲ್ಲಿ
ಇಲ್ಲ ಬದಲ್ಲಿ
ಹಿಂದಾಗಿಲಕ್ಕ ಎಲ್ಲಾ
[illegible]!
ಒಂದಕ್ಕೆ ನಾಲ್ಕು ದರವೋ!
ನಗು ಮಾಸಿಹೋದ [illegible]!!
ಇದು ಎಂಥ [illegible]!!!
ಕೊಳಗುಳದ ದಾಟ ತಳಮಳವೋ?
[illegible] ಕೊಳಗಳವೋ?

—[illegible]

ರೂಪರಂಗ

ಛಿನ್ನ ರತ್ರಿ

(ಲೇ— ಶ್ರೀ ಕಾ. ರಾ. ನಾಗರಾಜ)

[illegible] ಕಬೀರದ ಮಂತರ ಸುತ್ತಾರು [illegible] ದರ್ಶನ ತಲೆಗೆ ಕನ್ನಡದ ಹೊಸ ಚಿತ್ರಗಳೊಂದೂ ಹೊರಬೀಳಲಿಲ್ಲ. ನವಜ್ಯೋತಿ ಸ್ಟುಡಿಯೋದ ಮುಂದಿರುವಲ್ಲಿ 'ಭಾರತಿ' ಎಂಬ [illegible] ತಯಾರಾಗುತ್ತಿದೆಯೆಂದು ಅಗಾಗ [illegible] ಮಾತ್ರ ಕಿವಿಗೆ ಬೀಳು [illegible]. ಕೃಷ್ಣಲೀಲೆ ಮತ್ತು ಮಹಾನಂದೆ [illegible], ಕೀಳು ದರ್ಜೆಯ, ಹೊಲಸು ಚಿತ್ರಗಳನ್ನು ತಯಾರಿಸಿ ಕನ್ನಡಿಗರಿಗೆ ಮು[illegible] ಯಳು ಚಿತ್ರದ ಎಲ್ಲ ಹಕ್ಕುಗಳನ್ನು ಮಾರಿ [illegible] ನವಜ್ಯೋತಿ ಚಿತ್ರ ನಿರ್ಮಾಪಕ ಮಂದಿರವು [illegible] ಸಾಮಾಜಿಕ ಚಿತ್ರವನ್ನು ಉತ್ತಮವಾಗಿ ತಯಾರಿಸುತ್ತದೆಂದು ಕನ್ನಡಿಗರಾರೂ ನಿರೀಕ್ಷಿಸಲಿಲ್ಲ. ಇಂತಹ ನಿರಾಶೆಗೊಂಡಿದ್ದ ಕನ್ನಡಿಗರು, ಕನ್ನಡ ಪ್ರೇಮದಿಂದ ಕನ್ನಡ ಚಿತ್ರ[illegible]ಪ್ರೋತ್ಸಾಹಿಸಬೇಕೆಂದು ನೋಡಲು ಹೋದ ಚಿತ್ರ 'ಭಾರತಿ' ಕನ್ನಡಿಗರಲ್ಲಿ ಒಂದು ನವೋ[illegible] ಹುಟ್ಟಿಸಿತು.

ಜಮೀನ್ದಾರ್ ಮಾಧವರಾಯರೂ, ಇವರ ಮ್ಯಾನೇಜರ್ ಶಾಮರಾಯರೂ ಅಧುನಿಕ [illegible] ಅಪರ್ಕವಾಗಿ ಗೆಳೆತನದಿಂದ [illegible]ಗಳು ಇಬ್ಬರಿಗೂ ಹೆಂಡತಿಯರು [illegible]. ಮಾಧವರಾಯರಿಗೆ [illegible] ಏಕಮಾತ್ರ ಪುತ್ರಿ ಸೌಂದರ್ಯ— ಒಲವನ್ನು ತೋರ್ಪಡಿಸುತ್ತಿರಲಿಲ್ಲ. ಅಂತೂ ಅವರೀಕ್ವರ ಪ್ರೇಮುಬೆಳೆಯುತ್ತಿತ್ತು. ರಘುವು ಯಮುನೆಯನ್ನು ಪ್ರಾಚೀನ ಸಂಸ್ಕೃತಿಯ ಕಡೆಗೆ ತಿರುಗಿಸಿ ತನ್ನವಳನ್ನಾಗಿ ಮಾಡಿಕೊಳ್ಳಬೇಕೆಂದು, ಯತ್ನಿಸುತ್ತಿದ್ದ. ಅದಕ್ಕಾಗಿ ಯಮುನೆಯನ್ನು ಅಗಾಗ ಹುಚ್ಚು ಮಾತುಗಳಿಂದ ಎಚ್ಚರಗೊಳ್ಳುವಂತೆ ಮಾಡುತ್ತಿದ್ದ.

ಇತ್ತ ಭಾರತಿಯು ಮಹಿಳಾಸಮಾಜಕ್ಕೆ ಶ್ಯಾಮರಾಯರ ಬಲವಂತದಿಂದ ಸೇರಿ ಕೊನೆಗೆ ಮನೆಯನ್ನೇ ಮರೆಯುವಂತೆ ಬದಲಾದಳು. ಇವಳ ನಡೆಯನ್ನು ಗಮನಿಸುತ್ತಿದ್ದ ಶ್ಯಾಮರಾಯರು ಕಿನ್ನಿಯಾಗುತ್ತಿದ್ದರು. ಭಾರತಿಯು ಗಂಡನೆದುರಿಗೆ 'ಸವಾಲ್' ಆಗಿ ನಿಂತಳು. ಇತ್ತ ಶ್ಯಾಮರಾಯರ ಅಡಿಗೆಯು ಛಟ್ಟಿ ತನ್ನ ಆತ್ಮಗೌರವಕ್ಕಾಗಿ ಎಂಬ ಜಂಭದಿಂದ ಬೇಕೆಂತ ತಪ್ಪುಮಾಡಿ ಕೆಲಸ ಕಳೆದುಕೊಂಡನಂತರ ಅಡಿಗೆಯು ಮನೆಯ ಕಾರ್ಯ, ಭಾರತಿ ಯಮುನೆಯರ ಬದಲು ಶ್ಯಾಮರಾಯರ ಮತ್ತು ಮಾಧವರಾಯರ ತಲೆಗೆ ಬಂತು ಕಾರಣ ಈ ಹೆಣ್ಣುಗಳು ನವನಾಗರಿಕತೆಯ ಪತಂಗಗಳಾಗಿದ್ದರ ಪ್ರಭಾವ.

ನಂತರ ಇವರಿಬ್ಬರಿಗೂ ಹುಚ್ಚುಹಿಡಿದಂತಾಗಿ ನವನಾಗರಿಕತೆಯಿಂದ ತುಂಬಿದ ಈ ಎರಡು ಸಂಸಾರಗಳೂ ತಮ್ಮ ತಮ್ಮ ತಪ್ಪನ್ನು

[illegible] "[illegible] ವರ್ಕರ್" ಚಿತ್ರದಲ್ಲಿ ಸುಧಾರ್ ರಾಯ ಮತ್ತು ಅನಾಬೆಲಾ ಬಾನ್ ಹ್ಯೂರ್.

[illegible] ಶ್ಯಾಮರಾಯರಿಗೆ ಏಕ [illegible] ಹಾಗೂ ಪುತ್ರರೋಹಿಣಿ. [illegible]ನವನಾಗರಿಕತೆಯ ಜೊತೆಗೆ ಪಾಶ್ಚಾತ್ಯ ಸಂಸ್ಕೃತಿಯು ರಕ್ತಗತವಾಗಿದ್ದ ಈ ಸಂಸಾರದಲ್ಲಿ ಭಾರತದ ಪ್ರಾಚೀನ ಸಂಸ್ಕೃತಿ [illegible] [illegible] ನಿರೀಕ್ಷಕಕ್ಕೆ ತೆರೆದ.

ಪಾಶ್ಚಾತ್ಯ ಸಂಸ್ಕೃತಿ [illegible] ಶ್ಯಾಮರಾಯರ [illegible] 'ಭಾರತಿ' [illegible] (ಶ್ಯಾಮರಾಯರ ಹೆಂಡತಿ) [illegible] ನವನಾಗರಿಕತೆಯ [illegible] ಮತ್ತು [illegible] ಕಲಿತಳು.

[illegible] ರಘುವಿಗೆ ಅವಳ [illegible] ಮೊದಲ ಛೇಟಿಯಲ್ಲೇ [illegible] ಯಮುನೆಗೆ [illegible]

ಆದಿತು, ರಘುವುಹೇಳುತ್ತಿದ್ದುದು ಸರಿಎನಿಸಿತು. ಭಾರತಿ ಮತ್ತು ಯಮುನೆಯರು ಯಾವರೀತಿ ನಾಗರಿಕತೆಯ ತುದಿಯನ್ನೇರಿದ್ದರೋ, ಅಂತೆಯೇ ಪುನಃ ಭಾರತ ಮಹಿಳೆಯರನ್ನಾಗಿಸುತ್ತಾರೆ. ಇದಕ್ಕೆಲ್ಲ ರಘುವೇ ತನ್ನ ಪ್ರಯತ್ನದಿಂದ ಯಮುನೆಯನ್ನು ಬದಲಿಸುತ್ತಾನೆ. ಭಾರತಿಯು ತನ್ನ ತಪ್ಪನ್ನರಿಯಲು, ಶ್ಯಾಮರಾಯರ ಹುಚ್ಚುಇಳಿಯಲು ರೋಹಿಣಿ ಬಲಿಯಾಗುತ್ತಾಳೆ. ನಂತರ ರಘುವು ಯಮುನೆಯ ಕೈಹಿಡಿಯುತ್ತಾನೆ. ಎಲ್ಲರೂ ಸಂತೋಷದಿಂದ ಬಾಳುತ್ತಿರುವಲ್ಲಿಗೆ ಚಿತ್ರಕತೆ ಮುಗಿಯುತ್ತದೆ.

ಇಂತಹ ಚಿತ್ರಕತೆಯನ್ನು ದಿಗ್ದರ್ಶಿಸಲು [illegible]ಮಾಡಿದ ಆರ್. ಯಂ. ವೀರಭದ್ರಯ್ಯನವರ ಪ್ರತಿಭೆ ಹೆಚ್ಚಿನದೇ. ತಮ್ಮ ಪ್ರಯತ್ನದಲ್ಲಿ ಹೊಸ ಪ್ರಯೋಗಗಳನ್ನುಮಾಡಿ ತಮ್ಮ ಕುಶಲತೆಯನ್ನು ತೋರಿದ್ದಾರೆ. ಜೊತೆಗೆ [illegible] ಕೆಲವು ನಟಿ ಟಿ. ಸೂರ್ಯ[illegible]ರಿಯನ್ನು ಕನ್ನಡ ಭಾಷೆಯಲ್ಲಿ ಮಾತ[illegible]. [illegible] ತರಬೇತುಮಾಡಿದ್ದಾರೆ. ಕೃಷ್ಣಸುಧಾಮ ಚಿತ್ರದಲ್ಲಿಯಂತೆ ತಲೆತಗ್ಗಿಸುವ ಪ್ರಸಂಗದ ಸೊಲ್ಲೇ ಇಲ್ಲ.

ಶ್ರೀ ಸಂಪತ್, ಕೃಷ್ಣಸ್ವಾಮಿ, ಜಯಶ್ರೀ ಮೊದಲಾದವರಲ್ಲಿ ಹುದುಗಿದ್ದ ನಟನಕೌಶಲ್ಯವನ್ನು ಹೊರಗೆಳೆದು ತೋರಿಸಿದ್ದಾರೆ. ಚಿತ್ರದಲ್ಲಿ ಅನೇಕ ಲೋಪಗಳಿದ್ದರೂ ಅವೆಲ್ಲವನ್ನೂ ಮುಚ್ಚುವಂತಹ ಲಘುಹಾಸ್ಯ, ಮಧುರ ಸಂಗೀತ, ಮನೋರಂಜಕ ನೃತ್ಯ, ಇವುಗಳು ಲೋಪಗಳನ್ನು ಮರೆ ಮಾಡುತ್ತವೆ. ಸಂಗೀತದಲ್ಲಿ [illegible] ಸಂಗೀತಗಾರರನ್ನು ಸಹ ಬೇಸರ

ಗೊಳಿಸಿಲ್ಲ. ಕತೆಯ ಓಟ ತುಂಬ ನಿಧಾನವಾಗಿ ಇರುವುದರ ಜೊತೆಗೆ ಚಿತ್ರಗ್ರಹಣದ ವೇಗವೂ ಕಡಿಮೆಯಾಗಿದೆ. ಚಿತ್ರಗ್ರಹಣದ ವೇಗ ಇನ್ನೂ ಬಹಳವಿರಬೇಕು. ಕೆಲವುಕಡೆಯಲ್ಲಿ ಶಬ್ದಗ್ರಹಣವು ಕಿವಿಗೆ ತಾಕುವತೆಯೇ ಇಲ್ಲವೆನಿಸುವಂತಿದೆ. ಕೆಲಕಡೆ ಕಿವಿ ಕಿವುಡಾಗುವಷ್ಟು ಕರ್ಕಶವಾಗಿದೆ. ಒಟ್ಟಿನಲ್ಲಿ ಚಿತ್ರಗ್ರಹಣ ಮತ್ತು ಶಬ್ದಗ್ರಹಣ ಯಾವ ಉತ್ತಮ ಚಿತ್ರಕ್ಕೂ ಕಡಿಮೆಯೆನ್ನಬಹುದು. ವಸ್ತ್ರಾಲಂಕಾರವು ತೃಪ್ತಿಕರವಾಗಿದೆ. ಅಂತೂ ಬೇಸರಿಸುವಂತಹ ಚಿತ್ರವಲ್ಲ. ಚಿತ್ರಪಟದಲ್ಲಿ ಅಪೂರ್ವವೆನಿಸುವ ಗುರುವಿಲ್ಲದಿದ್ದರೂ ಉತ್ತಮವಾಗಿ ನಿದೇಶಿಸಲ್ಪಟ್ಟದೆ

ನೃತ್ಯಕಾರ

ಬಾಯಿತಪ್ಪು — ಕೈತಪ್ಪು

ಮೊನ್ನೆ ಯುಕ್ತರಾಷ್ಟ್ರ ಸಂಘದ "ಕಿರಿಯ ಸಭೆ" ಯಲ್ಲಿ ಸದಸ್ಯರೊಬ್ಬರು ಜಪಾನದೇಶಕ್ಕೆ ಸಂಘದಲ್ಲಿ ಪ್ರವೇಶ ಕೊಡಬೇಕೆಂದು ಒಂದು ಗೊತ್ತುವಳಿಯನ್ನು ಮುಂದಿಸಿ ಸಭೆಯನ್ನು ನಗಿಸಿದರು. ಸಿಂಹಳವೆಂದು ಹೇಳುವ ಬದಲು ಬಾಯಿತಪ್ಪಿ ಜಪಾನದ ಹೆಸರು ತೆಗೆದು ಕೊಂಡಿದ್ದರವರು! ಇಂಥ ಬಾಯಿತಪ್ಪುಗಳಿಂದ ಒಣ ಚರ್ಚೆಗಳ ನಡುವೆ ಒಂದಿಷ್ಟು ಸ್ವಾರಸ್ಯ ಬರುವದುಂಟು.

× × ×

ಬಾಯಿತಪ್ಪುಗಳು ಹಲವಾರು ಬಗೆಯಲ್ಲಿ ಆ[illegible]ವೆ. ಮೇಲಿನದು ಶಬ್ದಪಲ್ಲಟದ ಉದಾಹ[illegible]. ಇನ್ನು ಅಕ್ಷರ ಪಲ್ಲಟದ ಕೆಲ ಪ್ರಸಂಗಗಳೂ ಪ್ರಸಿದ್ಧವಾಗಿವೆ. ಅಮೇರಿಕೆಯ ಪಾದ್ರಿಯೊಬ್ಬರು ತಾವು ರವಿವಾರದ ಉಪದೇಶದ ಸಮಯದಲ್ಲಿ ಮಾಡಿದ ಇಂಥ ಒಂದು ತಪ್ಪಿನಿಂದಲೇ ಹೆಸರುವಾಸಿಯಾದರು. "ನಾಯಿಯ ಬಾಲ" ಎಂದು ಹೇಳಬೇಕಾದಲ್ಲಿ "ಬಾಯಿಯ ನಾಲ" ಎಂಬ ಜಾತಿಯ ತಪ್ಪನ್ನು ಅವರು ಮಾಡಿದ್ದರು. ಅಂದಿನಿಂದ ಹೀಗೆ ಅಕ್ಷರ ಪಲ್ಲಟ ಮಾಡಿ ಹಾಸ್ಯ ಮಾಡುವದೂ ಅನೇಕ ದಿನಗಳ ವರೆಗೆ ಒಂದು ಫ್ಯಾಶನ್ ಆಗಿಬಿಟ್ಟಿತು. ಸ್ವತಃ ಆ ಪಾದ್ರಿಗಳ ಹೆಸರನ್ನೇ ವಿದೂಷಕರು ಅಕ್ಷರ ಪಲ್ಲಟ ಮಾಡಿ ಉಚ್ಚರಿಸತೊಡಗಿದರು.

× × ×

ಇದಕ್ಕಿಂತಲೂ ಸ್ವಾರಸ್ಯವಾದ ಒಂದು ತಪ್ಪು ಭಾರತದ ಕೇಂದ್ರ ಶಾಸನ ಸಭೆಯಲ್ಲಿ ಕೆಲ ವರ್ಷಗಳ ಹಿಂದೆ ಆಯಿತು. ನೀರಸವಾದ ಒಂದು ಮಸೂದೆಯ ವಾಚನ ನಡೆದಿತ್ತು. ಅದರ ಒಂದು ಕಲಮಿನಲ್ಲಿ "ಅವನ ಗಂಡನು" ಎಂದು ಹೇಳಲಾಗಿತ್ತು. ಕುತರ್ಕ ವಾಚಸ್ಪತಿಯಾದ ಸದಸ್ಯ ಶ್ರೀಪ್ರಕಾಶರು (ಈಗ ಪಾಕಿಸ್ತಾನದಲ್ಲಿ ನಮ್ಮ ಹೈಕಮೀಶನರರು) ತಟ್ಟನೆ ಎದ್ದು "ಅವನಿಗೂ ಗಂಡನುಂಟೆ?" ಎಂದು ಕೇಳಿದರು. ಆಕಳಿಸತೊಡಗಿದ್ದ ಶಾಸನ ಸಭೆಯಲ್ಲಿ ಒಮ್ಮಿಂದೊಮ್ಮೆ ನಗೆಯ ತೆರೆಗಳೆದ್ದವು. ಯಾವನೋ ಕಾರಕೂನನ ಇಲ್ಲವೆ ಮೊಳೆ ಜೋಡಿಸುವವನ ಕೈತಪ್ಪಿ "ಅವಳ ಗಂಡನ" ಸ್ಥಾನದಲ್ಲಿ "ಅವನ ಗಂಡ" ಎಂದು ಕುಳಿತುಬಿಟ್ಟಿತ್ತು! ಅದನ್ನು ಯಾರೂ ಗಮನಿಸಿಯೆ ಇದ್ದಿಲ್ಲ.

× × ×

ಇಂಥಪ್ರಸಿದ್ಧ ಉದಾಹರಣೆಗಳನ್ನು ಬಿಟ್ಟರೂ ನಮ್ಮ ಜೀವನದಲ್ಲೆ ಅನೇಕ ಬಾಯಿತಪ್ಪು—ಕೈತಪ್ಪುಗಳನ್ನು ನಾವು ಕಾಣುತಿರುತ್ತೇವೆ. ಒಮ್ಮೆ ನನ್ನ ವಯಸ್ಸಾದ ತಾಯಿ, ನಮ್ಮ ಪ್ರಾಮಾಣಿಕತೆಯಲ್ಲಿ ಹಾಲು ಮಾರುವಳು ಇಟ್ಟಿದ್ದ ವಿಶ್ವಾಸವನ್ನು ಯಾರಿಗೋ ಬಣ್ಣಿಸುತ್ತ ಹೇಳಿದರು: "ನಾವು ಹೇಗೂ ಮೋಸ ಮಾಡುವರೆಂದು ಅವಳಿಗೆ ಗೊತ್ತೇ ಇದೆ. ಅದರಿಂದ ಅವಳು ಲೆಕ್ಕವನ್ನೇ ಇಡುವದಿಲ್ಲ" ಎಂದರು. ಅವರಾಗಲಿ ಅವರ ಮಾತನ್ನು ಕೇಳುತಿದ್ದವರಾಗಲಿ ಇದನ್ನು ಗಮನಿಸಲಿಲ್ಲ. ಒಳಗೆ ಕಾಫಿ ಕುಡಿಯುತ್ತಿದ್ದ ನಾನು ಮಾತ್ರ ಗುಟುಕು ನುಂಗುವ ಮೊದಲು ಬಂದ ನಗೆಯಿಂದ ಇಡಿ ಪಡಸಾಲೆ ತುಂಬಾ ಎಂಜಲು ಮಾಡಿದೆ! ಇಲ್ಲಿ ಅರ್ಥಪಲ್ಲಟವೇ ಆಗಿ ಹೋಗಿತ್ತು.

× × ×

ಇವು ಕೈತಪ್ಪು ಬಾಯಿತಪ್ಪುಗಳ ಮಾತುಗಳಾದವು. ಇನ್ನು ಕಾರ್ಯಪಲ್ಲಟವಾದ ಉದಾಹರಣೆಗಳೂ ಸಿಗುತ್ತವೆ. ತಾನೆಲ್ಲೊ ತನ್ನ ಬುದ್ಧಿಯೆಲ್ಲೋ ಆದ ಅನ್ಯಮನಸ್ಕರದಲ್ಲಿ ಅಗ್ರಗಣ್ಯರೆಂದು ಪ್ರಸಿದ್ಧರಾದ ಪ್ರೊಫೆಸರರಲ್ಲೊಬ್ಬನನ್ನು ಕುರಿತು ಒಂದು ಕಥೆ ಪ್ರಚಲಿತವಾಗಿದೆ. ದಿನಾಲೂ ಕ್ಲಾಸಿಗೆ ಬಂದೊಡನೆ ತನ್ನ ಕೈಯಲ್ಲಿದ್ದ ಕೈಕೋಲನ್ನು (ವಾಕಿಂಗ್ ಸ್ಟಿಕ್) ಒಂದು ಮೂಲೆಯಲ್ಲಿರಿಸಿ ತಾನು ಬಂದು ಕುರ್ಚಿಯಲ್ಲಿ ಕೂಡ್ರುವದು ಅವನ ಅಭ್ಯಾಸವಾಗಿತ್ತಂತೆ. ಒಂದು ದಿನ ಅವನ ಈ ಕ್ರಮ ಪಲ್ಲಟವಾಗಿ ಕೈಕೋಲನ್ನು ಕುರ್ಚಿಯ ಮೇಲಿಟ್ಟು ತಾನು ಮೂಲೆಯಲ್ಲಿ ಹೋಗಿ ಕುಳಿತನು. ತರಗತಿಯಲ್ಲಿ ಅಸಾಧ್ಯ ನಗೆಯೆದ್ದಿತೆಂದು ಬೇರೆ ಹೇಳಬೇಕಾಗಿಲ್ಲ.

ಅಧಿಕ ಪ್ರಸಂಗಿ

ಜನಮತ

ಪಾಟೀಲರ ಶಿಕ್ಷಣ

ಒಂದು ತಾಲೂಕಿನ [illegible] ಹೋಗಿನ ಹೊಣೆ ಆಯ. ಸಾಮಾನ್ಯವಾಗಿರುವಂತೆ ಗ್ರಾಮದ ಹೊಣೆ [illegible] ಸಂಬಂಧವಿದೆ. [illegible] ಈ ಹೊಣೆ ಹೊತ್ತ ಪಟೀಲಿ ನಡಿಸುವವ[illegible] ತಾಲೂಕಿನಲ್ಲಿ ಎಷ್ಟರ [illegible] ಮನಸು ಮಾಡಿದರೆ ಗ್ರಾಮ[illegible] ಕೊರತೆಗಳಲ್ಲಿಯೂ [illegible]. ಗ್ರಾಮ ನೈರ್ಮಲ್ಯ, [illegible] ಗ್ರಾಮದ ಒಳರಸ್ತೆ [illegible] ವಾಚನಾಲಯ, [illegible] ನೈತಿಕ ಶಿಕ್ಷಣ [illegible] ವಿಧಾಯಕ ಕಾರ್ಯಕ್ರಮಕ್ಕೆ ಮಾರ್ಗದರ್ಶಕರಾಗಿ ನಿಲ್ಲಬಹುದು. [illegible]ದನ್ನು ಮಾಡಲು ಆಯಾ ಸ್ಥಳಿಕ ಪಟೀಲರಿಗಿದ್ದಷ್ಟು [illegible] ಹೊರಗಿನ ನೌಕರರಿಗಾಗಲಿ, ಯಾವ [illegible] ಜಿಕ ಕಾರ್ಯಕರ್ತನಿಗಾಗಲಿ [illegible]. ಆದರೆ ಗ್ರಾಮದ ಹಿತಚಿಂತನೆ ತಮಗೇನು ಸಂಬಂಧ [illegible] ಅಧಿಕಾರಿಗಳಿಗೆ [illegible], ಸರಬರಾಯಿ, ಇವೇ ತಮ್ಮ [illegible] ಕರ್ತವ್ಯ ಎಂಬವರೂ ಇದ್ದಾರೆ [illegible] ಬೇಕಾದ ಶಿಕ್ಷಣವೂ ಅವರಿಗಿಲ್ಲ. ಅಂತೂ ಗ್ರಾಮಾಭಿವೃದ್ಧಿ [illegible] ಇವರ ಅಂಗ ತೀರ [illegible]. ಕಾಲಚಕ್ರ ತಿರುಗಿದ ಈ ಕಾಲದಲ್ಲಿ ಗ್ರಾಮರಕ್ಷಕ ಪಟೀಲರಿಂದ ಇನ್ನೂ ಹೆಚ್ಚಾದ ಗ್ರಾಮಸೇವೆ ಮಾಡಿಕೊಳ್ಳಲು ಸುಲಭಸಾಧ್ಯವಿದೆ. ಗ್ರಾಮ ಸುಧಾರಣೆಯೇ ಸರಕಾರದ ಉಸಿರು ಎಂದೆನಿಸಿದ್ದ ಈ ಕಾಲದಲ್ಲಿ ಸರಕಾರವೇ [illegible]ರೊಂದು ಯೋಜನೆ ಕೈಕೊಳ್ಳಬೇಕಾಗಿದೆ. ಪಟೀಲರ ಗ್ರಾಮೋನ್ನತಿಯ ಶಿಕ್ಷಣವನ್ನು ಕುರಿತು ತಾಲೂಕಿಗೊಂದೊಂದು ತರಬೇತಿಯ ಹಂಗಾಮೀ ಕ್ಲಾಸು ತೆರೆಯಬೇಕು. ಈ ಶಿಕ್ಷಣದ ಪರಿಣಾಮವಾಗಿ ಗ್ರಾಮಾಭಿವೃದ್ಧಿಗೆ ಕೆಲಮಟ್ಟಿನ ಪ್ರಯೋಜನವಾಗಬಹುದು. ಆಗ ಕೆಲಮಟ್ಟಿನ ವೇತನಾಧಿಕಾರವನ್ನೂ ಹೆಚ್ಚಿಸಬೇಕಾಗಬಹುದು. ಸರಕಾರಕ್ಕೆ ಇತ್ತ ಗಮನಗೊಡಲು ಸಾಧ್ಯವಿದೆಯೇ?

ಸಿದ್ದಾಪುರ — ಗ. ತ್ರ್ಯಂಬಕರಾವ

೨೯—೧೧—೪೮

ಬಹುಶಃ ಜಗತ್ತಿನಲ್ಲಿ ಅತಿ ಸರಳವೆಂದು ಹೇಳಲ್ಪಡಬಹುದಾದ ವಿವಾಹಪದ್ಧತಿ ಅಂಡಮಾನ ದ್ವೀಪದ ಮೂಲ ನಿವಾಸಿಗಳಲ್ಲಿ ಬಳಕೆಯಲ್ಲಿದೆ ವಧುವನ್ನು ವರನ ತೊಡೆಯ ಮೇಲೆ ಏರಿಸಿದರೆ ಸರಿ, ಅವರ ಮದುವೆಯಾಯಿತು!

ಭಾರತದ ರಾಷ್ಟ್ರ ಭಾಷೆಯ ಸಮಸ್ಯೆ

(೫ ನೇ ಪುಟದಿಂದ)

ಪ್ರದೇಶಗಳ ಮತ್ತು ಅತ್ತ ಅಖಿಲ ಭಾರತದ ಅವಶ್ಯಕತೆಗಳಲ್ಲಿ ಸಮನ್ವಯವನ್ನುಂಟು ಮಾಡಬೇಕಾಗಿದೆ. ಭಾರತವನ್ನು ಅಖಂಡ ಘಟಕವಾಗಿ ಉಳಿಸಿಕೊಳ್ಳಬೇಕಾಗಿದ್ದರೆ, ಹಾಗೆ ಉಳಿಸಿಕೊಳ್ಳಬೇಕೆಂದು ಎಲ್ಲ ಘಟಕಗಳೂ ಒಪ್ಪುತ್ತವೆ- ಅಖಿಲ ಭಾರತದ ಅವಶ್ಯಕತೆಗಳಿಗೆ ಮನ್ನಣೆಯನ್ನು ಕೊಡಲೇಬೇಕಾಗುವದು. ಆದರ ಫಲವಾಗಿ ಪ್ರಾಂತಗಳ ಇಲ್ಲವೆಪ್ರದೇಶಗಳಹಕ್ಕುಗಳೆಂದುಭಾವಿಸಲ್ಪಟ್ಟ ಅಧಿಕಾರಗಳಿಗೆ ಕಡಿತ ಬಿದ್ದರೆ ಅದನ್ನು [illegible]ಸಿಕೊಂಡು ಹೋಗದೆ ವಿಧಿಯಿಲ್ಲ. ರಾಜಕೀಯ ವಿಷಯಗಳಲ್ಲಿ ಈ ಮಾತು ಅಂಗೀಕೃತವಾಗಿ ಹೊಸ ರಾಜ್ಯಘಟನೆಯಕರಡಿನಲ್ಲಿ ಮಾತ್ರವಲ್ಲ, ೧೯೩೫ ರ ಘಟನಾ ಕಾಯದೆಯಲ್ಲಿ ಕೂಡ ಕೇಂದ್ರದ ಮತ್ತು ಪ್ರಾಂತಗಳ ಅಧಿಕಾರ ಕ್ಷೇತ್ರಗಳನ್ನು ನಿರ್ದಿಷ್ಟವಾಗಿ ಉಲ್ಲೇಖಿಸಲಾಗಿದೆ. ಅತ್ಯಂತಿಕ ಮಹತ್ವದ ವಿಷಯಗಳಲ್ಲಿ ಕೇಂದ್ರದ ವರಿಷ್ಠತೆಯನ್ನು ಒಪ್ಪಿಕೊಳ್ಳಲಾಗಿದೆ. ಅಖಿಲ ಭಾರತ ಭಾಷೆಯ ವಿಷಯಕ್ಕೂ ಇದೇ ಮಾತು ಅನ್ವಯಿಸುತ್ತದೆ. ಅವಶ್ಯರುವ ಮಿತಿಯನ್ನು ಬೇಕಾದರೆ [illegible] ಬಹುದು. ಆದರೂ ಆದರಕ್ಷೇತ್ರ [illegible]ವಾಗಿದೆಯೆಂಬುದನ್ನು ಅಲ್ಲಗಳೆಯಲಾಗಸಲ್ಲ. ಶಿಕ್ಷಣ ಪದ್ಧತಿಯನ್ನು ಈ ಉದ್ದೇಶಕ್ಕೆ ಹೊಂದಿಕೆಯಾಗುವಂತೆ ಪುನರ್ಘಟಿಸಬೇಕೆಂದು ಇದರಿಂದ ನಿರ್ಬಂಧವಾಗಿ ನಿಷ್ಪನ್ನವಾಗುತ್ತದೆ.

(ಹರಿಜನ)

ಕರ್ನಾಟಕ

ಧಾರವಾಡ

ಪರವೂರ ರೈತರು ಶ್ರೀ ಬಸಪ್ಪಾ ಬೆಣ್ಣಿ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ನಿಯಂತ್ರಣ ರದ್ದುಪಡಿಸುವದು ಶಕ್ಯವಿಲ್ಲದಿದ್ದರೆ ಪ್ರತಿಯೊಬ್ಬ ರೈತರಿಗೆ ೬ ಚೀಲ್ ಕಾಳು, ಎರಡೆತ್ತಿನ ಕಮತದ ಬಗ್ಗೆ ೧೦ ಚೀಲ ಕಾಳು ಬಿಡಬೇಕೆಂದು ಈ ರೀತಿ ಸತ್ಯಾಗ್ರಹ ಹೂಡತಕ್ಕದ್ದಾಗಿಯೂ ನಿರ್ಧರಿಸಿರುವರು.

ಕರ್ನಾಟಕದ ಗಡಿ ಭಾಗಗಳಲ್ಲಿ ಕೆಲಸ ಮಾಡಲು ಶ್ರೀ ಬಸರೀಗಿಡದ ವೀರಪ್ಪನವರು ೫೦೦ ರೂಪಾಯಿ ಕೊಟ್ಟಿದ್ದಾರೆ. ಈ ಗಡಿ ಸಂಚಾರ ಕಾರ್ಯ ಬೇಗನೆ ಪ್ರಾರಂಭವಾಗಲಿದೆ.

ಈಗ ಕೆಲಸ ಬಹಳ ಹೆಚ್ಚಾದ್ದರಿಂದ ಮತ್ತು ಸದ್ಯದ ಪರಿಸ್ಥಿತಿಯಲ್ಲಿ ಸರಕಾರದಿಂದ ಸಿಕ್ಕುವ ಪೋಟಗಿ ಸ್ವಲ್ಪ ಅಸಮಾಧಾನಕರವಿರುವದೆಂದು ಹಾವೇರಿ ತಾಲೂಕಿನಲ್ಲಿಯ ಕೆಲವು ಕುಲಕರ್ಣಿಯರು ರಾಜೀನಾಮೆ ಕೊಟ್ಟಿರುವರೆಂದು ವಿಶ್ವಸನೀಯವಾಗಿ ತಿಳಿಯುತ್ತದೆ.

ನವೆಂಬರ ಕೊನೆಯವರೆಗೆ ಧಾರವಾಡ ಜಿಲ್ಲೆಯಲ್ಲಿ ೧,೮೬,೨೪೮-೧೧-೫ ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿ ಕೂಡಿದೆಯೆಂದು ನಿಧಿಯ ಕಾರ್ಯದರ್ಶಿಗಳು ಪ್ರಕಟಿಸುತ್ತಾರೆ.

ವಿಜಾಪುರ

ಶ್ರೀ ಶಿವಶಂಕರಪ್ಪಾ ಶಿವಲಿಂಗಪ್ಪಾ ನಾಲತವಾಡ ಇವರು ಹುನಗುಂದ ತಾಲೂಕಿನಲ್ಲಿಯ ಚಿತ್ತರಗಿ ಗ್ರಾಮದಲ್ಲಿಯ ತಮ್ಮದೊಂದು ಹೊಲ ಒಂದು ಮನೆ ಮತ್ತು ಇನ್ನುಳಿದ್ದನ್ನು ಪಾಲಿಸಿ ಹೀಗೆ ಸುಮಾರು ೧೦-೧೨ ಸಾವಿರ ರೂಪಾಯಿ ಬೆಲೆ ಬಾಳುವ ಆಸ್ತಿಯನ್ನು ಬಾಗಲಕೋಟೆಯ ಬಸವೇಶ್ವರ ವಿದ್ಯಾವರ್ಧಕ ಸಂಘಕ್ಕೆ ಕೊಟ್ಟಿರುವರು. ವಿದ್ಯಾರ್ಥಿಗಳ ವಸತಿಗೃಹಕ್ಕಾಗಿ ಈ ಹಣವನ್ನು ವಿನಿಯೋಗಿಸಬೇಕೆಂದು ನಿರ್ದಿಷ್ಟಪಡಿಸಿದ್ದಾರೆ.

ವಿಜಾಪುರ ಜಿಲ್ಲೆಯಲ್ಲಿ ನವಂಬರ ತಿಂಗಳ ಕೊನೆಯ ವರೆಗೆ ಒಟ್ಟು ೫೭,೯೦೪-೧೧-೦ ಗಾಂಧೀ ರಾಷ್ಟ್ರೀಯ ಸ್ಮಾರಕನಿಧಿ ಕೂಡಿದೆಯೆಂದು ನಿಧಿಯ ಕಾರ್ಯದರ್ಶಿಗಳು ಪ್ರಕಟಿಸುತ್ತಾರೆ.

ರಾಮದುರ್ಗ ಸಂಸ್ಥಾನದಲ್ಲಿ ನೋಕರರ ಸಂಖ್ಯೆ ಹೆಚ್ಚಾಗಿದೆ ಎಂದು ೧೪ ಜನ ಕಾರಕೂನರು ೨೫ ಪೋಲೀಸರು, ೧೫ ಆಳುಗಳು ಮತ್ತು ಬೇರೆ ೪೪ ನವಕರರನ್ನು ಮನೆಗೆ ಕಳಿಸಲು ನಿರ್ಧರಿಸಿ ಆ ಬಗ್ಗೆ ನೋಟೀಸು ಹೊರಡಿಸಲಾಗಿದೆ. ಇದರಿಂದ ಬಹಳ ಅಸಂತೋಷವುಂಟಾಗಿದ್ದು ಇದು ಅನ್ಯಾಯವೆಂದು ರಾಜಕೀಯ ಶಾಖೆಗೆ ದೂರಿಕೊಳ್ಳಲಾಗಿದೆ.

ಉತ್ತರ ಕನ್ನಡ

ಮುಂಬಯಿ ವಿಶ್ವವಿದ್ಯಾಲಯದ ಪ್ರೊ. ಪತ್ರಾವಳಿ, ಡಾ. ಕರ್ವೆ ಪ್ರೊ. ವಾಡೇಕರ ದೀಕ್ಷಿತ ಮುಂತಾದವರು ಕುಮಟೆಗೆ ಬಂದು ಕಟ್ಟಿಸಲಿರುವ ಕ್ಯಾನರಾ ಕಾಲೇಜಿನ ಪ್ರಶಸ್ತ ಪ್ರದೇಶವನ್ನು ನೋಡಿಕೊಂಡು ಹೋದರು. ಈಗಾಗಲೆ ಕಟ್ಟಡದ ಕೆಲಸ ಪ್ರಾರಂಭವಾಗಿದೆ. ಒಳ್ಳೆ ರಮ್ಯವಾದ ಸ್ಥಳವಿದಾಗಿದೆ. ಈ ಕೆಲಸಕ್ಕಾಗಿ ಇನ್ನು ಎರಡು ಲಕ್ಷ ರೂಪಾಯಿಗಳು ಬೇಕಾಗುವವು.

ದಕ್ಷಿಣ ಕನ್ನಡ

ದಕ್ಷಿಣ ಕನ್ನಡ ಜಿಲ್ಲಾ ಆಯುರ್ವೇದ ಪರಿಷತ್ತು ತಾ. ೨೬—೨೮ ರಲ್ಲಿ ಬ್ರಹ್ಮಾವರದಲ್ಲಿ ಶ್ರೀ ಸುಬ್ರಹ್ಮಣ್ಯ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ಕೆ. ಆರ್. ಕಾರಂತರು ಪ್ರಾರಂಭೋತ್ಸವ ಜರುಗಿಸಿದರು. ಶ್ರೀ ಚಿಕರಾಮಚಂದ್ರಾಚಾರ್ಯರ ಅಧ್ಯಕ್ಷತೆಯಲ್ಲಿ ತದ್ವಿದ್ಯಾ ಸಂಭಾಷಾ ಪರಿಷತ್ತು, ಶಂಕರನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ ದ್ರವ್ಯಗುಣ ಸಂಭಾಷ ಪರಿಷತ್ತು, ಗೋಪಾಲ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಪ್ರಕೃತಿ ಚಿಕಿತ್ಸೆ ಸಂಭಾಷಾ ಪರಿಷತ್ತು, ಭಂಡಾರಕೇರಿ ಶ್ರೀಗಳ ಅಧ್ಯಕ್ಷತೆಯಲ್ಲಿ ದರ್ಶನ ಸಂಭಾಷಾ ಪರಿಷತ್ತು ನಡೆದವು.

ಬಳ್ಳಾರಿ

ಬಳ್ಳಾರಿ ಜಿಲ್ಲಾ ನಾಟಕ ಕಲಾ ಪರಿಷತ್ತು ನಾಟಕಾಲಂಕಾರ ಗರುಡ ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಜೋಳದರಾಶಿಯಲ್ಲಿ ೫ ನೇ ತಾರೀಕು ಜರುಗಿತು. ಕೆ. ದೊಡ್ಡನಗೌಡರು ಸ್ವಾಗತಾಧ್ಯಕ್ಷರಾಗಿದ್ದರು. ಜನರ ಮನಸ್ಸನ್ನು ತಿದ್ದಲಿಕ್ಕೆ ನಾಟಕಗಳು ಒಳ್ಳೆ ಸಹಾಯಕವಾಗಿವೆಯೆಂದು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೇಳಿದರು.

ಬೆಳಗಾವಿ

ಗೋಕಾಕ ತಾಲೂಕಿನ ಕುಸ್ನಾಳದಲ್ಲಿ ಮೊದಲು ಕನ್ನಡ ಶಾಲೆಯುದ್ದು ಹಿಂದುಗಡೆ ತೆಗೆಯಲಾಗಿದೆ ಈಗ ಮತ್ತೊಂದು ಶಾಲೆಯು ಖಾಸಗಿ ಜನರಿಂದ ತೆಗೆದಿದ್ದು ಅದರ ಕೆಲಸ ಚೆನ್ನಾಗಿ ನಡೆದಿದೆ. ೪೧ ಜನ ವಿದ್ಯಾರ್ಥಿಗಳು ಅಲ್ಲಿ ವಿದ್ಯಾಭ್ಯಾಸ ಮಾಡುತಿರುವರು. ಈ ಸಂಬಂಧದಲ್ಲಿ ಜಿಲ್ಹೆಯಲ್ಲಿಯ ವಿದ್ಯಾಧಿಕಾರಿಗಳಿಗೆ ಬರೆದು ಶಾಲೆಯನ್ನು ಮತ್ತೆ ಸುರು ಮಾಡಲು ಬಿನ್ನವಿಸಿದ್ದಕ್ಕೆ ಅವರಿಂದ ಏನೂ ಉತ್ತರ ಬಂದಿಲ್ಲ. ಇನ್ನು ಮೇಲಾದರೂ ಬೋರ್ಡಿನವರು ಈ ಬಗ್ಗೆ ವಿಚಾರ ಮಾಡಿ ಈ ಊರಲ್ಲಿ ಒಂದು ಪ್ರಾಥಮಿಕ ಶಾಲೆ ಸ್ಥಾಪಿಸಬೇಕೆಂದು ಗ್ರಾಮದ ಜನರು ಬೇಡಿಕೊಳ್ಳುತಿರುವರು.

ಪರಸಗಡ ತಾಲೂಕಿನ ಯರಝರ್ವಿಯಿಂದ ಅಪ್ಪಣೆಯಿಲ್ಲದೆ ಧಾನ್ಯ ಸಾಗಿಸಿದ ಅಪಾದನೆಯ ಮೇಲೆ ಕಳೆದ ವರ್ಷ ಒಂದು ವರುಷ ಶಿಕ್ಷೆ ಹಾಗು ೧೦ ಸಾವಿರ ರೂಪಾಯಿ ದಂಡಕ್ಕೆ ಗುರಿಯಾಗಿದ್ದ ಬೈಲಹೊಂಗಲದ ಸಂಗಪ್ಪಾ ಮೆಟಗುಡ್ಡ ಹಾಗು ಬೇರೆ ೫ ಜನರು ಪುನರ್ವಿಚಾರಣೆಯಲ್ಲಿ ನಿರ್ದೋಷಿಗಳೆಂದು ಬಿಡಲ್ಪಟ್ಟರು. ಸಂಗಪ್ಪನವರು ಮೊದಲಿನ ಶಿಕ್ಷೆಯ ವಿರುದ್ಧ ಅಪೀಲು ಮಾಡಿದ್ದರಿಂದ ಅದರ ಪುನರ್ವಿಚಾರಣೆ ನಡೆಯಿತು.

ಗೋಕಾವಿ ಪಟ್ಟಣದ ಮಧ್ಯ ವಸತಿಯಲ್ಲಿ ಸುಪ್ಲಿ ಕಟ್ಟಡದ ಹತ್ತಿರದ ಚಿಕ್ಕ ಬೀದಿಯಲ್ಲಿ ಕಾಮೋಜಿಯವರ ಮನೆಯ ಸಮೀಪದ ಮನೆಯಿಂದ ದುರ್ಗಂಧ ಬರಹತ್ತಿತು. ಬಾಗಿಲು ತೆರೆದು ನೋಡಲಾಗಿ ಗುಬ್ಬವ್ವ ಎಂಬ ಮಧ್ಯವಯಸ್ಸಿನ ಸ್ತ್ರೀಯ ಮೃತ ದೇಹವು ಕಂಡುಬಂತು. ಕುತ್ತಿಗೆ ಕೊಯ್ದು ಹೊಟ್ಟೆಯನ್ನು ಹರಿದ ಚಿಹ್ನಗಳಿದ್ದವು. ಅವಳ ಎಲ್ಲ ಆಭರಣ ಮತ್ತು ಆಕೆ ವೆ೯೦೦ದ ಅಲ್ಲಿಯೆ ಬಿದ್ದಿವೆಯೆಂದು ಹೇಳಲಾಗುತ್ತದೆ. ಕೊಲೆಗಡಕನು ಉಟ್ಟುಕೊಂಡ ರಕ್ತರಂಜಿತ ಧೋತರ ಹಾಗು ಅಂಗಿಗಳೂ ಅಲ್ಲಿಯೇ ಬಿದ್ದವೆಂದು ತಿಳಿಯುತ್ತದೆ. ಈ ಸಂಬಂಧದಲ್ಲಿ ಯಾರಿಗಾದರೂ ಏನಾದರೂ ಗೊತ್ತಿದ್ದರೆ ತಿಳಿಸಬೇಕೆಂದು ಪೋಲೀಸು ಅಧಿಕಾರಿಗಳು ತಿಳಿಸುತ್ತಾರೆ.

ಜನೆವರಿ ಮೊದಲವಾರದಲ್ಲಿ ಹಿರಿಯೋಲಗದ ಅಧ್ಯಕ್ಷರಾದ ಶ್ರೀ ಜಿ ವಿ ಮಾವಳಣಕರರ ಹಿರಿತನದಲ್ಲಿ ಲಿಂಗ್ರಾಜ್ ಕಾಲೇಜಿನ ವಾರ್ಷಿಕ ಸ್ನೇಹ ಸಮ್ಮೇಲನ ನಡೆಯುವದು. ಅದೇ ಕಾಲಕ್ಕೆ ಗಾಂಧೀಜಿ ಭಾವಚಿತ್ರದ ಅನಾವರಣ, ವೆಲನಕರ ಭವನದ ಶಂಕು ಸ್ಥಾಪನೆ, ಕಾಲೇಜ ವಸತಿ ಗೃಹದ ಉದ್ಘಾಟನ ಅವರ ಹಸ್ತದಿಂದ ಜರುಗುವವು.

ಗಾಂಧೀಜಿಯ ಕೊಲೆಯ ನಂತರ ಆದ ಕೊಳ್ಳಿ ಸುಲಿಗೆಗಳಲ್ಲಿ ಚಿಕ್ಕೋಡಿ ತಾಲೂಕಿನ ಕೋಗನೋಳಿ ಗ್ರಾಮದಲ್ಲಿ ಬಹಳ ಹಾನಿಯಾಗಿತ್ತಷ್ಟೆ. ಇವುಗಳ ಪತ್ತೆ ಸ್ವಲ್ಪವೂ ಹತ್ತದ್ದರಿಂದ ಮುಂಬಯಿ ಸರಕಾರದವರು ಕೊನೆಯ ಉಪಾಯವೆಂದು ಆ ಊರಿನ ಮೇಲೆ ೧೦ ಸಾವಿರ ರೂಪಾಯಿ ಸಾಮುದಾಯಿಕ ದಂಡ ಹೇರಿರುತ್ತಾರೆ.

೧೯೪೮ ನೆಯ ಇಸ್ವಿಯ ನಾರಾಯಣರಾವ ಜೋಶಿ ಸಂಸ್ಕೃತ ಪಾರಿತೋಷಕವು ಬೆಳಗಾವಿಯ ಬಿ. ಕೆ ಮಾಡೆಲ್ ಹಾಯಸ್ಕೂಲಿನ ವಿದ್ಯಾರ್ಥಿ ಚಿಂತಾಮಣಿ ಹರಿದಾಸ ಗಾಂವಕರ ಇವರಿಗೆ ಮ್ಯಾಟ್ರಿಕ್ ಪರೀಕ್ಷೆಯ ಸಂಸ್ಕೃತ ವಿಷಯದಲ್ಲಿ ಹೆಚ್ಚಿಗೆ ಗುಣಪಡೆದಿದ್ದರಿಂದ ಕೊಡಲ್ಪಟ್ಟಿತು.

ಕನ್ನಡ ಸಂಸ್ಥಾನ

ಅಮೇರಿಕೆಗೆ ಹೋಗಿ ವೃತ್ತಪತ್ರ ವ್ಯವಸಾಯದಲ್ಲಿ ಪದವಿಯನ್ನು ಸಂಪಾದಿಸಿಕೊಂಡು ಬಂದ ಶ್ರೀ ನಾಡಿಗ ಕೃಷ್ಣಮೂರ್ತಿಯವರಿಗೆ ಝೆಕೊಸ್ಲೊವಾಕಿಯಾ ಮತ್ತು ಭಾರತದ ಸಂಬಂಧಗಳ ಬಗ್ಗೆ ಒಂದು ಪುಸ್ತಕವನ್ನು ಬರೆಯಲು ಝೆಕೊಸ್ಲೊವೊಕಿಯಾ ಸರಕಾರದವರು ವಿದ್ಯಾರ್ಥಿವೇತನ ಕೊಡ ಮಾಡಿ ಝೆಕೊಸ್ಲೊವಾಕಿಯಕ್ಕೆ ಬರಬೇಕೆಂದು ಆಮಂತ್ರಣ ಕೊಟ್ಟಿದ್ದಾರೆ.

ಬೆಂಗಳೂರಿನಲ್ಲಿ ಶ್ರೀ ಎ. ಸುಬ್ಬಣ್ಣಾಚಾರ್ಯರು ಜನ್ಮಭೂಮಿ ಎಂಬ ಕನ್ನಡ ವಾರಪತ್ರಿಕೆಯನ್ನು ಬೇಗನೆ ಹೊರಡಿಸಲಿದ್ದಾರೆ.

ಮಿರಜಿಯ ಪ್ರಸಿದ್ಧ ಮಲ್ಲರಾಗಿದ್ದ ಶ್ರೀ ವೆಂಕಪ್ಪಾ ಬುರಡ ಇವರು ೫೦ ನೆಯ ವಯಸ್ಸಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ರಾತ್ರಿ ವೇಗವಾಗಿ ಮೋಟರ ಲಾರಿಯನ್ನು ಬಿಟ್ಟು ಇಬ್ಬರ ಮರಣಕ್ಕೆ ಕಾರಣರಾದ ಅಪಾದನೆಯ ಮೇಲೆ ಶಿವಮೊಗ್ಗೆಯ ನ್ಯಾಯಾಧೀಶರು ಡಿ. ಆರ್ ನರಸಿಂಹ ಮೂರ್ತಿಯವರಿಗೆ ೧೦೨೦ ರೂಪಾಯಿ ದಂಡ ವಿಧಿಸಲಾಯಿತು.

ಕೊಲ್ಹಾಪುರ ಸಂಸ್ಥಾನದ ವಿಲಯನದ ಸಂಬಂಧದಲ್ಲಿ ಮಾತುಕತೆ ಬಹಳ ದಿನಗಳಾದರೂ ಇನ್ನೂ ಯಾವದೇ ಬಗೆಯ ಇತ್ಯರ್ಥವಾಗದ್ದರಿಂದ ಜನತೆಗೆ ಬಹಳ ಕಳವಳವುಂಟಾಗಿದೆ. ಆದುದರಿಂದ ಸಂಸ್ಥಾನವನ್ನು ಕೂಡಲೆ ಒಕ್ಕೂಟದಲ್ಲಿ ವಿಲಯನಗೊಳಿಸಬೇಕೆಂದು ಕೊಲ್ಹಾಪುರ ಜಿಲ್ಹಾ ಕಾಂಗ್ರೆಸ ಸಮಿತಿಯು ನಿರ್ಣಯಿಸಿತು. ಇದಕ್ಕಾಗಿ ಸಾರ್ವತ್ರಿಕ ಮತಗಣನೆಯ ಸಂಭವವಿದೆ.

ಮೈಸೂರಿನಲ್ಲಿ ಇದೇ ೩೦-೩೧ಕ್ಕೆ ನಡೆಯಲಿರುವ ಅ. ಭಾ. ಶಿಕ್ಷಣ ಪರಿಷತ್ತಿನ ೨೪ ನೇ ಅಧಿವೇಶನದ ಸಿದ್ಧತೆ ಭರದಿಂದ ಸಾಗಿದೆ. ಮೈಸೂರು ಶಿಕ್ಷಣ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯೊಂದು ರಚಿತವಾಗಿದೆ. ಇದರ ಅಂಗವಾಗಿ ಪ್ರದರ್ಶನವೂ ಏರ್ಪಡಲಿದೆ.

ಕೊಲ್ಹಾಪುರ ಮಹಾರಾಜರ ಖಾಸಗಿ ಆಸ್ತಿಯಲ್ಲಿಯ ೨೪೫ ತೊಲೆಯ ಬಂಗಾರದ ಕಟ್ಟಿ ಮತ್ತು ಮೂವತ್ತು ಸಾವಿರ ರೂಪಾಯಿಗಳು ಕಳವಾಗಿ ಹೋಗಿವೆ.

ಕಳ್ಳಪೇಟೆಯ ಲಾಭಬಡಕತನವನ್ನು ನಿರ್ಮೂಲ ಮಾಡಿ ಸಮತೆಯನ್ನು ಜಾರಿಯಲ್ಲಿ ತಂದರೆ ಕೂಲಿಕಾರರು ಸಂಪು ಹೂಡುವ ಗೋಜಿಗೆ ಹೋಗುವದಿಲ್ಲ, ಉತ್ಪಾದನೆ ಹೆಚ್ಚಬೇಕಾದರೆ ಕೂಲಿಕಾರರಿಗೆ ಹೆಚ್ಚು ಹಣ ದೊರೆಯಬೇಕು ಎಂದು ಕೊಲ್ಹಾಪುರದ ರಾಜಾರಾಮ ಕಾಲೇಜಿನಲ್ಲಿ ಶ್ರೀ ಅಚ್ಯುತ ಪಟವರ್ಧನರು ಹೇಳಿದರು.

ಹಿಂದುಸ್ತಾನದ ಐಕ್ಯಕ್ಕೆ ಭಂಗ ತರದಂತೆ ನೋಡಿರಿ
ದೇಶವನ್ನು ಭದ್ರಪಡಿಸಿರಿ
ನ್ಯಾಯಮೂರ್ತಿ ಚಗಲಾ ಇವರ ಕೋರಿಕೆ

ಮುಂಬಯಿ ಹಾಯಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಶ್ರೀ ಎಂ. ಸಿ. ಚಗಲಾ ಇವರು ಇತ್ತೀಚೆಗಷ್ಟೆ ಉತ್ತರ ಕನ್ನಡ ಮತ್ತು ಧಾರವಾಡ ಜಿಲ್ಹೆಗಳಲ್ಲಿ ಸಂಚರಿಸಿದರು. ಕೋರ್ಟುಗಳ ತಪಾಸಣೆ ನಡೆಸಿದ್ದಲ್ಲದೆ ನಗರ ಸಭೆಗಳು, ವಕೀಲ ಸಂಘದವರು,



ಮುಖ್ಯ ನ್ಯಾಯ ಮೂರ್ತಿ ಚಗಲಾ

ವಣಿಕ್ ಸಂಘದವರು ಕೊಟ್ಟ ಮಾನಪತ್ರಗಳನ್ನು ಸ್ವೀಕರಿಸಿ ಅವುಗಳಲ್ಲಿ ಕೇಳಿಕೊಂಡ ಬೇಡಿಕೆಗಳಿಗೆ ತಮ್ಮ ನಿರ್ದಾಕ್ಷಿಣ್ಯವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಕಾರವಾರ, ಧಾರವಾಡ, ಹುಬ್ಬಳ್ಳಿ ನಗರ ಸಭೆಗಳು ಅವರಿಗೆ ಮಾನಪತ್ರಕೊಟ್ಟು ಗೌರವಿಸಿದವು. ಕರ್ನಾಟಕಕ್ಕೆ ನ್ಯಾಯಮೂರ್ತಿಗಳು ಬಂದದ್ದು ಇದೇ ಮೊದಲ ಸಲ. ಇಲ್ಲಿಯ ನೈಸರ್ಗಿಕ ದೃಶ್ಯ, ಸಾಂಸ್ಕೃತಿಕ ಅವಶೇಷಗಳಾದ ವಿವಿಧ ಕಲೆಗಳು ಜನತೆಯ ರೀತಿನೀತಿ ಮುಂತಾದವುಗಳನ್ನು ನೋಡಿ ತಮಗೆ ಅತೀವ ಸಂತೋಷವಾಗಿದೆಯೆಂದು ಅವರು ಹೇಳಿದರು. ವಿಶೇಷತಃ ಕಾರವಾರದಲ್ಲಿಯ ನಿಸರ್ಗ ರಮಣೀಯತೆ ಧಾರವಾಡದಲ್ಲಿಯ ಶೈಕ್ಷಣಿಕ ಚಟುವಟಿಕೆಗಳು ಮತ್ತು ಹುಬ್ಬಳ್ಳಿಯಲ್ಲಿಯ [illegible] ಮತ್ತು ವ್ಯಾಪಾರದ [illegible] ಮುಖ್ಯ [illegible] [illegible] ಅವರು ಅಭಿಪ್ರಾಯ [illegible] ಧಾರವಾಡದಲ್ಲಿ [illegible] [illegible] ಪಟ್ಟರು.

ಹುಬ್ಬಳ್ಳಿ ನಗರಸಭೆಯು ಮುಂದೆ ಮಾಡಿದ ಬೇಡಿಕೆಗಳಿಗೆ ಈ ರೀತಿ ಉತ್ತರವಿತ್ತರು. ನೈಸರ್ಗಿಕ ಸಂಪತ್ತು, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ವ್ಯಾಪಾರ ಉದ್ಯಮಗಳಿಂದ ಕರ್ನಾಟಕಕ್ಕೆ [illegible] ದೇಶವನ್ನು [illegible] ನಮ್ಮ ಸ್ವಾತಂತ್ರ್ಯದ [illegible] ಮಹಾತ್ಮಾ ಗಾಂಧಿಯವರ ನಿಧನದಿಂದ ನಮಗೆ ಅತ್ಯಂತ ದುಃಖವಾಗಿದೆ. ಅದರ [illegible] ಮಾಡುತ್ತ [illegible] ಅವರು ಸಂಪಾದಿಸಿ ಕೊಟ್ಟ ಸ್ವಾತಂತ್ರ್ಯವನ್ನು ಭದ್ರಪಡಿಸಲು, ಹಿಂದುಸ್ಥಾನದಲ್ಲಿ ಐಕ್ಯವನ್ನು ಸ್ಥಾಪಿಸಲು ನಾವು ಹೆಣಗತಕ್ಕದ್ದು. ಇದೇ ಅವರ ಸಂದೇಶ. ಸಂಯುಕ್ತ ಮತದಾನ ಕ್ಷೇತ್ರಗಳು ದೇಶಕ್ಕೆ ಅತ್ಯಂತ ಹಿತಕಾರಕವಾದವುಗಳು. ಎಂದಿನಿಂದಲೂ ನಾನು ಈ ಬಗೆಯ ಅಭಿಪ್ರಾಯ ಪಡುತ್ತಿರುವೆನು. ಆ ಸಂಯುಕ್ತ ಮತದಾನ ಪದ್ಧತಿಯಲ್ಲಿ ಮೊದಲು ಚುನಾವಣೆ ನಡೆಸಿದವರೆಂದರೆ ಪ್ರಾಂತದಲ್ಲಿ ನೀವು ಮುನಸಿಪಾಲಟಿಯವರು. ಅದಕ್ಕಾಗಿ ನಿಮ್ಮನ್ನು ಅಭಿನಂದಿಸುವೆ. ಇದರ ಸಿಹಿ ಫಲಗಳನ್ನು ನೀವು ಕಾಲಾಂತರದಲ್ಲಿ ಅನುಭವಿಸುವಿರಿ. ದೇಶಕ್ಕೆ ನಿಷ್ಠರಾಗಿ ನಡೆಯುವದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ. ವ್ಯಾಪಾರೋದ್ಯಮಗಳ ಜೊತೆ ನೀವು ಶೈಕ್ಷಣಿಕ ಚಟುವಟಿಕೆಗಳನ್ನೂ ನಡೆಸುತ್ತಿರುವದು ಸಂತೋಷದ ಸಂಗತಿ. ಇಲ್ಲಿಯ ವ್ಯಾಪಾರೀ ವರ್ಗದವರು ಶೈಕ್ಷಣಿಕ ಚಟುವಟಿಕೆಗಳಿಗೆ ತುಂಬ ಧನಸಹಾಯ ಮಾಡುವರೆಂದು ನಂಬುತ್ತೇನೆ. ಪ್ರಾಂತೀಕರಣದ ಬೇಡಿಕೆಗೆ ನನ್ನ ಭಿನ್ನಾಭಿಪ್ರಾಯವಿದ್ದರೂ ನೀವೆಲ್ಲ ಸ್ವತಂತ್ರ ಪ್ರಾಂತಕ್ಕಾಗಿ ಅತ್ಯಂತ ಆತುರರಾಗಿದ್ದುದು ನನಗೆ ಗೊತ್ತಿದ್ದರೂ ಅದನ್ನು ನಾನು ಹೇಳಲೇಬೇಕಾಗುವದು. ಹಿಂದುಸ್ಥಾನದ ಐಕ್ಯಕ್ಕೆ ಬಾಧೆ ಬರದಂತೆ ನಡೆಯುವದು ಅವಶ್ಯವಾಗಿದೆ. ವೈವಿಧ್ಯದಲ್ಲಿಯೇ ಏಕತೆಯನ್ನು ಕಾಯುವದವಶ್ಯ. ಮುಂಬಯಿ ಪ್ರಾಂತದಲ್ಲಿ ಗುಜರಾಥಿ, ಮರಾಠಿ, ಕನ್ನಡ ಹೀಗೆ ಭಾಷಾವೈವಿಧ್ಯವಿದ್ದುದರಿಂದಲೆ ಅದು ಶ್ರೇಷ್ಠ ಮತ್ತು ದೇಶದಲ್ಲೆಲ್ಲ ಪ್ರಮುಖ ಪ್ರಾಂತವಾಗಿದೆ. ಆದುದರಿಂದ ಕರ್ನಾಟಕದ ಕಲೆ, ಸಂಸ್ಕೃತಿ, ಪರಂಪರೆಯನ್ನು ಬಿಟ್ಟುಗೊಡದೆ ಅದನ್ನು ಎಲ್ಲ ಬಗೆಯಿಂದ ಅಭಿವೃದ್ಧಿಪಡಿಸಿಕೊಂಡು, ಇಡೀ ರಾಷ್ಟ್ರದ ಐಕ್ಯಕ್ಕಾಗಿ ಭದ್ರತೆಗಾಗಿ, ಪ್ರಯತ್ನಿಸಿರಿ ಎಂದು ಹೇಳಬಲ್ಲೆ. ಗಾಂಧೀಜಿಯ ಸಂದೇಶವೂ ಇದೇ ಆಗಿತ್ತು. ಕಾರ್ಯನಿರ್ವಹಣ ಶಾಖೆ ಮತ್ತು ನ್ಯಾಯಾಂಗಶಾಖೆ ಬೇರೆಯಾಗಿರುವದು ಅವಶ್ಯ. ಕಾರ್ಯನಿರ್ವಹಣಶಾಖೆಗೆ ಸಂಬಂಧವಿಲ್ಲದ ಸ್ವತಂತ್ರವಾದ ನ್ಯಾಯಶಾಖೆ ಇರಬೇಕಾದುದು ಅಗತ್ಯ. ಪ್ರಜಾಪ್ರಭುತ್ವದಲ್ಲಿ ವಿಶೇಷತಃ ಅಷ್ಟೊಂದು ಬಲಿಷ್ಠ ವಿರೋಧಿ ಪಕ್ಷವಿಲ್ಲದ ಸದ್ಯದಂಥ ಸಮಯದಲ್ಲಿ ನ್ಯಾಯಾಲಯಗಳೇ ಪ್ರಜೆಗಳ ಹಕ್ಕು ಬಾಧ್ಯತೆಗಳ ಮುಖ್ಯ ರಕ್ಷಕ. ಕಾರ್ಯ ನಿರ್ವಹಣ ಶಾಖೆ ಮತ್ತು ನ್ಯಾಯಾಂಗ ಶಾಖೆಯನ್ನು ಬೇರ್ಪಡಿಸುವ ಸಂಬಂಧದಲ್ಲಿಯ ಲೋಕೂರ ಸಮಿತಿಯ ವರದಿ ಹೊರಬಿದ್ದಿದೆ. ಶಾಸನ ಸಭೆಗಳಲ್ಲಿಯ ಸದಸ್ಯರು ಮುಂದಾಗಿ ಅದು ಬೇಗ ಕಾರ್ಯರೂಪದಲ್ಲಿ ಬರುವಂತೆ ಹೆಣಗಬೇಕು. ಜನತೆಯ ವಿತ್ತ ಮತ್ತು ಜೀವಿತಗಳ ರಕ್ಷಣೆಯ ಹೊಣೆ ನ್ಯಾಯಾಲಯಗಳ ಮೇಲೆ ಇರತಕ್ಕದ್ದು. ಸೀನಿಯರ ಕೋರ್ಟಿನ ಸಂಬಂಧದಲ್ಲಿ ಹುಬ್ಬಳ್ಳಿ, ಧಾರವಾಡಗಳಲ್ಲಿದ್ದ ಸ್ಪರ್ಧಾಭಾವವನ್ನು ಪರಸ್ಪರ [illegible] ಮಾಡಿಕೊಳ್ಳಬೇಕು. ನಡೆಯುತ್ತಿರುವ ನೀವು ಪರಸ್ಪರ ವಿಚಾರ ವಿನಿಮಯದಿಂದ ಈ ಪ್ರಶ್ನೆ ಬಗೆಹರಿಸಿಕೊಳ್ಳಬೇಕು ಎಂದು ಮುಂತಾಗಿ ಹೇಳಿದರು. ಮಧ್ಯಾಹ್ನ ೩ ಗಂಟೆಗೆ ವಕೀಲ ಸಂಘದವರ ಕರ್ನಾಟಕ ವಣಿಕ ಸಂಘದವರ ಬೇಡಿಕೆಗಳಿಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ೯ ನೇ ತಾರೀಕಿನ ದಿವಸ ಧಾರವಾಡದಲ್ಲಿ ವಕೀಲ ಪರಿಷತ್ತಿನ ಪ್ರಾರಂಭೋತ್ಸವ ಜರುಗಿಸಿದರು.

ಹಿಂದುಸ್ತಾನ

ಮುಂಬಯಿ

ಕಾಂಗ್ರೆಸ ಅಧಿವೇಶನಕ್ಕಾಗಿ ಗಾಂಧಿನಗರಕ್ಕೆ ಇರಲಿರುವ ಅಪಾರ ಜನ ಸಮ್ಮರ್ದವನ್ನು ಸುವ್ಯವಸ್ಥಿತವಾಗಿ ಸಾಗಿಸುವದಕ್ಕೆ ತಕ್ಕ ಏರ್ಪಾಡನ್ನು ಒಳ್ಳೆ ಅರಿಕ್ರಮದಿಂದ ಮಾಡಲಾಗುತ್ತಿದೆಯೆಂದು ಬಿ. ಬಿ. ಸಿ.ಆಯ್. ರೇಲ್ವೆ ಮತ್ತು ಜಿ. ಆಯ್.ಪಿ.ರೇಲ್ವೆಯ ಸಾರ್ವಜನಿಕ ಸಂಪರ್ಕಾಧಿಕಾರಿಗಳು ಒಂದು ಪ್ರಕಟನೆಯನ್ನು ಹೊರಡಿಸಿದ್ದಾರೆ.

ಲಾಹೋರದಲ್ಲಿ ಹೊರಡುವ ''ಸಿವಿಲ ಆ್ಯಂಡ ಮಿಲಿಟರಿ ಗ್ಯಾಝೆಟ್'' ಎಂಬ ಇಂಗ್ಲೀಷ ದೈನಿಕ ಪತ್ರಿಕೆಯು ಮುಂಬಯಿ ಪ್ರಾಂತದಲ್ಲಿ ಬರಕೂಡದೆಂದು ಮುಂಬಯಿ ಸರಕಾರವು ನಿರ್ಬಂಧ ಹಾಕಿದೆ.

ಇದೇ ಡಿಸೆಂಬರ ತಾ ೧ ರಿಂದ ಲಾಟರಿ ಮತ್ತು ಸ್ಪರ್ಧೆ ಬಹುಮಾನಗಳ ನಿಯಂತ್ರಣ ಕಾನೂನು ಜಾರಿಯಲ್ಲಿ ಬಂದಿದೆ. ಲಾಯಸೆನ್ಸ ಪಡೆಯದಿರುವ ಎಲ್ಲ ಲಾಟರಿ, ಸ್ಪರ್ಧೆ ಬಹುಮಾನಗಳು ಅಕ್ರಮವೆಂದು ಸಾರಲಾಗಿದ್ದು ಅವುಗಳ ಪ್ರಚಾರದಲ್ಲಿ ತೊಡಗಿದವರಿಗೆ ಶಿಕ್ಷೆ ವಿಧಿಸಲಾಗುವದು.

ಸುರತದಲ್ಲಿ ಓರ್ವ ನಾಗರಿಕನು ಆಹಾರ ನಿಯಂತ್ರಣಾಜ್ಞೆಯನ್ನು ಉಲ್ಲಂಘಿಸಿ ೨೪ ಜನರಿಗಿಂತ ಹೆಚ್ಚು ಜನರಿಗೆ ಭೋಜನಕ್ಕೆ ಹಾಕಿದ ಅಪರಾಧಕ್ಕಾಗಿ ಅವನಿಗೆ ೧ ಸಾವಿರ ರೂಪಾಯಿ ದಂಡ ಹಾಗೂ ಒಂದು ದಿನ ಸಶ್ರಮ ಶಿಕ್ಷೆ ವಿಧಿಸಲಾಯಿತು.

ರಾಷ್ಟ್ರೀಯ ರೇಲ್ವೆ ಕೆಲಸಗಾರರ ಮಹಾಮಂಡಲದ ಸರ್ವಸದಸ್ಯರ ಸಭೆಯಲ್ಲಿ ರೇಲ್ವೆ ಕೆಲಸಗಾರರು ಸಂಪು ಹೂಡುವ ವಿಚಾರ ಮಾಡಕೂಡದೆಂದೂ ಅದು ರಾಷ್ಟ್ರಘಾತಕವೆಂದೂ ಅಭಿಪ್ರಾಯ ಪಡಲಾಯಿತು.

ಸರಕಾರದವರು ವನಸ್ಪತಿ ತುಪ್ಪದ ಬೆಲೆಯನ್ನು ಮುಂಬಯಿ ನಗರದಲ್ಲಿ ಪೌಂಡಿಗೆ ಎರಡು ಬಿಲ್ಲಿ ಮತ್ತು ಇತರ ಸ್ಥಳಗಳಲ್ಲಿ ಮೂರು ಬಿಲ್ಲಿ ಏರಿಸಿರುವರು. ಅದರಂತೆ ಹತ್ತು ಪೌಂಡಿನ ಡಬ್ಬಿಗಳ ಬೆಲೆಯನ್ನು ಆರಾಣೆಯಷ್ಟು ಇಳಿಸಿರುವರು.

ದೊಡ್ಡ ನೀರಾವರಿ ಯೋಜನೆಗಳನ್ನು ಆರ್ಥಿಕ ದೃಷ್ಟಿಯಿಂದ ಸ್ವಾವಲಂಬಿಯಾಗಿ ಮಾಡಲು ಮತ್ತು ಹೊಸ ನೀರಾವರಿಯ ಯೋಜನೆಗಳಿಗೆ ನಿಧಿ ಕೂಡಿಸಲು ಮಂತ್ರಿಮಂಡಲದ ಉಪಸಮಿತಿಯು ಭೂಸುಧಾರಣಾ ಕರ, ನೀರಾವರಿಕರ, ಇವೇ ಮೊದಲಾದ ಕರ ಹೇರಲು ಶಿಫಾರಸು ಮಾಡಿದೆ.

ಮುಂಬಯಿ ಧಕ್ಕೆಯ ೧೫ ಸಾವಿರ ಕೆಲಸಗಾರರು ತಾ೭ರ ಮುಂಜಾವಿನಿಂದ ಸಂಪು ಪ್ರಾರಂಭಿಸಿರುವರು. ಇವರ ಸಂಘದ ಕಾರ್ಯದರ್ಶಿ, ಸಹಕಾರ್ಯದರ್ಶಿ ಮತ್ತು ಸಂಘದ ಐವರು ಸದಸ್ಯರನ್ನು ತಾ. ೬ ರ ಸಂಜೆಗೆ ಸಾರ್ವಜನಿಕ ಭದ್ರತಾ ಕಾಯದೆಯನ್ವಯ ಬಂಧಿಸಿದ್ದೇ ಈ ಆಕಸ್ಮಿಕ ಸಂಪಿನ ಕಾರಣವಾಗಿದೆ. ಧಕ್ಕೆಯಲ್ಲಿ ಸಶಸ್ತ್ರ ಪೋಲೀಸರ ಕಾವಲಿದ್ದು ಅಲ್ಲಿಯ ಕಾರ್ಯವು ಸ್ಥಗಿತವಾಗಿದೆ.

ಮಧ್ಯಪ್ರಾಂತ

ನಾಗಪೂರ ಮಾಡೆಲ ಮಿಲ್ಸದ ವ್ಯವಸ್ಥಾಪಕ ವರ್ಗದವರು, ಗಿರಣಿಯ ೩೭೦೦ ಕೆಲಸಗಾರರಿಗೆ, ೧೯೪೯ ನೆಯ ಜಾನೇವರಿ ೧ ರ ವರೆಗಿನ ಅವಧಿಯಲ್ಲಿ ಸಾಕಷ್ಟು ಹತ್ತಿಯ ಸಂಗ್ರಹದೊರೆಯದಿದ್ದರೆ ಅಂದಿನಿಂದ ಗಿರಣಿಯನ್ನು ಮುಚ್ಚುವದಾಗಿ ನೋಟೀಸು ಕೊಟ್ಟಿದ್ದಾರೆ.

ಸಂಯುಕ್ತಪ್ರಾಂತ

ಭಾರತದ ಗ. ಜ. ರಾದ ಶ್ರೀ ರಾಜಗೋಪಾಲಾಚಾರ್ಯರು ಬನಾರಸ ಹಿಂದು ವಿಶ್ವವಿದ್ಯಾಲಯದ ಪದವಿದಾನ ಸಮಾರಂಭದಲ್ಲಿ ತಾ. ೨ ರಂದು ಭಾಷಣ ಮಾಡುತ್ತ ಈಗ ನಮ್ಮ ರಾಜ್ಯಭಾರವೆ ಇದ್ದುದರಿಂದ ವಿದ್ಯಾರ್ಥಿಗಳು ಶಾಸನವನ್ನು ಉಲ್ಲಂಘಿಸುವ ಚಟವನ್ನು ಬಿಟ್ಟು ರಾಷ್ಟ್ರದ ಬಗ್ಗೆ ಗೌರವ ಭಾವ ತಳೆದು ಪ್ರಜಾ ಪ್ರಭುತ್ವದಲ್ಲಿ ಸಂಪೂರ್ಣ ನಂಬಿಗೆ ಇಡಬೇಕು ಎಂದು ಮೊದಲಾಗಿ ಉಪದೇಶಿಸಿದರು.

ಕಾಶಿಯ ಸ್ಥಾನಿಕ ಅನಾಥ ಬಾಲಕಾಶ್ರಮದ ಶಂಕುಸ್ಥಾಪನೆ ಮಾಡುತ್ತ ತಾ ೨ ರಂದು ಗ.ಜ. ರಾಜಾಜಿಯವರು ಅನಾಥ ಮಕ್ಕಳು ಯಾವ ಜಾತಿಯವರಿದ್ದರೂ ಅವರು ನನ್ನ ಮಕ್ಕಳು ಎಂದು ಒದರುಡಿದರು.

ಹೈದರಾಬಾದ

ಹಿಂದುಸ್ಥಾನ ಸರಕಾರದ ಕರೆಯ ಮೇರೆಗೆ ದಿಲ್ಲಿಯಿಂದ ನಾಲ್ವರ ಸದಿಚ್ಛಾಸಮಿತಿಯೊಂದು ಹೈದರಾಬಾದಕ್ಕೆ ತೆರಳಿದ್ದು ಈ ಸಮಿತಿಯು ಹೈದರಾಬಾದದಲ್ಲಿ ಜಾತೀಯ ಸೌಹಾರ್ದವನ್ನೂ ಶಾಂತಿಯನ್ನೂ ಪ್ರಸ್ಥಾಪಿಸಲು ಸಂಸ್ಥಾನದ ಎಲ್ಲ ಹಳ್ಳಿಗಳಲ್ಲಿಯೂ ಸಂಚರಿಸುವದು. ಈ ನಾಲ್ವರಲ್ಲಿ ಮೂವರು ಮುಸಲ್ಮಾನರಿದ್ದಾರೆ.

ರಜಾಕಾರರ ಮುಖಂಡನಾದ ಕಾಶೀಮ ರಜವಿಯ ವಿಚಾರಣೆಯು ಹೈದರಾಬಾದ ಸಂಸ್ಥಾನದಲ್ಲಿಯೇ ನಡೆಯುವದೆಂದೂ ದಿಲ್ಲಿಯ ಕೆಂಪುಕೋಟೆಯಲ್ಲಿ ನಡೆಯುವದೆಂದು ಹಬ್ಬಿದ ಸುದ್ದಿ ನಿರಾಧಾರವೆಂದೂ ವಿಶ್ವಸನೀಯವಾಗಿ ತಿಳಿದು ಬರುತ್ತದೆ. ಇವನ ವಿಚಾರಣೆಯು ಮಿಲಿಟರಿ ನ್ಯಾಯಾಲಯದಲ್ಲಿ ನಡೆಯಬೇಕೊ ಇಲ್ಲವೆ ನಾಗರೀಕ ನ್ಯಾಯಾಲಯದಲ್ಲಿಯೊ ಎಂಬುದನ್ನು ಹೈದರಾಬಾದ ಮಿಲಿಟರಿ ಸರಕಾರವು ಇನ್ನೂ ನಿರ್ಧರಿಸಿಲ್ಲ.

ಹೈದರಾಬಾದ ಸಂಸ್ಥಾನದಲ್ಲಿ ನಡೆದ ಕೊಲೆ ಸುಲಿಗೆ ಕೊಳ್ಳೆ ಮೊದಲಾದವುಗಳ ಬಗ್ಗೆ ವಿಚಾರಣೆ ನಡೆಸಲು ಮಿಲಿಟರಿ ಸರಕಾರವು ನಿಯಮಿಸಿದ ವಿಚಾರಣಾ ಸಮಿತಿಯ ಎದುರಿಗೆ ಹೆಚ್ಚು ಹೆಚ್ಚು ಪ್ರಕರಣಗಳು ಬರಲು ಬರಹತ್ತಿದ್ದರಿಂದ ಫೆಬ್ರುವರಿ ಕೊನೆಯವರೆಗೆ ವಿಚಾರಣೆಯ ಅವಧಿಯನ್ನು ಹೆಚ್ಚಿಸಲಾಗಿದೆಯೆಂದು ಪ್ರಕಟನೆ ಹೊರಟಿದೆ.

ತಾ. ೩೦ ರಂದು ಹೈದರಾಬಾದದಲ್ಲಿ ಸೇರಿದ ಹೈ. ಸಂ. ಕಾಂಗ್ರೆಸ ಸಮಿತಿಯ ಅಧಿವೇಶನ ನಡೆದಾಗ ೬೪ ಸದಸ್ಯರು ಸಭಾತ್ಯಾಗ ಮಾಡಿದರು ಈ ಸಭೆಯು ಘಟನಾಬದ್ಧವಾಗಿಲ್ಲವೆಂದು ಶ್ರೀ ಹೇಡಾರವರು ಅಭಿಪ್ರಾಯಪಟ್ಟು ವಿಧಿಬಿಂದುವೆತ್ತಲು ಪ್ರಯತ್ನಿಸಿದ್ದಕ್ಕೆ ಸಭಾಧ್ಯಕ್ಷರಾದ ಸ್ವಾಮಿ ರಮಾನಂದತೀರ್ಥರು ಅವಕಾಶವೀಯಲಿಲ್ಲ ಮತ್ತು ಈ ಸಭೆ ಘಟನಾಬದ್ಧವೆಂದು ಒಪ್ಪದವರು ಈ ಸಭೆಯಲ್ಲಿ ಭಾಗವಹಿಸುವ ಅಗತ್ಯವಿಲ್ಲವೆಂದು ಅಧ್ಯಕ್ಷರು ಹೇಳಲು ಶ್ರೀ ಹೇಡಾರವರು ಇನ್ನುಳಿದ ೬೩ ಸದಸ್ಯರೊಡನೆ ಸಭಾತ್ಯಾಗ ಮಾಡಿದರು.

ಪಶ್ಚಿಮ ಬಂಗಾಲ

ಕಲಕತ್ತಾ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಕೈಲಾಸನಾಥ ಕಟಜು ಅವರು ಗ. ಜ. ಚಕ್ರವರ್ತಿ ರಾಜಗೋಪಾಲಾಚಾರ್ಯರಿಗೆ ''ಡಾಕ್ಟರ ಆಫ ಲಾ'' ಎಂಬ ಪದವಿಯನ್ನು ತಾ ೩೦ ರಂದು ವಿಶೇಷ ಸಮಾರಂಭದಲ್ಲಿ ಅರ್ಪಿಸಿದರು. ಈ ಸಮಾರಂಭಕ್ಕೆ ಡಾ. ಶ್ಯಾಮ ಪ್ರಸಾದ ಮುಕರ್ಜಿ ಪ. ಬಂಗಾಲ ಶಾಸನ ಸಭೆಯ ಅಧ್ಯಕ್ಷರಾದ ಶ್ರೀ ಜಾಲನ, ಪ್ರಾಂತಿಕ ಮಂತ್ರಿಗಳು, ಶ್ರೀ ಸಂತೋಷಕುಮಾರ ಬಸು ಮೊದಲಾದ ಪ್ರಮುಖರು ಆಗಮಿಸಿದ್ದರು ಈ ಗೌರವಕ್ಕೆ ಕೃತಜ್ಞತೆ ವ್ಯಕ್ತಪಡಿಸುತ್ತ ಗ. ಜ. ರಾಜಾಜಿಯವರು, ಹಿಂದುಸ್ತಾನದ ಪ್ರಥಮ ವಿಶ್ವವಿದ್ಯಾಲಯವು ನನಗೆ ''ಧರ್ಮಪ್ರವೀಣ'' ನೆಂಬ ಪದವಿಯನ್ನು ಕೊಡಲು ನನ್ನಲ್ಲಿ ಅರ್ಹತೆಯನ್ನು ಕಂಡು ಹಿಡಿವವರೆಗೂ ನಾನು ಜೀವಿಸಿದ್ದಕ್ಕಾಗಿ ದೇವರಿಗೆ ಋಣಿಯಾಗಿದ್ದೇನೆ ಎಂದು ಮೊದಲಾಗಿ ಉದ್ಗಾರ ತೆಗೆದರು.

ಬಿಹಾರ

ತಾ ೫ ಕ್ಕೆ ಪಾಟಣಾ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭ ನೆರವೇರಿತು. ಸುಮಾರು ೮೦೦ ವಿದ್ಯಾರ್ಥಿಗಳಿಗೆ ಪದವೀದಾನ ಮಾಡಲಾಯಿತು. ತಾ ೬ ರಂದು ಸಂಯುಕ್ತ ಪ್ರಾಂತದ ಗವರ್ನರರಾದ ಶ್ರೀಮತಿ ಸರೋಜನಿ ನಾಯಡುರವರಿಗೆ "ಡಾಕ್ಟರ ಆಫ್ ಲಿಟರೇಚರ" ಎಂಬ ಪದವಿಯನ್ನು ಅರ್ಪಿಸಲಾಯಿತು.

ಮದ್ರಾಸ

ನವೆಂಬರ ತಾ ೨೧ ಕ್ಕೆ ಮದ್ರಾಸದ ಭಾರತೀ ಭುವನದಲ್ಲಿ ಕರ್ನಾಟಕ ಸೇವಾಸಂಘದ ಪರವಾಗಿ ಪ್ರಸಿದ್ಧ ಲಾವಣಿಕಾರರಾದ ಮೈಸೂರಿನ ಎಸ್ ವಿಷಕಂಠರಾವು ಬೆಂಗಳೂರಿನ ಶ್ರೀ ನೀಲಕಂಠಸ್ ಹಾಗು ಜೊತೆಗಾರ ಸುಶ್ರಾವ್ಯ ಲಾವಣಿಗಳಾದವು. ಶ್ರೀ. ಶಂ. ಬಾ. ಜೋಶಿಯವರು ಅಧ್ಯಕ್ಷತೆ ವಹಿಸಿದ್ದರು.

ಮದ್ರಾಸ ಪ್ರಾಂತಕ್ಕೆ ದೊರೆಯುತ್ತಿರುವ ಬಟ್ಟೆಯ ಪ್ರಮಾಣವನ್ನು ಡಿಸೆಂಬರ ತಿಂಗಳಿಂದ ಹೆಚ್ಚಿಸಲಾಗಿದೆಯೆಂದು ಒಂದು ಅಧಿಕೃತ ಪ್ರಕಟನೆ ಹೊರಟಿದೆ.

ಹೊಸದಿಲ್ಲಿ

ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೇಲೆ ಹಾಕಿದ ನಿರ್ಬಂಧವನ್ನು ತೆಗೆಯಲು ಸರಕಾರದವರು ನಿರಾಕರಿಸಿದ್ದರಿಂದ ಆರ್. ಎಸ್. ಎಸ್. ದವರು ಇದೇ ಡಿಸೆಂಬರ ೧೧ ನೆಯ ತಾ. ನಿಂದ ದೇಶದಾದ್ಯಂತ ಸತ್ಯಾಗ್ರಹ ಹೂಡಲು ನಿರ್ಧರಿಸಿದ್ದಾರೆಂದು ತಿಳಿಯುತ್ತದೆ.

ಡಾ. ಎಸ್. ರಾಧಾಕೃಷ್ಣನ್ನರು ಯುಕ್ತ ರಾಷ್ಟ್ರ ಸಂಘ ಶೈಕ್ಷಣಿಕ- ವೈಜ್ಞಾನಿಕ-ಸಾಮಾಜಿಕ ಸಂಸ್ಥೆಯ ಕಾರ್ಯಕಾರಿ ಮಂಡಲದ ಅಧ್ಯಕ್ಷರೆಂದು ಆರಿಸಲ್ಪಟ್ಟಿರುವರು.

ಮುಖ್ಯ ಮಂತ್ರಿ ಪಂ. ಜವಾಹರಲಾಲರು ತಾ. ೨ರಂದು ದಿಲ್ಲಿಯಲ್ಲಿ ಕಾಶ್ಮೀರದ ಯುದ್ಧ ಚಿತ್ರಗಳ ಪ್ರದರ್ಶನವನ್ನು ಉದ್ಘಾಟಿಸಿದರು. ಈ ಪ್ರದರ್ಶನದಲ್ಲಿ ೬೩ ಚಿತ್ರಗಳಿದ್ದು ಶ್ರೀ ಕನವಾಲ ಕೃಷ್ಣ ಎಂಬವರು ಅವನ್ನು ಚಿತ್ರಿಸಿರುವರು.

ಸಕ್ಕರೆಯ ಬೆಲೆಯನ್ನು ಮಣಕ್ಕೆ ೨೮॥ ರೂ.ಗೆ ಇಳಿಸತಕ್ಕದ್ದೆಂದು ಸರಕಾರದವರು ನಿರ್ಧರಿಸಿದ್ದಾರೆ. ಈ ಪ್ರಕಾರ ೧ ಪೌಂಡು ಸಕ್ಕರೆಯ ಕಿರುಕುಳ ಬೆಲೆಯು ೬ರಿಂದ ೬॥ ಆಣೆಯಾಗುವದು.

ಕಾಂಗ್ರೆಸಿನಿಂದ ಸಿಡಿದು ಹೋದ ಕೆಲವರು ಶ್ರೀ. ಎಂ. ಎನ್. ರಾಯರ ಧುರೀಣತ್ವದಲ್ಲಿ ೯ ವರ್ಷಗಳ ಹಿಂದೆ ಪ್ರಾರಂಭಿಸಿದ ರ್‍ಯಾಡಿಕಲ್ ಡೆಮೊಕ್ರೆಟಿಕ್ ಪಕ್ಷವನ್ನು, ಹೋದ ತಿಂಗಳ ಕೊನೆಗೆ ಡೆಹರಾಡೂನದಲ್ಲಿ ಸೇರಿದ ಸಭೆಯಲ್ಲಿ ವಿಸರ್ಜಿಸಬೇಕೆಂದು ನಿರ್ಧರಿಸಲಾಯಿತು. ಈ ಪಕ್ಷವು ಇನ್ನು ಮುಂದೆ ಸಾಮಾಜಿಕ – ರಾಜಕೀಯ ಸಂಸ್ಥೆಯ ಸ್ವರೂಪದಲ್ಲಿ ''ನವಮಾನವತೆ'' ಎಂಬ ತತ್ವವನ್ನು ಪ್ರಚಾರಗೊಳಿಸುವದೆಂದು ತಿಳಿಯುತ್ತದೆ.

ಸೇಠ ರಾಮ ಕೃಷ್ಣ ದಾಲ್ಮಿಯಾ ಅವರು ಒಂದು ಪ್ರಕಟನೆ ಹೊರಡಿಸಿ ಆಹಾರ ಧಾನ್ಯಗಳ ಬೆಲೆಯ ಏರುವಿಕೆಯನ್ನು ಸರಕಾರವು ತಡೆಯಬೇಕೆಂದೂ ಅವಶ್ಯ ವಸ್ತುಗಳಿಗೆ ಸರಕಾರವು ಧನ ಸಹಾಯ ನೀಡಿ ಕಡಮೆ ಬೆಲೆಗೆ ಮಾರುವ ಏರ್ಪಾಡು ಮಾಡಬೇಕೆಂದೂ ಸೂಚಿಸಿದ್ದಾರೆ. ಜನರಾದರೂ ಒಂದೇ ಒಂದು ತುತ್ತು ಕಡಮೆಯುಂಡು ವಿದೇಶದಿಂದ ತರಬೇಕಾದ ಆಹಾರ ಧಾನ್ಯದ ಪ್ರಮಾಣವನ್ನು ಬಹುಮಟ್ಟಿಗೆ ತಗ್ಗಿಸಬಹುದಾಗಿದೆ ಎಂದು ಮೊದಲಾಗಿಹೇಳಿದ್ದಾರೆ.

ಭಾರತದ ಗ. ಜ. ಶ್ರೀ ರಾಜಗೋಪಾಲಾಚಾರ್ಯರಿಗೆ ಸಯಾಮದ ಪ್ರತಿನಿಧಿ ಡಾ. ಥಂತ ಖೋನಾನರು ತಾ ೪ರಂದು ಒಂದು ಪಾತ್ರೆಯ ತುಂಬ ಅಕ್ಕಿಯನ್ನು ಸಯಾಮದ ಸ್ನೇಹದ ಪ್ರತೀಕವಿದೆಂದು ಹೇಳಿ ಕಾಣಿಕೆ ಕೊಟ್ಟರು. ಈ ಸಮಾರಂಭವು ಸರಕಾರಿ ಭವನದಲ್ಲಿ ನಡೆದಿತು.

ಬ್ರಹ್ಮದೇಶದ ನಾಗರಿಕರು ೧೯೪೯ ಜನೆವರಿ ೧ನೆಯ ತಾ. ನಂತರ ಹಿಂದುಸ್ತಾನಕ್ಕೆ ಬರಬೇಕಾದರೆ ಅಪ್ಪಣೆ ಚೀಟಿ ಪಡೆಯತಕ್ಕದ್ದೆಂದೂ ಈ ಮೊದಲೇ ಹಿಂದುಸ್ತಾನದಲ್ಲಿ ಬಂದು ವಾಸಿಸುತ್ತಿದ್ದವರು ೨ ತಿಂಗಳ ಅವಧಿಯಲ್ಲಿ ತಮ್ಮ ಹೆಸರನ್ನು ನೊಂದಾಯಿಸಬೇಕೆಂದೂ ಸರಕಾರದ ಪ್ರಕಟನೆ ಹೊರಟಿದೆ.

ಘಟನಾ ಸಮಿತಿಯ ಕೆಲಸವನ್ನು ತ್ವರಿತಗೊಳಿಸಲು ಪ್ರಭಾವಶಾಲಿಯಾದ ಉಪಾಯಗಳನ್ನು ಕೈಕೊಳ್ಳದಿದ್ದರೆ ಮುಖ್ಯ ಮಂತ್ರಿ ಪಂ. ಜವಾಹರಲಾಲರು ಬಯಸಿದಂತೆ ಹಿಂದುಸ್ತಾನದ ಘಟನೆಯು ಜಾನೆವರಿ ತಾ ೨೬, ಸ್ವಾತಂತ್ರ್ಯದಿನದಂದು ಸ್ವೀಕೃತವಾಗುವ ಲಕ್ಷಣಗಳಿಲ್ಲವೆಂದು ನಮ್ಮ ದಿಲ್ಲಿಯ ಸುದ್ದಿಗಾರರು ತಿಳಿಸುತ್ತಾರೆ.

ದಿಲ್ಲಿಯಿಂದ ೨೦–೨೫ಮೈಲುಗಳ ಅಂತರ ದಿಲ್ಲಿ ತಾ।೨ರಂದು ಸೌಮ್ಯ ಭೂಕಂಪದ ಅನುಭವವಾಯಿತೆಂದು ವೇಧಶಾಲೆಯ ವರದಿಯಿದೆ.

ಇರಾಕ ಮತ್ತು ಭಾರತಗಳಲ್ಲಿರುವ ಮೈತ್ರಿ ಸಂಬಂಧವನ್ನು ದೃಢೀಕರಿಸುವ ಉದ್ದೇಶದಿಂದ ಎರಡೂ ರಾಷ್ಟ್ರಗಳು ಪರಸ್ಪರ ರಾಯಭಾರಿ ವಿನಿಮಯಕ್ಕೆ ಒಪ್ಪಿರುವವೆಂದು ಒಂದು ಪತ್ರಿಕಾ ಪ್ರಕಟನೆ ಹೊರಟಿದೆ.

ಪಂ. ಜವಾಹರಲಾಲರು ತಾ. ೬ ರಂದು ಕೇಂದ್ರ ನೀರಾವರಿ ಮಂಡಲದ ೧೯ ನೆಯ ವಾರ್ಷಿಕ ಸಭೆಯನ್ನು ಉದ್ಘಾಟಿಸುತ್ತ, ಹಿಮಾಲಯವು ಜಗತ್ತಿನಲ್ಲಿಯೇ ಶಕ್ತಿಯ ಶ್ರೇಷ್ಠ ಆಗರವಾಗಿದ್ದು ಜನತೆಯ ಹಿತಕ್ಕಾಗಿ ಅದರ ಉಪಯೋಗ ಮಾಡಿಕೊಳ್ಳುವದು ಎಂಜಿನಿಯರರನ್ನೇ ಕೂಡಿದೆಯೆಂದು ನುಡಿದರು.

ನಾರದ ಭವಿಷ್ಯ

ಜ್ಯೋತಿಷಿ- ಕೃಷ್ಣಶಾಸ್ತ್ರಿ ಭಟ ಭವಿಷ್ಯಕಥನ ಆಫೀಸ ತಿಲಕವಾಡಿ, ಬೆಳಗಾವಿ

ಡಿಸೆಂಬರ ತಾ. ೧೩ ರಿಂದ ತಾ. ೧೯ ರ ವರೆಗೆ

ಮೇಷ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ ಆದರೆ ಮಗುವಿಗೆ ಸ್ವಲ್ಪ ಕಾಯಿಲೆ ಉಳಿದ ವಿಷಯುಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಉತ್ತಮ ಪ್ರಗತಿ ತುಂಬಾ ಲಾಭ. ಆದರೆ ಪ್ರತಿಷ್ಠೆ ಕುಂದ ಹತ್ತುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ ಮತ್ತು ಸುಖ ಅನುಕೂಲ. ಆಸ್ತಿಯಲ್ಲಿ ಸ್ವಲ್ಪ ಹೆಚ್ಚಳ. ಪ್ರವಾಸ ಮತ್ತು ಭೆಟ್ಟಿ ಅನುಕೂಲ. ಆದರೆ ಪತ್ರವ್ಯವಹಾರ ತೊಂದರೆಯದು. ಅಶ್ವಿನಿಯ ಕೊನೆಯ ೩ ಮತ್ತು ಭರಣಿಯ ೧ ನೇ ಚರಣಕ್ಕೆ ತೊಂದರೆ ಕಡಮೆ. ತಾ. ೧೩, ೧೪, ೧೫, ೧೬ ಅನುಕೂಲ.

ವೃಷಭ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಕಾಹಿಲೆಯಿಂದ ಬಹಳ ಬಳಲುವದು. ಆದರೆ ಮಕ್ಕಳಿಗೆ ಒಳ್ಳೇ ಆರೋಗ್ಯ. ಪ್ರಾಪಂಚಿಕ ಸುಖದಲ್ಲಿ ಮಾತ್ರ ಸಾಧಾರಣ. ಉದ್ಯೋಗದಲ್ಲಿ ಪ್ರಗತಿ ಸಾಧಾರಣವೆ. ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿ ಪಕ್ಷಗಳದೆ ಹೆಚ್ಚು ಜೋರು, ಮಿತ್ರ ಸುಖ ಉತ್ತಮ. ಬಂಧು ವರ್ಗದವರಿಂದ ಕೆಲ ವಿರೋಧ ಕೃತ್ಯಗಳು. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ರೋಹಿಣಿಯ ಕೊನೆಯ ೩ ಮತ್ತು ಮೃಗಾದ ಮೊದಲನೆ ಚರಣಕ್ಕೆ ತೊಂದರೆಯಿಂದ ಯಶಸ್ಸು. ತಾ. ೧೪, ೧೫, ೧೬, ೧೭ ಅನುಕೂಲ.

ಮಿಥುನ

ಸ್ವತಃ ನಿಮಗೆ ಶಾರೀರಿಕ ಆದರೆ ಹೆಂಡತಿಗೆ ಮಾನಸಿಕಕ್ಲೇಶ ಬಹಳ. ಪ್ರಾಪಂಚಿಕ ಸಂಗತಿಗಳು ಅಲ್ಪ ಸ್ವಲ್ಪ ತೊಂದರೆಯಿಂದ ಮತ್ತು ಮನೋಭಾಗದಿಂದ ಹೇಗೆ ಹೇಗೋ ಪೂರ್ಣವಾಗುವವು. ಆಪ್ತರು ಮತ್ತು ನೆರೆಯವರಿಂದ ತೀವ್ರ ವಿರೋಧ. ಮಕ್ಕಳಲ್ಲಿ ಉನ್ನತಿ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ತುಂಬ. ಆದರೆ ಕೆಲ ಕೆಲಸದಲ್ಲಿ ವಿಪರೀತ ಕಂಜುಷತನ. ಅನಾವಶ್ಯಕ ಕೆಲಸಗಳಲ್ಲಿ ಬಹಳ ಔದಾರ್ಯ ತೋರಿಸುವದರಿಂದ ಜನರಲ್ಲಿ ಬಹಳ ನಗು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ನಿಮ್ಮ ತಪ್ಪೇ ಬಹಳ ಮಟ್ಟಿಗೆ ಮುಳುವಾಗುವ ಅಂಜಿಕೆ. ಮಿತ್ರರಲ್ಲಿ ವಿಪರೀತ ಸಂಶಯ ಪತ್ರವ್ಯವಹಾರಕ್ಕಿಂತ ಪ್ರವಾಸ ಮತ್ತು ಭೆಟ್ಟಿ ಅನುಕೂಲ. ಆರಿದ್ರೆಯ ಕೊನೆಯ ೩ ಮತ್ತು ಪುನರ್ವಸುವಿನ ಮೊದಲನೆ ಚರಣಕ್ಕೆ ಹೆಚ್ಚು ತೊಂದರೆ. ತಾ. ೧೩, ೧೬, ೧೮ ಅನುಕೂಲ.

ಕರ್ಕ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿಯಲ್ಲಿ ಕಿರಿಕಿರಿ. ಮಕ್ಕಳಿಂದ ಅಪ್ರಿಯ ಕೆಲಸಗಳು ಸಂಭವಿಸುವದರಿಂದ ಉಭಯತರ ಮನಸ್ಸಿಗೆ ಬಹಳ ಖೇದ. ಮನೆಯಲ್ಲಿ ಎಲ್ಲ ಬಗೆಯ ಅನುಕೂಲತೆಗಳಿದ್ದರೂ ಬಾಯಲ್ಲಿ ಬೀಳಬೇಕಾದರೆ ಸಾಕುಬೇಕಾಗಿ ಹೋಗುವದು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಸಾಧಾರಣ ಅನುಕೂಲ. ಆದರೆ ಧನದ ಮಾಡುವವರ ಸ್ಥಿತಿ ಬಹಳ ಕರುಣಾಜನಕ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಅಷ್ಟೇ ಜೋರು. ಮಿತ್ರರಲ್ಲಿ ವಿರೋಧ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಸ್ವಲ್ಪ ಅನುಕೂಲ. ಪುಷ್ಯದ ಕೊನೆಯ ೩ ಮತ್ತು ಆಶ್ಲೇಷೆಯ ಮೊದಲನೆ ಚರಣಕ್ಕೆ ತೊಂದರೆ ಹೆಚ್ಚು. ತಾ. ೧೩, ೧೪, ೧೫, ಅನುಕೂಲ.

ಸಿಂಹ

ಸ್ವತಃದ ಪ್ರಕೃತಿ ಉತ್ತಮತೆಯದಾಗಿದ್ದರೆ ಹೆಂಡತಿಯದು ವಾತ ಪ್ರಕೃತಿ ಇದ್ದು ಕೆಲ ಮಟ್ಟಿಗೆ ತಕರಾರು ಬರುವದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ. ಮಕ್ಕಳಲ್ಲಿ ಹೆಚ್ಚಿನ ಉನ್ನತಿ. ಬಂಧು ವರ್ಗದವರಲ್ಲಿ ಒಬ್ಬರು ಪ್ರೇಮ ವ್ಯಕ್ತಮಾಡಿದರೆ ಇನ್ನೊಬ್ಬರು ಅಷ್ಟೇ ತಿರಸ್ಕಾರ ಮಾಡುವರು. ಉದ್ಯೋಗದಲ್ಲಿ ಪ್ರಗತಿ ಉತ್ತಮ ಆದರೆ ಪ್ರತಿಷ್ಠೆ ಮತ್ತು ಲಾಭ ಬಹಳ ಮಟ್ಟಿಗೆ ಕೈಗೆ ಬಂದು ಮತ್ತೆ ಬಹಳ ದೂರ ಹೋಗುವ ಅಂಜಿಕೆ. ಲೋಕ ಕಲ್ಯಾಣದ ಕೃತಿಗಳನ್ನು ಮಾಡುವದಕ್ಕಾಗಿ ಸಾಮೂಹಿಕ ಕಾರ್ಯಕ್ರಮ ಗೊತ್ತುಪಡಿಸುವಲ್ಲಿ ಮುಂಬರುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಡಂಬಡಿಕೆಯ ಸಂಭವ ಮಿತ್ರ ವಿರೋಧ. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಅನುಕೂಲ. ಮಘೆಯ ಕೊನೆಯ ೩ ಮತ್ತು ಪೂರ್ವದ ಮೊದಲನೇ ಚರಣಕ್ಕೆ ತೊಂದರೆ ಕಡಿಮೆ. ತಾ. ೧೪, ೧೬, ೧೮, ಅನುಕೂಲ.

ಕನ್ಯಾ

ಪ್ರಕೃತಿ ಎಲ್ಲರದೂ ಉತ್ತಮ. ಆದರೆ ಪತಿ ಪತ್ನಿಯರಲ್ಲಿ ಕ್ಷುಲ್ಲಕ ಮಾತಿಗಾಗಿ ಬಹಳ ಮನಸ್ತಾಪವುಂಟಾಗುವ ಸಂಭವ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕಸುಖ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅನುಕೂಲ ಆದರೆ ಪ್ರತಿಯೊಂದು ವಿಷಯದಲ್ಲಿ ಜೀವ ಒತ್ತಿ ಇಟ್ಟು ಶ್ರಮಿಸುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪರಾಭವದ ಸಂಭವ. ಸ್ವಲ್ಪ ಅವಚಿತ ಲಾಭ. ಮಿತ್ರರಲ್ಲಿ ಸ್ನೇಹ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಹಸ್ತದ ಕೊನೆಯ ೩ ಮತ್ತು ಚಿತ್ತಾದ ೧ ನೇ ಚರಣಕ್ಕೆ ತೊಂದರೆ ಕಡಮೆ. ತಾ. ೧೪, ೧೫, ೧೬, ೧೭, ಅನುಕೂಲ.

ತುಲಾ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಉತ್ತಮ ಹೆಂಡತಿ ಮತ್ತು ಮಕ್ಕಳಿಂದ ಬೇರೆಯವರಿಗಿಂತ ಹೆಚ್ಚು ಪ್ರಿಯ ವಸ್ತು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆದರೆ ಸಾಮಾನ್ಯ ಜನರಲ್ಲಿ ನಿಮ್ಮ ಒಗ್ಗಟ್ಟು ಬಹಳ ತಪ್ಪು ತಿಳುವಳಿಕೆ ಒಂದಿರದು ಜನರಲ್ಲಿ ಇಲ್ಲವೆ ಅಪ್ರಿಯ ಆದರ ಸಹವಾಸ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು ಆದರೆ ಶತ್ರುಗಳ ಜೋರು ಹೆಚ್ಚು. ಮಿತ್ರ ಸುಖ ಅನುಕೂಲ ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಹೆಚ್ಚು ಅನುಕೂಲ. ಸ್ವಾತಿಯ ಕೊನೆಯ ೩ ಮತ್ತು ವಿಶಾಖಾದ ೧ ನೇ ಚರಣಕ್ಕೆ ತೊಂದರೆ ಕಡಿಮೆ. ತಾ. ೧೩, ೧೬ ೧೮, ೧೯ ಅನುಕೂಲ.

ವೃಶ್ಚಿಕ

ಪ್ರಕೃತಿ ನಿಮ್ಮಗು ಅನುಕೂಲ;ಆದರೆ ಹೆಂಡತಿಯದು ಸ್ವಲ್ಪ ಕೆಡುವದು ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಆದರೆ ಕೆಲ ಕೆಲಸಗಳಿಗೆ ಮನಸಿನ ವಿರುದ್ಧ ಒಪ್ಪಿಗೆ ಕೊಡಬೇಕಾದ ಪ್ರಸಂಗ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅತಿ ಉತ್ತಮ. ಆದರೆ ವೆಚ್ಚ ಸಹಿತ ವಿಪರೀತ. ವ್ಯಸನಗಳ ಕಡೆಗೆಮತ್ತು ಚೈನಿಯ ಕಡೆಗೆ ವಿಶೇಷ ಎಳೆತ. ಮಿತ್ರ ಸುಖ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅಪಯಶಸ್ಸು ಅಲ್ಲದೆ ಶತ್ರುಗಳ ಜಾಲದಲ್ಲಿ ಅಕಸ್ಮಾತಾಗಿ ಸಿಕ್ಕು ಬೀಳುವ ಅಂಜಿಕೆ. ಪ್ರವಾಸ ಕಷ್ಟದ್ದು ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರವೂ ಅನುಕೂಲ. ಅನುರಾಧೆಯ ಕೊನೆಯ ೩ ಮತ್ತು ಜ್ಯೇಷ್ಠಾದ ೧ನೇ ಚರಣಕ್ಕೆ ತೊಂದರೆ ಕಡಮೆ ತಾ. ೧೪, ೧೫, ೧೯ ಅನುಕೂಲ.

ಧನು

ನಿಮ್ಮ ಪ್ರಕೃತಿ ಅನುಕೂಲ ಆದರೆ ಹೆಂಡತಿಯದು ಕೆಡುವದು ಮಕ್ಕಳು ಬಹಳ ಮಟ್ಟಿಗೆ ಮೈಮೇಲೆ ಬರುವಂಥ ದುಷ್ಕೃತ್ಯಗಳನ್ನು ಮಾಡುವರು. ಉಳಿದ ವಿಷಯುಗಳಲ್ಲಿಯೂ ಪ್ರಾಪಂಚಿಕ ತೊಂದರೆ ಬಹಳ ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಬಹಳ ಕುಂದಹತ್ತುವದು ಆದರೆ ಲಾಭ ಒಟ್ಟಾರೆ ಅನುಕೂಲ. ಮಿತ್ರಸುಖ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಪ್ರವಾಸಾದಿ ಕೆಲಸ ಅತ್ಯಂತ ತೊಂದರೆಯವು. ಸ್ವಾತಿಯ ಕೊನೆಯ ೩ ಮತ್ತು ಪೂರ್ವಾಷಾಢದ ೧ ನೇ ಚರಣಕ್ಕೆ ತೊಂದರೆ ಹೆಚ್ಚು. ತಾ. ೧೩, ೧೬, ೧೮ ಅನುಕೂಲ.

ಮಕರ

ಪ್ರಕೃತಿಗೆ ಬಹಳ ಕ್ಲೇಶ. ಹೆಂಡತಿ ಕೂಡ ವಿರೋಧ. ಎಲ್ಲ ವಿಷಯುಗಳಲ್ಲಿ ಪ್ರಾಪಂಚಿಕ ಸುಖ ಕೆಡುವುದು ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳಉತ್ತಮ ಆದರೆ ವೆಚ್ಚವೂ ಆದರ ಇಮ್ಮಡಿ ಮತ್ತು ಮುಳುಗುವ ವಿಷಯುಗಳಲ್ಲಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಪ್ರವಾಸಾದಿ ಕೆಲಸ ಸಾಧಾರಣ ಅನುಕೂಲ. ಶ್ರವಣದ ಕೊನೆಯ ೩ ಮತ್ತು ಧನಿಷ್ಠೆಯ ೧ ನೇ ಚರಣಕ್ಕೆ ತೊಂದರೆ ಕಡಮೆ. ತಾ. ೧೪, ೧೫, ೧೯ ಅನುಕೂಲ.

ಕುಂಭ

ಎಲ್ಲರ ಪ್ರಕೃತಿ ಅನುಕೂಲ. ಆದರೆ ಪ್ರತಿಯೊಬ್ಬರ ಪಕ್ಕದಲ್ಲಿ ಕಲಹ ನಡೆಯುತ್ತದೆ. ಆದರೆ ಪ್ರಾಪಂಚಿಕ ಸ್ಥಿತಿ ಸುಧಾರಿಸುವದು. ಉದ್ಯೋಗದಲ್ಲಿ ಒಳ್ಳೆ ಪ್ರಗತಿ ಸ್ಥಿರವಾಗಿ ಬಾಳುವ ಪ್ರತಿಷ್ಠೆ ಮತ್ತು ಅಷ್ಟೇ ದೊಡ್ಡ ಲಾಭ. ಮಿತ್ರಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವಿಜಯ. ಕೆಲವೊಂದು ಧಾರ್ಮಿಕ ಇಲ್ಲವೆ ಸಾರ್ವಜನಿಕ ಉಂಟಾದಗಳಲ್ಲಿ ಉನ್ನತಿ. ಪ್ರವಾಸಾದಿ ಕೆಲಸ ಉತ್ತಮ. ಶತತಾರಕೆಯ ಕೊನೆಯ ೩ ಮತ್ತು ಪೂರ್ವಾಭಾದ್ರಪದದ ೧ನೇ ಚರಣಕ್ಕೆ ತೊಂದರೆ ಹೆಚ್ಚು. ತಾ. ೧೩, ೧೬, ೧೮ ಇವು ಅನುಕೂಲ.

ಮೀನ


ಪ್ರಕೃತಿ ಎಲ್ಲರದೂ ಉತ್ತಮ ಆದರೆ ನಿಮ್ಮ ನಿಮ್ಮಲ್ಲಿ ಸ್ವಲ್ಪ ಕಲಹ. ಸ್ತ್ರೀ ವರ್ಗದಲ್ಲಿ ನಿಮ್ಮ ಶೇತಿಯ ಬಗ್ಗೆ ಸಂಶಯದ ಮಾತ. ಉಳಿದ ವಿಷಯುಗಳಲ್ಲಿ ಪ್ರಾಪಂಚಿಕ ಸುಖ ಪ್ರಾಯಶಃ ಅನುಕೂಲ. ಉದ್ಯೋಗದಲ್ಲಿ ಒಳ್ಳೇ ಪ್ರಗತಿ ದೊಡ್ಡ ಪ್ರತಿಷ್ಠೆ ಮತ್ತು ತುಂಬ ಲಾಭ ಆದರೆ ಲಾಭದ ಸಂಭವ ವೆಚ್ಚವೂ ಅಪಾರವಾಗಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಮಿತ್ರರಲ್ಲಿ ವಿರೋಧ ಹೆಚ್ಚುವದು. ಪ್ರವಾಸಾದಿ ಕೆಲಸ ಮನಸ್ಸಿನಂತೆ. ಉತ್ತರಾಭಾದ್ರಪದದ ಕೊನೆಯ ೩ ಮತ್ತು ರೇವತಿಯ ೧ ನೇ ಚರಣಕ್ಕೆ ತೊಂದರೆ ಕಡಮೆ. ತಾ. ೧೩, ೧೪, ೧೬ ೧೯ ಅನುಕೂಲ.

Reg. No. B. 3148

LICENCE No. 3
Licensed to Post without Prepayment

KARMAVEER 13-12-

ಪುಸ್ತಕ ಪರಿಚಯ



[ಕಮವೀರಕ್ಕೆ ಬಂದ ಎಲ್ಲ ಪುಸ್ತಕಗಳನ್ನು ಸಾವಕಾಶದಿಂದ ಸ್ವೀಕರಿಸಿದ ಉಲ್ಲೇಖ ಮಾಡುತ್ತಿರುವೆವು. ಆ ಎಲ್ಲ ಕೃತಿಗಳ ವಿಮರ್ಶೆ ಮಾಡಬೇಕೆಂದಿದ್ದರೂ ಸ್ಥಳ ಸಂಕೋಚದ ನಿಮಿತ್ತವಾಗಿ ಈ ಮೂಲಕ ತಿಳಿಸುತ್ತಿದ್ದೇವೆ. -ಸಂ]

ಮದಗಜಮಲ್ಲ

ಲೇಖಕರು, ಶ್ರೀ ದೇಸಾಯಿ ಪಾಂಡುರಂಗರಾಯರು, ಎಂ. ಎ. ಪ್ರಕಾಶಕರು, ಶ್ರೀ ದ. ಬಾ. ಕುಲಕರ್ಣಿ. ಮನೋಹರ ಗ್ರಂಥ ಭಾಂಡಾರ ಧಾರವಾಡ. ಪುಟಗಳು ೭೮ ಬೆಲೆ ೧ ರೂ. ೪ ೯.

ಇದೊಂದು ಐತಿಹಾಸಿಕ ಕಥಾಸಂಗ್ರಹ. ಕನ್ನಡಿಗರ ಶೌರ್ಯ - ದಿಟ್ಟತನಗಳನ್ನು ತೋರ್ಪಡಿಸುವ ಕಥಾ ಸಂಗ್ರಹಗಳು ಕನ್ನಡದಲ್ಲಿ ಪ್ರಕಟವಾಗುತ್ತಿರುವದಿಲ್ಲವೆಂದು ಹೇಳಿದರೂ ಅತಿಶಯೋಕ್ತಿಯಾಗದು. ಇಂತಹ ಸಂದರ್ಭದಲ್ಲಿ ಶ್ರೀ ದೇಸಾಯಿ ಪಾಂಡುರಂಗರಾಯರು ಕರ್ನಾಟಕದ ಇತಿಹಾಸವನ್ನು ಸಂಶೋಧಿಸಿ ಚಾರಿತ್ರಿಕ ಗ್ರಂಥಗಳನ್ನು ಕನ್ನಡಿಗರಿಗೆ ನೀಡುತ್ತಿರುವದು ನಿಜವಾಗಿಯೂ ಅಭಿನಂದನೀಯವಾಗಿದೆ.

ಈ ಕಥಾ ಸಂಗ್ರಹದಲ್ಲಿ ಮೂರು ಕಥೆಗಳಿದ್ದು ಮೂರೂ ಕರ್ನಾಟಕದ ಧೀರ ಪಾಳೆಯಗಾರ ಬೇಡರಿಗೆ ಸಂಬಂಧಿಸಿದವುಗಳಾಗಿವೆ. ಮೊದಲಿನ ಎರಡು ಕಥಾನಕಗಳು ವಾಗಿನಗೇರಿ ರಾಜ್ಯದ ಸಂಸ್ಥಾಪಕನೂ ವಿಜಾಪುರದ ಆದಿಲಶಾಯಿ ಆಸನಾದ ಮದಗಜ ಗಂಡಭೇರುಂಡ-ಬಿರುದಿನ-ಪಿಡ್ಡನಾಯಕನ ಸಂಬಂಧವಾಗಿ ಬರೆದವುಗಳಾಗಿವೆ. ಮೊದಲನೆಯ ಕಥೆಯಲ್ಲಿ (ಮದಗಜಮಲ್ಲ) ಪಿಡ್ಡನಾಯಕನು ಸೊಕ್ಕಿದ ಮದ್ದಾನೆಯನ್ನು ಎದುರಿಸಿ ಹಣ್ಣುಮಾಡಿದ ಪ್ರಸಂಗವು ವರ್ಣಿಸಲ್ಪಟ್ಟಿದೆ. ಆದಿಲಶಾಹಿ ಅರಸನು ಪಿಡ್ಡನಾಯಕನನ್ನು ನಿರ್ಮೂಲ ಮಾಡಬೇಕೆಂದು ಬಯಸಿದ್ದರೂ ಅವನ ಧೀರತನಕ್ಕೆ ಬೆರಗಾಗಿ ಮದಗಜ ಗಂಡಭೇರುಂಡನೆಂಬ ಬಿರುದನ್ನು ದಯಪಾಲಿಸಿ ಮಾಂಡಲಾಧಿಪತಿಯನ್ನಾಗಿ ನಿಯಮಿಸಿಕೊಳ್ಳುತ್ತಾನೆ. ಎರಡನೆಯ ಕಥೆಯಲ್ಲಿ (ವಿಶ್ವೇಶ್ವರನ ದ್ವಾರ) ಪಿಡ್ಡನಾಯಕನು ಹಿಂದುಸ್ತಾನವನ್ನೇ ಗಡಗಡ ನಡುಗಿಸಿದ ದಿಲ್ಲೀಶ್ವರ ಔರಂಗಜೇಬನು ವಾಗಿನಗೇರಿ ಕೋಟೆಯನ್ನು ಮುತ್ತಿದಾಗ ಏಕಾಂಗವೀರನಾಗಿ ಅವನನ್ನೆದುರಿಸಿ ಕೊನೆಗೂ ಅವನ ಕೈಗೆ ಸಿಕ್ಕದೆ ಪಾರಾಗಿ ಹೋದ ರೋಮಾಂಚಕಾರಿ ಸನ್ನಿವೇಶ ಚಿತ್ರಿತವಾಗಿದೆ. ಮೂರನೆಯ ಕಥೆಯಲ್ಲಿ (ಪುದ್ದೇರಿ ಕಾಳಗ) ಪಿಡ್ಡನಾಯಕನ ವಂಶಜನಾದ ಸುರಪುರದ ವೆಂಕಟಪ್ಪನಾಯಕನು ಹೈದರಾಬಾದ ನಿಜಾಮನ ಪರವಾಗಿ ಫ್ರೆಂಚರ ಪಾಂಡಿಚೇರಿ ಕೋಟೆಯನ್ನು ಮುತ್ತಿ ತನ್ನ ಶೂರ ಪಡೆ ಕೋಟೆಗಾರರನ್ನು ಬಲಿಯಿಕ್ಕಿ ಪಾಂಡಿಚೇರಿಯನ್ನು ವಶಪಡಿಸಿಕೊಂಡ ವೀರ ಕಥೆಯಿದೆ.

ಲೇಖಕರು ಕಥೆಗಳನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಶೈಲಿ ಸರಳಸುಂದರವಾಗಿದೆ. ಕಥೆಗಳನ್ನು ಓದುತ್ತ ಹೋದಂತೆ ಇದೀಗ ಜರುಗುತ್ತಿರುವ ಸನ್ನಿವೇಶಗಳೇನೊ ಎಂದು ಭಾಸವಾಗುತ್ತದೆ. ಐತಿಹಾಸಿಕ ಸನ್ನಿವೇಶಗಳಲ್ಲಿ ಸಲ್ಲಬಹುದಾದಂತೆ ದಕ್ಷತೆ ವಹಿಸಿ ಓದುಗರಿಗೆ ಚಿತ್ರವು ಸ್ಪಷ್ಟವಾಗುವಂತೆ ಕನ್ನಡಿಗರಿಗೆ ಲೇಖಕರು ಇಂತಹ ಇನ್ನೂ ಅನೇಕ ಗ್ರಂಥಗಳನ್ನು ನೀಡಲಿ.

ಮಿಂಚಿನಬಳ್ಳಿಯ ಹೊಸ ಹೆಜ್ಜೆ
೧೦ ವರ್ಷಗಳಲ್ಲಿ ೧೦೦ ಗ್ರಂಥಗಳು

ಮಿಂಚಿನಬಳ್ಳಿಯು ಈ ಹತ್ತು ವರ್ಷಗಳಲ್ಲಿ ಸಿಡಿಲ ಕ್ರಾಂತಿಯುಳ್ಳ ನವನಿರ್ಮಾಣದ ಕೃತಿಗಳನ್ನು ಕನ್ನಡಿಗರಿಗೆ ಅರ್ಪಿಸುತ್ತ ಬಂದಿದೆ. ಭಾರತವು ಸ್ವತಂತ್ರವಾಗಿ ರಾಷ್ಟ್ರನಿರ್ಮಾಣದ ಕಾರ್ಯಕ್ಕೆ ಕೈಹಾಕಿದೆ. ಈ ಸಮಯದಲ್ಲಿ ಕನ್ನಡ ಜನಾಂಗವು ಜೀವನದ ವಿವಿಧ ರಂಗಗಳಲ್ಲಿ ಮುಂದುವರಿದು ನವಭಾರತ ನಿರ್ಮಾಣದಲ್ಲಿ ನೆರವಾಗಬೇಕಾಗಿದೆ. ಈ ದೃಷ್ಟಿಯಿಂದ ನಾವು ಈ ಮುಂದಿನ ಹತ್ತು ವರ್ಷಗಳಲ್ಲಿ ರಾಷ್ಟ್ರನಿರ್ಮಾಣಕ್ಕೆ ಅವಶ್ಯವಾದ ಹಾಗೂ ಪೋಷಕವಾದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಐತಿಹಾಸಿಕ, ಧಾರ್ಮಿಕ ಇವೇ ಮೊದಲಾದ ವಿವಿಧ ವಿಷಯಗಳ ಬಗೆಗೆ ಬೆಳಕು ಬೀರುವಂಥ ನೂರು ಗ್ರಂಥಗಳನ್ನು ಪ್ರಕಟಿಸಿ, (ಬಳ್ಳಿಯ ಗ್ರಂಥಗಳನ್ನು ಹಿಡಿದು) ನಮ್ಮ ಅಳಿಲ ಸೇವೆಯನ್ನು ರಾಷ್ಟ್ರಕ್ಕೆ ಸಲ್ಲಿಸಬೇಕೆಂದು ಸಂಕಲ್ಪ ಮಾಡಿದ್ದೇವೆ.

ಈ ಕಾರ್ಯಕ್ಕೆ ಕನಿಷ್ಠ ೧೫-೨೦ ಸಾವಿರ ರೂಪಾಯಿಗಳೂ ಮತ್ತು ಲೇಖಕರೂ ಸೇನೆಯನ್ನು ಪ್ರೇರಿಸುವ ಜನಾಂಗವೂ ಅತ್ಯಾವಶ್ಯಕ. ಇಷ್ಟಿಯ ವರೆಗೆ ನೆರವಿತ್ತ ಕನ್ನಡ ಜನತೆಯೇ ಈ ಕಾರ್ಯವನ್ನು ಯಶಸ್ವಿಯಾಗಿ ಮಾಡುವದೆಂದು ನಂಬಿದ್ದೇವೆ.

ಈ ಕಾರ್ಯಕ್ಕೆ ಇಬ್ಬಗೆಯಿಂದ ಸಹಾಯಕರಾಗಿ, ಪೋಷಕರಾಗಿ, ಆಶ್ರಯದಾತರಾಗಿ ಸಹಾಯವನ್ನು ನೀಡುವದು ಒಂದು ಬಗೆ. ಇಲ್ಲವೆ, ಸಹಾಯ ಪತ್ರಗಳನ್ನು ಕೊಂಡು ಸಹಾಯವನ್ನು ಮಾಡುವದು ಇನ್ನೊಂದು ಬಗೆ. ಆದರೆ ಈ ರಾಷ್ಟ್ರ ಕಾರ್ಯಕ್ಕೆ ಬೇಕಾಗುವ ಹಣವನ್ನು ಒದಗಿಸುವ ಹೊಣೆಯು ಕನ್ನಡ ಜನಾಂಗದ ಮೇಲೆಯೇ.

ಸಹಾಯದ ಯೋಜನೆ

೧

ಆಶ್ರಯದಾತರು: ೨೫೦ ರೂ. ಇವರಿಗೆ ಬಳ್ಳಿಯು ಎಲ್ಲ ಕೃತಿಗಳು ಉಚಿತವಾಗಿ ಜೀವಮಾನವು. ಪೋಷಕರು: ೫೦ ರೂ. ಇವರಿಗೆ ಬಳ್ಳಿಯ ಎಲ್ಲ ಕೃತಿಗಳು ಮುಕ್ಕಾಲು ಬೆಲೆಗೆ ಕೊಡಲ್ಪಡುವವು. ಸಹಾಯಕರು: ೨೫ ರೂ. ಇವರಿಗೆ ಬಳ್ಳಿಯ ಕೃತಿಗಳನ್ನು ೫ ವರ್ಷಗಳವರೆಗೆ ಮುಕ್ಕಾಲು ಬೆಲೆಗೆ ಕೊಡಲಾಗುವದು.

೨

೧) ೧೦೦ ರೂಪಾಯಿಯ ಸಹಾಯಪತ್ರವನ್ನು ತೆಗೆದುಕೊಳ್ಳುವವರಿಗೆ ೧೦ ವರ್ಷದಲ್ಲಿ ೧೫೦ ರೂ. ಬೆಲೆಯ ಪುಸ್ತಕಗಳನ್ನು ಕೊಡಲಾಗುವದು. ಇವರಿಗೆ ಬಳ್ಳಿಯು ಈ ವರೆಗೆ ಪ್ರಕಟಿಸಿದ (ಈಗ ನಮ್ಮಲ್ಲಿ ದೊರೆಯುವುದಾದ) ಎಲ್ಲ ಗ್ರಂಥಗಳನ್ನೂ ಕೊಡಲಾಗುವದು.

೨) ೫೦ ರೂ ಯ ಸಹಾಯ ಪತ್ರವನ್ನು ತೆಗೆದುಕೊಳ್ಳುವವರಿಗೆ ಹತ್ತು ವರ್ಷಗಳಲ್ಲಿ ೭೦ ರೂ. ಬೆಲೆಯ ಪುಸ್ತಕಗಳನ್ನು ಕೊಡಲಾಗುವದು. ಇವರಿಗೆ ೨೫ ರೂ. ಬೇಕಿದ್ದರೆ ಹಿಂದಿನ ಪುಸ್ತಕಗಳನ್ನು (ಈಗ ನಮ್ಮಲ್ಲಿ ದೊರೆಯುವುದಾದ) ಕೊಡಲಾಗುವದು.

೩) ೨೫ ರೂ ಯ ಸಹಾಯ ಪತ್ರವನ್ನು ತೆಗೆದುಕೊಳ್ಳುವವರಿಗೆ ಮುಂದಿನ ೫ ವರ್ಷಗಳಲ್ಲಿ ೩೦ ರೂ. ಬೆಲೆಯ ಪುಸ್ತಕಗಳನ್ನು ಕೊಡಲಾಗುವದು.

ತಮ್ಮ ಸೇವಕ
ಬುರ್ಲಿ ಬಿಂದುಮಾಧವ

ಸರ್ಪದಿಂದ ರತ್ನದ ಹರಣ

ರತ್ನಾಗಿರಿಯಲ್ಲಿಯ ಹಿರಾ ಗುಡ್ಡದಲ್ಲಿ ಸುಧಾಕರ ಸಾವಂತನೆಂಬ ಹೆಸರಿನ ಹುಡುಗನಿಗೆ ಕೋಳಿ ತತ್ತಿಯ ಆಕಾರದಷ್ಟು ತೇಜಃಪುಂಜವಾದ ಒಂದು ರತ್ನವು ಸಿಕ್ಕಿತು. ಹುಡುಗನು ಸಂತೋಷದಿಂದ ಅದನ್ನು ಕೈಯಲ್ಲಿ ಹಿಡಿದುಕೊಂಡು ೨ ಸುಮಾರು ೫ ಘಂಟೆ ಆಗ್ರ್ಯವಾದ ಸರ್ಪವು ಅವನ ಕಾಲುಗಳಿಗೆ ಸುತ್ತಿಕೊಳ್ಳಲು ಅವನು ಗಾಬರಿಯಾಗಿ ರತ್ನವನ್ನು ಚಲ್ಲಿಕೊಟ್ಟನು. ಸರ್ಪವು ಮಣಿಯನ್ನು ಬಾಯಲ್ಲಿ ಕಚ್ಚಿಕೊಂಡು ಸ್ಫೋಟ್ಟು ಹೋಯಿತು.

ಕೆ - ಕೇ - ಕೈ

[೨ ನೆಯ ಪುಟದಿಂದ]

ಸುಬ್ಬು:- (ತಿಳಿಯದ) ಇಲ್ಲ ಬರೀತಿದ್ದೆ-

ವ. ರಾಯ್ರು:- ಒಂದು ಪೇಪರ್ ಹೊರಡಿಸಿದರ ಹ್ಯಾಂಗ ಅಂತ.

ಸುಬ್ಬು:- (ಚಕಿತನಾಗಿ) ಪೇಪರ್ ಉ?

ವ. ರಾಯ್ರು:- ಉತ್ತಮ! first class brain ದ ಕೆಲಸ ಅಂದಿರಬೇಕು. ನೋಡು, ಸುಬ್ಬು. ನನಗ ಕೇಳಿದರ ಈ ಏಕೀಕರಣ, ಯುನಿವರ್ಸಿಟಿ, ಅದು ಇದು ಇದೆಲ್ಲ ಏನಂತೀ? waste! ಒಂದೇ ಕೆಲಸ, ಯಾವುದಾದ್ರು ಒಂದು, ಶಿಸ್ತಿನಿಂದ ಮಾಡಿದರ

[ಹೊರಗಿನಿಂದ "ವಕೀಲರಾಯ್ರು ಇದ್ದಾರೇನು?"]

ಏ, ಯಾರಿದ್ದಾರ ನೋಡೋ, ಸುಬ್ಬು. ಇಲ್ಲಾ, I am busy ಅಂತ ಹೇಳು.

ಸುಬ್ಬು - (ನೋಡಿ ಬಂದು ಕಳ್ವಳದಿಂದ) ಕಾಂಗ್ರೆಸಿನ ಜನ, ರಾಯ್ರು!

ವ ರಾಯ್ರು: - (ಬೇಜಾರದ ದನಿಯಲ್ಲಿ) ಥೇ! ಕೆಟ್ಟ ಜನರಪಾ! ಒಬ್ಬರು ಕೆಲಸ ಮಾಡ್ತಿದ್ದರ ಎಲ್ಲಾರು ಅವರಿಗೇ ಬೆನ್ನು ಹತ್ತೋರು. ಏ, ಸುಬ್ಬು, ಏನ್ಬೇಕಾಗೇದ ಕೇಳಿ ಕಳುಹಿಸಿಬಿಡೋ!

[ಸುಬ್ಬು ಹೊರಗೆ ಹೋಗುವನು. ಇಬ್ಬರು ಗೃಹಸ್ಥರು ಖಾದೀ ಪಾಯಿಜಾಮಾ-ಅವನೊಡನೆ ಒಳಗೆ ಬರುವರು]

ಗೃಹಸ್ಥ ೧:- ನಮಸ್ಕಾರ, ವಕೀಲ ರಾಯ್ರು.

ವ. ರಾಯ್ರು:-(ನಗೆಯಿಂದ) ನಮಸ್ಕಾರ, ನಮಸ್ಕಾರ, ಬರ್ರಿ. ನೋಡಿದಿ ಇಲ್ಲೊ, ಸುಬ್ಬು? (ಗೃಹಸ್ಥರಿಗೆ) ನಾ ಒಳಗ ಇದ್ದ, ನಿಮ್ಮ ದನಿ ಕೇಳಿಸಿತು.. ಅವರನ್ನು ಕರೆದು ಕೂಡಿಸೊ, ಸುಬ್ಬು, ಅಂತ ಹೇಳಿದೆ -

ಗೃಹಸ್ಥ ೨:- ಇರಲಿ ಬಿಡ್ರಿ ರಾಯ್ರು. ಈ ಹೊತ್ತು ಸಂಜೆಗೆ ಮೀಟಿಂಗ Public meeting.

ವ. ರಾಯ್ರು:- (ಚಕಿತರಾಗಿ) Public meeting? ಎಲ್ಲಿಯೊ, ಸುಬ್ಬು, ನಮಗ ಯಾರೂ ಹೇಳಿಯೆ ಇಲ್ಲಲ್ಲೊ!

ಗೃಹಸ್ಥ ೧:- ಹೇಳಲ ಒಳಗ ಬಂದಿದೆ, ರಾಯ್ರು.

ವ. ರಾಯ್ರು:- ಬಂದಿರಬೇಕು ಬಿಡಿರಿ.

ಸುಬ್ಬು:- (ನಗೆಯಿಂದ) ಪೇಪರ್ ಓದಲಿಕ್ಕೆ ವ್ಯಾಳ್ಯಾ ಬೇಕಲ್ಲ ರಾಯ್ರಿಗೆ?

ವ. ರಾಯ್ರು:- ನನ್ನ ಸೇವಾ ಕಂಪ್ಲೀಟ್ ಇಲ್ಲ ಬಿಡ್ರಿ. I am wanted, I go, ನನ್ನ principle ಇದರ!

ಗೃಹಸ್ಥ ೨:- ಈ ಹೊತ್ತು ಸಭೆ. ರಾಯರೆ ಸಭಾಕ್ಕ President.

ವ. ರಾಯ್ರು:- (ನಮ್ರತೆಯಿಂದ) Excuse, excuse me ಅಂ, please! ನನಗ ಮುಂದಾಗೋದು, ಮಾತಾಡೋದು-ಇವು ಸೇರೋದೆ ಇಲ್ಲ- ಅಂದೆ. ಕೇಳಿರಿ, ಸುಬ್ಬುಗ it's my principle. ನಂ ಜನರಿಗೆ ಕೆಲವು ಗುಣ ಕಲಿಯಬೇಕಾಗೇದ.

ಗೃಹಸ್ಥ ೧:- ರಾಯ್ರು, ಯಾರಿಗೇನು ಗೊತ್ತಿಲ್ಲೇನು ನಿಂ ಸ್ವಭಾವ? ನಾವು ಕರೀಲಿ ಅಂತ ನೀವು ಬರ್ರಿ-

ಸುಬ್ಬು:- (ನಡುವೆ) ಜನರ ಸೇವಾ principle ಮಾಡಿಕೊಂಡಿದ್ದಾರ ಅಂದ್ರ, ರಾಯ್ರಿಗೆ ಅವಿಲ್ಲ ಸೇರ್ತದ ಖರೇ ಅಂದ್ರ ಅಲ್ಲ, ಅಂದ್ರ ಅವರ ಯೋಗ್ಯತಾ-

ಗೃಹಸ್ಥ ೨:- ಇಲ್ಲ ಅಂದ್ರ ಇಂಥಾ ದೊಡ್ಡ ಸಭಾಕ್ಕ ರಾಯ್ರು ಬೇಕು ಅಂತ ಹಟ ಹಿಡೀತಿದ್ದೇವು?

ವ. ರಾಯ್ರು:-(apologetically) ಇಲ್ಲ, ಖರೋಖರ ನನ್ನ excuse ಮಾಡ್ರಿ. ನನ್ನ fit ಇಲ್ಲ ಬರೋಬರಿ ವ್ಯಾಳ್ಯಾಕ ಸಭಾ ಸುರು ಆಗ್ತದ.

ಗೃಹಸ್ಥ ೧:- ರಾಯ್ರು, ನಮ್ಮ ಮುಂದಿನ ಆ ಚಟಾನೇ ಕಲಿಸ್ಬೇಕಾಗೇದ ಅಂತ ನಿಮ್ಮಂಥವ್ರು ಬೇಕು.

ಗೃಹಸ್ಥ ೨:- ಜನ ಬರಲಿ ಬಿಡಲಿ, ವ್ಯಾಳ್ಯಾಕ ಸಭಾ ಶುರೂ ಮಾಡೋಣ.

ಸುಬ್ಬು:- ಕಾಂಗ್ರೆಸ್ ರಾಯ್ರು ಬರ್ತಾರ.

ವ. ರಾಯ್ರು:- ಜನ ಬರ್ತಾರ್ರಿ.. If you ask my opinion, ನಂ ಜನರಿಗೆ ಗೊತ್ತಿಲ್ಲ ಸಭಾ ಹ್ಯಾಂಗ organize ಮಾಡ್ಬೇಕು ಅಂತ.. ನನ್ನದೊಂದು Suggestion ನೋಡಿರಿ ಸುರುವಿಗೆ ಒಂದು ಹಾಡು ಯಾಕ ಹಾಡಿಸಬಾರದು?

ಗೃಹಸ್ಥ ೧+೨:- ಅದ್ಯಾಕ, ರಾಯ್ರು ಆಗಲಿ.

ವ. ರಾಯ್ರು:- (ನಡುವೆಯೆ) ನಾನು ಹೇಳೋದು ಹಾಡು for the sake of ಹಾಡು ಹ್ಯಾಂಗ ಅಂತೀರಿ? Music effect ಬಹಳ ಇರ್ತದ mob psychology ಮ್ಯಾಲೆ (ಸುಬ್ಬುಗೆ) ಸುಬ್ಬು, ಆ ... ಕಡೆಯಿಂದ ಒಂದು ಹಾಡು ಹೇಳಿಸಿದ್ರ ಹ್ಯಾಂಗ ಆದೀತು ಅಂತೀ?

ಸುಬ್ಬು: - (ಒಂದು ನಿಮಿಷ ಯೋಚಿಸಿ ಒಮ್ಮೆಲೆ ಹೊಳೆದಂತೆ) ಹಾಂ! ...ಇಪ್ಪರು ಗೃಹಸ್ಥರಿಗೆ-ಕಣ್ಣಿನಿಂದ ಹೇಳ್ತೀನಿ ಹೊರಗ ಹೋದ ವ್ಯಾಳ್ಯಾಕ ಅವರ ಹೆಸರ.!

ವ ರಾಯ್ರು: - ಜನರು ಬರ್ತಾರಂತ ಇಲ್ಲ ಅಂತೀಯೊ? (ಗೃಹಸ್ಥರಿಗೆ) ಸುಬ್ಬುಗ ಅದೇ ಹೇಳ್ತಿದ್ದೆ. ಒಂದು ... ದರೂ ಥರೋರೇ organize ಮಾಡಿದರ ನಂ ಜನ್ಮ ಸಾರ್ಥಕ ಆಯ್ತು ಅಂತ.

ಸುಬ್ಬು: — (ಅಭಿಮಾನದಿಂದ) ... ಒಂದು model ಕನ್ನಡ ಪೇಪರ ತಗೀತಾರ ಅಂತಾರ

ವ. ರಾಯ್ರು:— ನಾನು ತಗಿಯೋದು ಅಲ್ಲ, ಯಾಕ ತಗೀಬಾರದು ... I have no objection to give service ನನ್ನೇನಂತೀರಿ, ಕೆಲಸ ... ಕೊಡೋದು.

ಗೃಹಸ್ಥ ೧+೨:— ಖರೇನೇ, ... ಒಂದು ಪ್ರಾಮಾಣಿಕ ಪೇಪರ್ ಬೇಕೇ ಬೇಕು ನೋಡಿರಿ.

ವ ರಾಯ್ರು: - ಈಗ ನೋಡಿ, ಈ ಹೊತ್ತು ಸಂಜೆಗೆ ನೀವು ಮೀಟಿಂಗನ್ನು ಸುರುವಿಗೆ ಆ ಇವರ ಕಡಿಂದ ಹಾಡು ... ಸ್ತ್ರೀ ಬರೋದಿಲ್ಲ ... ವ್ಯಾಳ್ಯಾಕ ... ಮಾಡ್ತೀರಿ. ಇವೆಲ್ಲ ಮುಖ್ಯ ... public ಮಾಡಿದ್ರ ಉಪಯೋಗ ... ಅಂತಾ ಅದಕ್ಕೇ ಯಾವು ಪದಗಳು ... ದಿಲ್ಲ ನೋಡ್ರಿ ಯಾಕೊ, ಸುಬ್ಬು? ... ಸುಬ್ಬುಗ.

ಸುಬ್ಬು:- ನಂ ರಾಯ್ರಿಗೆ ಒಂದು ... ವ್ಯಾಳ್ಯಾ ... ಇದ್ದರು ... ಪ್ಲೆಂಟಿ ಬೇಕಾಗಿತ್ತು...

ವ. ರಾಯ್ರು: - (in humility) ... ಗೊಂದಿಲ್ಲೇನು, ಸುಬ್ಬು? (ಗೃಹಸ್ಥರಿಗೆ) ನೋಡಿರಿ, ಮಾಡ್ಬೇಕಾದ್ದು ಯಾವ ... ಹೊಡ್ದದು? ಹೇಳಕೆಳಿಯೋದಂತ ... Give me just half a-dozen-

ಗೃಹಸ್ಥ ೧:-(ನಡುವೆಯೆ) ಪುಸ್ತಕ ... ಬೇಕು?

ಗೃಹಸ್ಥ ೨.- ಆಹುದು, ಭಾಷಣ ... ಮಾಡ್ಲಿಕ್ಕೆ ಬೇಕಲ್ಲ?

ಸುಬ್ಬು:— ಅವರು ಬೇಡೋದು..

ವ. ರಾಯ್ರು: half-a-dozen first class brains! (ಎಂದು ತನ್ನ ... ಲ್ಲಿಯೆ ಧ್ಯಾನಸ್ಥನಾದವನಂತೆ ಕಣ್ಣು ಮುಚ್ಚುವನು.)

ಗೃಹಸ್ಥ ೧:- (ಸು. ಗೆ, ಕಳ್ವಳದಿಂದ) ಮುಂದುಯಿಯೊಳಗೂ ಹೀಂಗೇ ಮಾಡ್ತಾರೆ?

ಗೃಹಸ್ಥ ೨:- ಒಂದು ರುಂಡಕ್ಕೆ ... ಬೋರ್ಡ ಅಂತ ಕೊಟ್ಟೀ ಬಿಟ್ಟಿದ್ದರಂತ.

ಗೃಹಸ್ಥ ೧:- ರಾಯರಿಗೆ ಅರು ದೊಡ್ಡ ಪಿಳೇ ಹಟ ಬಿದ್ದಿದೆ.

ಗೃಹಸ್ಥ ೨:- ಬೇಕೇಕು ಇಂಥವರು

[ಸುಬ್ಬು ಇದುವರೆಗೆ pendulum ... ಒಟ್ಟಿಬ್ಬರು ಮಾತನಾಡುವಾಗ ಅವರ ... ನೋಡುತ್ತಿದ್ದ, ಏನೂ ತಿಳಿಯದೆ, ... ನಾ?]

ಸುಬ್ಬು:- ಏನು, ಏನಂತೀರಿ ನೀವು!

ಗೃಹಸ್ಥ ೧..೨:- ... ದಂಗೆ ಎಬ್ಬಿಸಲಿ ಅಂತ ಅನ್ನುವಲ್ಲೊ..?

ಸುಬ್ಬು:- (ಸೋತು) ಜೀವಂತ brains ... ರಾಯ್ರು ದೇಶೋದ್ಧಾರ!

(ಗೃಹಸ್ಥರಿಬ್ಬರೂ ಗಾಬರಿಯಾಗಿ ... ವನು) ಕೆ-ಕೆ-ಕೆ-ಕೆ-ಕೇ-ಕೈ-ಕೈ!

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟ" ಪರವಾಗಿ ಹ. ರಾ. ಪುರೋಹಿತರು ಮುದ್ರಿಸಿ ಪ್ರಕಟಿಸಿದರು.